

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 18 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 32 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮುಂದಿನ ಚುನಾವಣೆಯಲ್ಲಿ 80 ಸ್ಥಾನಗಳಲ್ಲಿ ಜೆಡಿಎಸ್ ಗೆಲುವು

ರಾಜ್ಯದಲ್ಲಿ ಜನಪರ ಮೈತ್ರಿ ಸರ್ಕಾರ ಅಧಿಕಾರಕ್ಕೆ

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ 'ಜನರೊಂದಿಗೆ ಜನತಾ ದಳ' ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಭವಿಷ್ಯ

ಮೈಸೂರು, ಮೇ 17(ಎಂಕೆ)– ಮುಂದಿನ 2028ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ 75 ರಿಂದ 80 ಕ್ಷೇತ್ರಗಳಲ್ಲಿ ಗೆಲ್ಲಲಿದ್ದು, ಜನಪರವಾದ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭವಿಷ್ಯ ನುಡಿದಿದ್ದಾರೆ.

ಮೈಸೂರಿನ ಬೋಗಾದಿ ರಿಂಗ್ ರಸ್ತೆಯಲ್ಲಿರುವ ನಾಗಲಿಂಗೇಶ್ವರ–ಬೋಗೇಶ್ವರ ದೇವಸ್ಥಾನದ ಎದುರಿನ ಮೈದಾನದಲ್ಲಿ ಭಾನುವಾರ ನಡೆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ 'ಜನರೊಂದಿಗೆ ಜನತಾದಳ' ಬೃಹತ್ ವೇದಿಕೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಇನ್ನೆರಡು ವರ್ಷದಲ್ಲಿ ನಿಮ್ಮೆಲ್ಲರ ಆಶೀರ್ವಾದದೊಂದಿಗೆ ನಿಮ್ಮದೇ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ ಎಂಬುದು ನನಗೆ ಗೊತ್ತಿದೆ ಎನ್ನುವ ಮೂಲಕ ಮೈತ್ರಿ ಸರ್ಕಾರ ರಚನೆಯಾಗಲಿದೆ ಎಂದು ಸೂಚ್ಯವಾಗಿ ತಿಳಿಸಿದರು. ಜೆಡಿಎಸ್ ಪಕ್ಷವನ್ನು ಮುಗಿಸಿದ್ದೇವೆ. ನಾನಿದ್ದಾಗ 58 ಸೀಟ್ ಗೆದ್ದಿದ್ದೋ.. ಇವತ್ತು 17 ಸೀಟ್‌ಗೆ ಬಂದಿದೆ ಎಂದು ಪದೇ ಪದೆ ಮಾತನಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೆಸರೇಳದೆ ಕುಟುಕಿದ ಕುಮಾರಸ್ವಾಮಿ, ಕುತಂತ್ರ ರಾಜಕಾರಣದಿಂದ 17 ಸೀಟ್‌ಗೆ ಜೆಡಿಎಸ್ ಇಳಿದಿರಬಹುದು, ಆದರೆ ರಾಜ್ಯದಲ್ಲಿಂದು 75–80 ಸೀಟ್‌ಗಳನ್ನು ಗೆಲ್ಲುವ ವಿಶ್ವಾಸವಿದೆ. ಕಳೆದ ಐದಾರು ತಿಂಗಳಿಂದ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದ ಮೂಲಕ ಪಕ್ಷಕ್ಕೆ ಪುನಶ್ಚೇತನ ನೀಡಲಾಗಿದೆ ಎಂದು ಹೇಳಿದರು. ಲಕ್ಷಾಂತರ ಮಂದಿ ನಿಷ್ಠಾವಂತ ಕಾರ್ಯಕರ್ತರು ■6ನೇ ಪುಟಕ್ಕೆ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಕುರ್ಚಿ ಡ್ರಾಮ ಕೊನೆ ಹಂತಕ್ಕೆ ಬಂದಿದೆ

ಮೂರು ವರ್ಷಗಳಿಂದ ಜನರ ಸಮಸ್ಯೆಗೆ ಗಮನ ಕೊಡದೆ ಕುರ್ಚಿಗಾಗಿ ನಡೆಯುತ್ತಿರುವ ಡ್ರಾಮ ಕೊನೆ ಹಂತಕ್ಕೆ ಬಂದಿದೆ. ರೈತರ ಕಷ್ಟವೇನು, ಬೆಳೆ ನಷ್ಟ ಏನಾಗಿದೆ ಎಂಬುದನ್ನು ಕೇಳುವ ಕನಿಷ್ಠ ಕಾಳಜಿಯೂ ರಾಜ್ಯ ಸರ್ಕಾರಕ್ಕೆ ಇಲ್ಲವಾಗಿದೆ. ಆದ್ದರಿಂದ ಮುಂದಿನ ಮೈತ್ರಿಯ ಸರ್ಕಾರದಲ್ಲಿ ಜನಪರವಾದ ಕಾರ್ಯಕ್ರಮಗಳ ಜೊತೆಗೆ ಜನರ ಭಾವನೆಗಳಿಗೆ ಯಾವ ರೀತಿಯ ಯೋಜನೆಗಳನ್ನು ತರಬೇಕು ಎಂದು ಕೆಲಸ ಮಾಡುತ್ತಿದ್ದೇವೆ.

-ಹೆಚ್.ಡಿ.ಕುಮಾರಸ್ವಾಮಿ

ಜೆಡಿಎಸ್ ಭರ್ಜರಿ ಶಕ್ತಿ ಪ್ರದರ್ಶನ...

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರವು ಜೆಡಿಎಸ್‌ನ ಭದ್ರಕೋಟೆ ಎಂಬುದನ್ನು ಸಾಕ್ಷೀಕರಿಸಿದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಸಾ.ರಾ.ಮಹೇಶ್, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕರಾದ ಜಿ.ಡಿ.ಹರೀಶ್ ಗೌಡ, ಸಿ.ಎನ್.ಮಂಜೇಗೌಡ, ಜಿಲ್ಲಾಧ್ಯಕ್ಷ ಅಶ್ವಿನ್‌ಕುಮಾರ್ ಸೇರಿದಂತೆ ಇನ್ನಿತರೆ ಪ್ರಮುಖ ನಾಯಕರು ಜೆಡಿಎಸ್‌ನ ಶಕ್ತಿ ಪ್ರದರ್ಶಿಸಿದರು.

ತಂಡೋಪ ತಂಡವಾಗಿ ಹರಿದು ಬಂದ ಜನ ಸಮೂಹದ ನಡುವೆ ಜೆಡಿಎಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳಿಂದ ಬಗೆ ಬಗೆ ಹಣ್ಣುಗಳ ಅಭಿಮಾನದ ಬೃಹತ್ ಹಾರಗಳ ಸ್ವೀಕರಿಸಿ, ರೋಡ್ ಶೋ ಮೂಲಕ ವೇದಿಕೆಗೆ ಆಗಮಿಸಿದ ಜೆಡಿಎಸ್ ನಾಯಕರು, ಒಗ್ಗಟ್ಟಿನ ಬಲ ಪ್ರದರ್ಶಿಸುವ ಮೂಲಕ ವಿರೋಧಿಗಳಿಗೆ ಎಚ್ಚರಿಕೆ ಸಂದೇಶ ನೀಡಿದರು.

ಎಬೋಲಾ ಸೋಂಕಿನಿಂದ ಕಾಂಗೋದಲ್ಲಿ 88 ಮಂದಿ ಸಾವು

ಜಾಗತಿಕ ಆರೋಗ್ಯ ತುರ್ತುಸ್ಥಿತಿ ಘೋಷಣೆ

ಕಿನ್ಶಾಸಾ: ಕಾಂಗೋದಲ್ಲಿ ಎಬೋಲಾ ವೈರಸ್‌ಗೆ 88 ಮಂದಿ ಸಾವಿಗೀಡಾದ ಬೆನ್ನಲ್ಲೇ ವಿಶ್ವ ಆರೋಗ್ಯ ಸಂಸ್ಥೆ ಅಂತರರಾಷ್ಟ್ರೀಯ ಆರೋಗ್ಯ ತುರ್ತುಸ್ಥಿತಿ ಘೋಷಿಸಿದೆ. ರವಾಂಡ ಬೆಂಬಲಿತ ಎಂ23 ಬಂಡುಕೋರ ಸಂಘಟನೆಯ ನಿಯಂತ್ರಣದಲ್ಲಿರುವ ಗೋಮಾದ ಡಿಆರ್‌ಸಿ ನಗರದಲ್ಲೂ ಎಬೋಲಾ ಪ್ರಕರಣಗಳು ಪತ್ತೆಯಾಗಿದ್ದು, ■6ನೇ ಪುಟಕ್ಕೆ





ಮೈಸೂರು ಮಿತ್ರ

ಸೋಮವಾರ 18 ಮೇ 2026

ನಕಲಿ ಇ-ಮೇಲ್ ಮೂಲಕ ಮೈಸೂರಿನ ಉದ್ಯಮಿಗೆ 35.94 ಲಕ್ಷ ರೂ. ವಂಚನೆ

ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಮೇ 17(ಜಿಎ)–ನಕಲಿ ಇ-ಮೇಲ್ ಮೂಲಕ ಮೈಸೂರಿನ ಉದ್ಯಮಿಗೆ 35.94 ಲಕ್ಷ ರೂ. ವಂಚಿಸಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಜಿಲ್ಲೆಯ ಬೆಳವಾಡಿಯ ಕೈಗಾರಿಕಾ ಪ್ರದೇಶದಲ್ಲಿರುವ ಡಿಜಿಟಲ್ ಪವರ್ ಸಪ್ಲೈ, ನವೀಕರಿಸಬಹುದಾದ ಇಂಧನ ವ್ಯವಸ್ಥೆಗಳು ಹಾಗೂ ಆಟೊಮೇಶನ್ ಉತ್ಪನ್ನಗಳ ತಯಾರಿಕೆ, ಪೂರೈಕೆ ಮತ್ತು ಮಾರಾಟೋತ್ತರ ಸೇವೆಯಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಯೂ ಥೈಲ್ಯಾಂಡ್‌ನ ಕಂಪನಿಯಿಂದ ಮೈಕ್ರೋ ಕಂಟ್ರೋಲರ್‌ಗಳನ್ನು ಆನ್‌ಲೈನ್ ಮೂಲಕ ಖರೀದಿಸುತ್ತಿತ್ತು.

ಸಾಮಾನ್ಯವಾಗಿ ಪಾವತಿಯನ್ನು ಕಂಪನಿ ಹೆಸರಿನಲ್ಲಿರುವ ತೈವಾನ್‌ನ ಮೇಗಾ ಇಂಟರ್‌ನ್ಯಾಷನಲ್ ಕಮರ್ಷಿಯಲ್ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾವಣೆ ಮಾಡುತ್ತಿದ್ದರು. ನಂತರದ ದಿನಗಳಲ್ಲಿ ಇವರ ಕಂಪನಿಗೆ ಥೈಲ್ಯಾಂಡ್ ಕಂಪನಿ ಫೈನಾನ್ಸ್ ವಿಭಾಗದ ವ್ಯಕ್ತಿಯೊಬ್ಬರ ಹೆಸರಿನಲ್ಲಿ ಇ-ಮೇಲ್ ಬಂದಿದ್ದು, ಬ್ಯಾಂಕ್ ಖಾತೆ ವಿವರಗಳು ಬದಲಾಗಿರುವುದಾಗಿ ತಿಳಿಸಲಾಗಿದೆ. ವಂಚಕರು ನಕಲಿ ಡೊಮೇನ್ ಬಳಸಿ ಇ-ಮೇಲ್ ಕಳುಹಿಸಿದ್ದಾರೆ. ನಂತರ ವಂಚಕರ ಸೂಚನೆಯಂತೆ ಮೈಸೂರಿನ ಕಂಪನಿಯವರು 2026ರ ಮಾ.17ರಂದು ಸುಮಾರು 20,824.33 ಅಮೆರಿಕನ್ ಡಾಲರ್ (ಸುಮಾರು ರೂ. 19.32 ಲಕ್ಷ) 2026ರ ಮಾರ್ಚ್ 31ರಂದು 17,601.20 ಅಮೆರಿಕನ್ ಡಾಲರ್ (ಸುಮಾರು ರೂ. 16.62 ಲಕ್ಷ) ಒಟ್ಟು ಸುಮಾರು 35.94 ಲಕ್ಷ ಹಣವನ್ನು ಬ್ಯಾಂಕ್ ಖಾತೆಗೆ ಎರಡು ಹಂತಗಳಲ್ಲಿ ಹಣ ವರ್ಗಾವಣೆ ಮಾಡಿದ್ದಾರೆ.

ನಂತರ ಏಪ್ರಿಲ್ 21ರಂದು ನಿಜವಾದ ಮೈಕ್ರೋಚಿಪ್ ಪ್ರತಿನಿಧಿಯೊಂದಿಗೆ ನಡೆದ ಇ-ಮೇಲ್ ಸಂವಹನದಲ್ಲಿ ವಂಚನೆ ನಡೆದಿರುವುದು ಬಹಿರಂಗವಾಗಿದೆ. ತಕ್ಷಣವೇ ಮೈಸೂರಿನ ಕಂಪನಿಯೂ ಎಸ್‌ಬಿಐ ಬ್ಯಾಂಕ್ ಮೂಲಕ ಹಣ ಹಿಂಪಡೆಯಲು (ಫಂಡ್ ಕಾಲ್ ಬ್ಯಾಕ್) ಪ್ರಯತ್ನಿಸಿದರೂ ಅದು ವಿಫಲವಾಗಿದೆ. ಈ ಸಂಬಂಧ ಅಪರಿಚಿತ ಸೈಬರ್ ವಂಚಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಲಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಮೂವರು ಗಾಂಜಾ ಪೆಡ್ಲರ್‌ಗಳ ಬಂಧನ

15 ಲಕ್ಷ ರೂ. ಮೌಲ್ಯದ ಗಾಂಜಾ, ಕಾರು ವಶ

ಮೈಸೂರು, ಮೇ 17(ಜಿಎ)–ಕಾರಿನಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರು ಪೆಡ್ಲರ್‌ಗಳನ್ನು ಬಂಧಿಸಿ, 15 ಲಕ್ಷ ರೂ. ಮೌಲ್ಯದ ಗಾಂಜಾ ಹಾಗೂ ಒಂದು ಕಾರನ್ನು ಸಿಸಿಬಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮೈಸೂರು ನಗರ ಪೊಲೀಸ್ ಮಾದಕ ವ್ಯಸನ ಮುಕ್ತ ಮೈಸೂರು ಅಭಿಯಾನ 'ವಿಮುಕ್ತಿ' ಕಾರ್ಯಾಚರಣೆ ಸಂಬಂಧ ಗಸ್ತಿನಲ್ಲಿದ್ದಾಗ ಸ್ವಿಫ್ಟ್ ಕಾರಿ(ಕೆಎ–02 ಎಸಿ–1471)ನಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಗಾಂಜಾ ಪೆಡ್ಲರ್‌ಗಳಾದ ಮಂಜುನಾಥ್ @ ತೋಟಿ ಮಂಜ @ ಅಲಿಂ, ಮಂಜುನಾಥ್ @ ಕುಂಟ ಮಂಜ, ಕಾರ್ತಿಕ್. ಬಿ.ಆರ್ @ ಅಪ್ಪಾಜಿ ಎಂಬುವರನ್ನು ಬಂಧಿಸಿ 10 ಲಕ್ಷ ರೂ ಮೌಲ್ಯದ 10 ಕೆ.ಜಿ 90 ಗ್ರಾಂ ಗಾಂಜಾ ಮತ್ತು 5 ಲಕ್ಷ ರೂ. ಮೌಲ್ಯದ ಕಾರನ್ನು ವಶಪಡಿಸಿಕೊಂಡಿದ್ದಾರೆ.

ಈ ಪ್ರಕರಣದಲ್ಲಿ ಮಂಜುನಾಥ್ ಅಲಿಯಾಸ್ ತೋಟಿ ಮಂಜ @ ಅಸ್ಲಿಂ ಎಂಬುವನ ವಿರುದ್ಧ ಈಗಾಗಲೇ 2 ಎನ್‌ಡಿಪಿಎಸ್ ಪ್ರಕರಣ, ಮಂಜುನಾಥ @ ಕುಂಟ ಮಂಜ ಎಂಬುವನ ವಿರುದ್ಧ 1 ಪ್ರಕರಣ ಆರೋಪಿಗಳಾಗಿ ನ್ಯಾಯಾಂಗ ಬಂಧನದಲ್ಲಿದ್ದು ಜಾಮೀನು ಪಡೆದು ಹೊರಗೆ ಬಂದು ಮತ್ತೆ ಗಾಂಜಾ ಮಾರಾಟದ ಜಾಲಿ ಮುಂದುವರೆಸಿದ್ದರು. ಕಾರ್ಯಾಚರಣೆಯಲ್ಲಿ ಸಿಸಿಬಿ ಘಟಕದ ಎಸಿಪಿ ಮಹಮ್ಮದ್ ಶರೀಫ್ ರಾವುತರ್, ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಪಿಎಸ್‌ಐ ಲೇಪಾಕ್ಷ, ರೇವಣಸಿದ್ದಪ್ಪ, ಸಿಬ್ಬಂದಿ ಮಧುಕುಮಾರ್, ಚೇತನ್, ಅದಂ, ಸಂತೋಷ್ ಪವಾರ್, ದೇವರಾಜ ರಾಜೇಸಾಬ, ಸಮೀರ್, ಹಜರತ್ ಅಲಿ ನಾಯ್ಕರ್, ಯಶವಂತ ಕುಮಾರ, ಸಿದ್ದರಾಜು ಪಾಲ್ಗೊಂಡಿದ್ದರು.

ಹೊಸ ಗುಡ್ಡಪ್ಪರ ಆಯ್ಕೆ...




ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕು ಸೋಸಲೆ ಹೋಬಳಿ ಗಾಣಿಗನಕೊಪ್ಪಲಿನ ಆದಿಶಕ್ತಿ ಕಾಳಮ್ಮ ದೇವಸ್ಥಾನಕ್ಕೆ ಗುಡ್ಡಪ್ಪರನ್ನು ಆಯ್ಕೆ ಮಾಡಿ, ವಿಶೇಷ ಪೂಜೆ ನೆರವೇರಿಸಲಾಯಿತು. ಬಳಿಕ ನೂರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು.

ಇಂದಿನಿಂದ ಶ್ರೀಕೃಷ್ಣ ಮಿತ್ರ ಮಂಡಳಿ 50ನೇ ಸುವರ್ಣ ಸಂಭ್ರಮಾಚರಣೆ



ಸುಭುಧೇಂದ್ರ ತೀರ್ಥ ಸ್ವಾಮೀಜಿ



ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ

ಮೈಸೂರು, ಮೇ 17(ಜಿಎ)–ಮೈಸೂರಿನ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಮೇ 18ರಿಂದ 20ರವರೆಗೆ ಶ್ರೀಕೃಷ್ಣ ಮಿತ್ರ ಮಂಡಳಿಯ 50ನೇ ಸುವರ್ಣ ಸಂಭ್ರಮಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 18ರಂದು ಸಂಜೆ 5.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಮಂತ್ರಾಲಯದ ರಾಘವೇಂದ್ರಸ್ವಾಮಿ ಮಠದ ಪೀಠಾಧಿಪತಿ ಸುಭುಧೇಂದ್ರ ತೀರ್ಥ ಸ್ವಾಮೀಜಿ, ಉಡುಪಿ ಪೇಜಾವರ ಮಠದ ಪೀಠಾಧಿಪತಿ ವಿಶ್ವ ಪ್ರಸನ್ನತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ ಭಾಗ ವಹಿಸುವರು. ಈ ಸಂದರ್ಭ ಪತ್ರಕರ್ತ ರವೀಂದ್ರ ಜೋಶಿ ಅವರಿಗೆ 'ಶ್ರೀಕೃಷ್ಣಾನುಗ್ರಹ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಂಜೆ 7 ಗಂಟೆಗೆ ಪುತ್ತೂರು ಜಗದೀಶ್ ಆಚಾರ್ಯ ಮತ್ತು ತಂಡದವರಿಂದ 'ಭಕ್ತಿ ಸುಧೆ' ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದರು.

19ರಂದು ಸಂಜೆ 5 ಗಂಟೆಗೆ ಉತ್ತರಾದಿ ಮಠದ ಸತ್ಯಾತ್ಮತೀರ್ಥ ಸ್ವಾಮೀಜಿ ಆಶೀರ್ವಚನ ನೀಡುವರು. ಸಂಜೆ 7 ಗಂಟೆಗೆ ಗಾಯಕಿ ಎಂ.ಡಿ.ಪಲ್ಲವಿ ಮತ್ತು ತಂಡದವರಿಂದ 'ಭಾವ ಸುಧೆ' ಸಾಂಸ್ಕೃತಿಕ ಕಾರ್ಯಕ್ರಮವು ಇರಲಿದೆ. ಮೇ 20ರಂದು ಸಂಜೆ 5 ಗಂಟೆಗೆ ಸುವರ್ಣ ಸಂಭ್ರಮ ಸಮಾರೋಪ ಸಮಾರಂಭ ನಡೆಯಲಿದ್ದು, ಪುತ್ತಿಗೆ ಮಠದ ಪೀಠಾಧಿಪತಿ ಸುಗುಣೇಂದ್ರ ತೀರ್ಥ ಸ್ವಾಮೀಜಿ ಉಪ ಸ್ಥಿತರಿರುವರು. ಶಾಸಕ ಕೆ.ಹರೀಶ್ ಗೌಡ ಅತಿಥಿಯಾಗಿ ಪಾಲ್ಗೊಳ್ಳುವರು. ಸನ್ಮಾನ ಸಮಾರಂಭ ನಡೆಯಲಿದ್ದು, ಬಳಿಕ ಕೊಳಲು ಮಾಂತ್ರಿಕ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಮತ್ತು ತಂಡದಿಂದ 'ರಾಗ ಸುಧೆ' ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಡಳಿಯ ಎನ್.ಗೋಪಾಲಕೃಷ್ಣ, ಶ್ರೀವತ್ಸ, ಪಿ.ಎಸ್.ಶೇಖರ್, ಕೆ.ವಿ.ಶ್ರೀಧರ್, ಜಯರಾಮ್ ಭಟ್, ಗುರುಪ್ರಸಾದ್ ಉಪಸ್ಥಿತರಿದ್ದರು.

ಸೇಂಟ್ ಫಿಲೋಮಿನಾ ಕಾಲೇಜು ವತಿಯಿಂದ ಯುಪಿಎಸ್‌ಸಿ ಪರೀಕ್ಷೆ ತರಬೇತಿ ಆರಂಭ

ಮೈಸೂರು, ಮೇ 17(ಜಿಎ)–ಸೇಂಟ್ ಫಿಲೋಮಿನಾ ಕಾಲೇಜು ಮತ್ತು ಎಸ್.ಆರ್. ಇಂಡಿಯನ್ ಐಎಎಸ್ ಅಕಾಡೆಮಿ ವತಿಯಿಂದ ಇಂಟಿಗ್ರೇಟೆಡ್ ಪದವಿಯೊಂದಿಗೆ ಯುಪಿಎಸ್‌ಸಿ ಪರೀಕ್ಷೆ ತರಬೇತಿ ಕಾರ್ಯಕ್ರಮ ಪ್ರಾರಂಭಿಸಲಾಗಿದೆ ಎಂದು ರೆಕ್ಟರ್ ರೆವರೆಂಡ್ ಡಾ.ಲೂರ್ದು ಪ್ರಸಾದ್ ಜೋಸೆಫ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಕಾಲೇಜು ಶಿಕ್ಷಣದ ಜೊತೆಗೆ ನಾಗರಿಕ ಸೇವೆಗಳ ಪರೀಕ್ಷೆಗೂ ಏಕಕಾಲದಲ್ಲಿ ಸಿದ್ಧತೆ ನಡೆಸಲು ಅನುವು ಮಾಡಿಕೊಡಲಾಗುತ್ತದೆ. ಪದವಿಯ 3 ವರ್ಷಗಳ ಅವಧಿಯಲ್ಲಿ ಶೈಕ್ಷಣಿಕ ಅಧ್ಯಯನದ ಜೊತೆಗೆ ಯುಪಿಎಸ್‌ಸಿ ಪಠ್ಯಕ್ರಮವನ್ನು ಪೂರ್ಣಗೊಳಿಸಲು ಸಹಾಯವಾಗಲಿದೆ ಎಂದರು.

ಅಕಾಡೆಮಿಯ ವ್ಯವಸ್ಥಾಪಕ ನಿರ್ದೇಶಕ ಪಟೇಲ್ ಎಸ್.ರಮೇಶ್‌ಗೌಡ ಮಾತನಾಡಿ, ಐಎಎಸ್, ಐಪಿಎಸ್, ಐಎಫ್‌ಎಸ್, ಐಆರ್‌ಎಸ್ ಮತ್ತು ಇತರ ಸ್ಪರ್ಧಾತ್ಮಕ ಸೇವೆಗಳನ್ನು ಒಳಗೊಂಡಂತೆ ಪ್ರತಿಷ್ಠಿತ ನಾಗರಿಕ ಸೇವೆಗಳ ಪರೀಕ್ಷೆಗಳಿಗೆ ಸಮಗ್ರ ತರಬೇತಿಯೊಂದಿಗೆ ಸಂಯೋಜಿತವಾದ ಗುಣಮಟ್ಟದ ಪದವಿ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಈ ಕಾರ್ಯಕ್ರಮ ವಿನ್ಯಾಸಗೊಳಿಸಲಾಗಿದೆ. ವಿಕಸಿತ ಭಾರತ 2047 ಅಡಿಯಲ್ಲಿ ಭವಿಷ್ಯದ ರಾಷ್ಟ್ರ ನಿರ್ಮಾಣಕಾರರನ್ನು ಸಬಲೀಕರಣಗೊಳಿಸುವುದು ಮುಖ್ಯ ಉದ್ದೇಶ ಎಂದರು.

ನಾಗರಿಕ ಸೇವಾ ಮಹತ್ವಾಕಾಂಕ್ಷೆಗಳೊಂದಿಗೆ ಶೈಕ್ಷಣಿಕ ಬೆಳವಣಿಗೆ ಸಂಯೋಜಿಸುವ ಒಂದು ಅನನ್ಯ ಅವಕಾಶ ಇದಾಗಿದೆ. ವಿದ್ಯಾರ್ಥಿಗಳು ಶೈಕ್ಷಣಿಕ ಶ್ರೇಷ್ಠತೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯನ್ನು ವ್ಯವಸ್ಥಿತವಾಗಿ ಸಮತೋಲನಗೊಳಿಸಲು ಸಹಾಯ ಮಾಡುವ ಗುರಿ ಸಂಸ್ಥೆ ಹೊಂದಿದೆ. ಇದನ್ನು ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಭಾರತದ ಸ್ನೇಹ ಸಂದೇಶ ಸಾರಲು ಮೈಸೂರು ಟು ಲಂಡನ್ ಬೈಕ್ ಯಾತ್ರೆ

ಮೈಸೂರು, ಮೇ17(ಬಿಎಲ್‌ಯು)–ವಿವಿಧ ದೇಶಗಳಲ್ಲಿ ಭಾರತದ ಸ್ನೇಹ ಸಂದೇಶ ಸಾರಲು ಮೈಸೂರಿನ ಉದ್ಯಮಿಯೊಬ್ಬರು ಮೈಸೂರು ಟು ಲಂಡನ್ ಬೈಕ್ ಯಾತ್ರೆಯನ್ನು ಭಾನುವಾರ ಆರಂಭಿಸಿದರು.



ನಾಗಾರ್ಜುನ ಅನಂತ ಭಗವಾನ್

ಮೈಸೂರಿನ ಉದ್ಯಮಿ ನಾಗಾರ್ಜುನ ಅನಂತ ಭಗವಾನ್ ಎಂಬುವರೆ ಮೈಸೂರಿನಿಂದ ಲಂಡನ್‌ಗೆ ಬೈಕ್‌ನಲ್ಲಿ ಯಾತ್ರೆ ಹೊರಟವರಾಗಿದ್ದಾರೆ. ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಸಂಸದ ಯದುವೀರ್ ಅವರು ನಾಗಾರ್ಜುನ ಅನಂತ ಭಗವಾನ್ ಅವರ ಬೈಕ್ ಯಾತ್ರೆಗೆ ಚಾಲನೆ ನೀಡಿದರು.



ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಭಾನುವಾರ ಮೈಸೂರಿನಿಂದ ಲಂಡನ್‌ಗೆ ಹೊರಟ ಉದ್ಯಮಿ ನಾಗಾರ್ಜುನ ಅನಂತ ಭಗವಾನ್ ಅವರ ಬೈಕ್ ಯಾತ್ರೆಗೆ ಸಂಸದ ಯದುವೀರ್ ಅವರು ಚಾಲನೆ ನೀಡಿದರು.

ಮೋಟಾರ್ ಸೈಕ್ಲಿಂಗ್ ಹಾಗೂ ಪ್ರಯಾಣದ ಬಗ್ಗೆ ಹೆಚ್ಚು ಉತ್ಸಾಹ ಹೊಂದಿರುವ ಭಗವಾನ್ ಅವರು ಮೈಸೂರಿನಿಂದ 20 ಸಾವಿರ ಕಿಲೋ ಮೀಟರ್ ಸಾಗಿ ಲಂಡನ್ ತಲುಪಲಿದ್ದಾರೆ. ಭಗವಾನ್ ಅವರು ಏಕ ವ್ಯಕ್ತಿಯಾಗಿ ಬೈಕ್‌ನಲ್ಲಿ ಯಾತ್ರೆ ಹೊರಟಿದ್ದು, ನೇಪಾಳ, ಟಿಬೆಟ್, ಚೀನಾ, ಕಝಕಿಸ್ತಾನ್, ರಷ್ಯಾ, ಪೋಲೆಂಡ್, ಚೆಕ್ ಗಣರಾಜ್ಯ, ಆಸ್ಟ್ರೀಯಾ, ಹಂಗೇರಿ, ಇಟಲಿ, ಸ್ವಿಜರ್‌ಲ್ಯಾಂಡ್, ಜರ್ಮನಿ, ನೆದರ್ ಲ್ಯಾಂಡ್, ಬೆಲ್ಜಿಯಂ ಹಾಗೂ ಫ್ರಾನ್ಸ್ ಮೂಲಕ 20 ಸಾವಿರ ಕಿಲೋ ಮೀಟರ್ ಸಾಗಿ 60 ದಿನಗಳಲ್ಲಿ ಲಂಡನ್ ಸೇರಲಿದ್ದಾರೆ.

ತಮ್ಮ ಈ ಪ್ರಯಾಣವು ಬೈಕ್ ಚಾಲನೆ ಸಾಹಸವಲ್ಲ, ಬದಲಾಗಿ ವಿವಿಧ ದೇಶಗಳ ಜನರನ್ನು ಭೇಟಿ ಮಾಡುವುದು, ಸಂಸ್ಕೃತಿಯನ್ನು ಮನಗಾಣುವುದು, ಆಯಾ ದೇಶದ ಜನರೊಂದಿಗೆ ಭಾರತದ ಸ್ನೇಹ ಸಂಬಂಧವನ್ನು ಗಟ್ಟಿಗೊಳಿಸುವುದಾಗಿದೆ.

ಭಗವಾನ್ ಅವರು ಸಂಚಾರ ಮಾಡುವ ಸ್ಥಳಗಳಲ್ಲಿ ಅಂತರರಾಷ್ಟ್ರೀಯ ಮೋಟಾರ್ ಸೈಕ್ಲಿಂಗ್ ರೋಟೇರಿಯನ್ಸ್ ಸದಸ್ಯರು, ರೋಟರಿಯನ್‌ಗಳು ಸಂಪರ್ಕ ಸಾಧಿಸಲಿದ್ದಾರೆ. ಭಗವಾನ್ ಅವರ ಹಲವು ಸ್ನೇಹಿತರು ಶ್ರೀರಂಗಪಟ್ಟಣದವರೆಗೆ ಜೊತೆಯಾಗಿ ಹೋಗಿ ಮುಂದಿನ ನಿಮ್ಮ ಪ್ರಯಾಣ ಸುಖಕರವಾಗಿರಲಿ ಎಂದು ಶುಭ ಹಾರೈಸಿದರು.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2

ಪರೀಕ್ಷಾ ಕೇಂದ್ರದ ಸುತ್ತಲೂ ನಿಷೇಧಾಜ್ಞೆ

ಮೈಸೂರು, ಮೇ 17–ಮೇ 18ರಿಂದ 25ರವರೆಗೆ ನಗರದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ನಡೆಯಲಿದ್ದು, ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಹಾಗೂ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ಸೆಕ್ಷನ್ 163 ರೀತ್ಯ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಪರೀಕ್ಷಾ ಕೇಂದ್ರಗಳು: ಮೆಜೆಸ್ಟಿಕ್ ಪ್ರೌಢಶಾಲೆ, ಉದಯಗಿರಿ ಮೈಸೂರು, ಡಿ. ಬನುಮಯ್ಯ ಬಾಲಕರ ಪ್ರೌಢ ಶಾಲೆ, ನ್ಯೂ ಸಯ್ಯಾಜಿರಾವ್ ರಸ್ತೆ ಮೈಸೂರು, ಶ್ರೀ ವಿದ್ಯಾಜ್ಯೋತಿ ಪ್ರೌಢಶಾಲೆ, ನಾಡನಹಳ್ಳಿ ಮೈಸೂರು ಈ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರದ ಗೋಮಾಳಕ್ಕೆ ಸಾಗುವಳಿ ಚೀಟಿ ಕೊಟ್ಟಿದ್ದರೂ ಹಕ್ಕು ಪತ್ರ ನೀಡುತ್ತಿಲ್ಲ

ಪ್ರಜಾ ಪಾರ್ಟಿ ರೈತ ಪರ್ವ ಆರೋಪ

ಮೈಸೂರು, ಮೇ 17(ಜಿಎ)–ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ, ಸರಗೂರು, ಪಿರಿಯಾಪಟ್ಟಣ, ನಂಜನಗೂಡು, ಟಿ.ನರಸೀಪುರ ಹಾಗೂ ಕೆ.ಆರ್. ನಗರ ತಾಲೂಕುಗಳಲ್ಲಿ ಸರ್ಕಾರದ ಗೋಮಾಳದಲ್ಲಿ ಸುಮಾರು 50–60 ವರ್ಷಗಳಿಂದ ಕೃಷಿ ಮಾಡುತ್ತಿರುವ ರೈತರಿಗೆ ಸಾಗುವಳಿ ಚೀಟಿ ಕೊಟ್ಟಿದ್ದರೂ ಹಕ್ಕುಪತ್ರ ನೀಡಲು ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಕರ್ನಾಟಕ ಪ್ರಜಾ ಪಾರ್ಟಿ–ರೈತ ಪರ್ವದ ಅಧ್ಯಕ್ಷ ಡಾ.ಬಿ.ಶಿವಣ್ಣ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಎಲ್ಲಾ ರೈತರು ಜಮೀನಿನಲ್ಲಿದ್ದ ಗಿಡಗಂಟಿ ತೆರವುಗೊಳಿಸಿ, ಕೃಷಿಗೆ ಸಾಧ್ಯವಾಗುವಂತೆ ಜಮೀನು ಹದ ಮಾಡಿಕೊಳ್ಳಲು ಅಪಾರ ಕಷ್ಟಪಟ್ಟಿದ್ದಾರೆ. ಇವರಿಗೆ ಸಾಗುವಳಿ ಚೀಟಿ ನೀಡಿದ್ದರೂ ಹಕ್ಕುಪತ್ರ ನೀಡಿಲ್ಲ. ಇದಕ್ಕಾಗಿ ರೈತರ ಕುಟುಂಬದವರು ತಾಲೂಕು ಕಚೇರಿಗಳಿಗೆ ಅಲೆದೂ ಅಲೆದೂ ಸುಸ್ತಾಗುವಂತಾಗಿದೆ. ಕೇವಲ ಶುಲ್ಕ ಪಡೆದು ಕಾಲಹರಣ ಮಾಡುವುದಷ್ಟೇ ನಡೆದಿದೆ. ಇದರಿಂದಾಗಿ ಇವರು ತಮ್ಮ ಕುಟುಂಬದ ಸದಸ್ಯರಿಗೆ ದಾನಪತ್ರ, ಹಕ್ಕು ಬಿಡುಗಡೆ ಪತ್ರ, ವ್ಯವಸ್ಥಾಪತ್ರ, ವಿಭಾಗ ಪತ್ರ ನೀಡಲಾಗದೇ ಪರಿತಪಿಸುವಂತಾಗಿದೆ. ದುರಸ್ತಿಯಾಗದ ಕಾರಣ ಬೇರೊಬ್ಬರಿಗೆ ಮಾರಾಟ ಮಾಡುವುದೂ ಸಾಧ್ಯವಾಗುತ್ತಿಲ್ಲ. ಹೀಗಾಗಿ ಸಂಬಂಧಿಸಿದವರು ಈ ಕೂಡಲೇ ಈ ಸಮಸ್ಯೆ ಬಗೆಹರಿಸಲು ಮುಂದಾಗಬೇಕು. ಇಲ್ಲದಿದ್ದರೆ ಈ ರೈತರೊಡಗೂಡಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಚೆಲುವರಾಜು, ಸಿಂಧುವಳ್ಳಿ ಶಿವಕುಮಾರ್, ಸಂದೀಪ್, ಮಂಜುನಾಥ್, ಕುಮಾರಸ್ವಾಮಿ ಉಪಸ್ಥಿತರಿದ್ದರು.

ಶ್ರೀಪಾದಂಗಳಿಗೆ ಸ್ವಾಗತ...



ಮೈಸೂರಿಗೆ ಆಗಮಿಸಿದ ಮಧ್ವಾಚಾರ್ಯರ ಮೂಲ ಮಠಾಧೀಶರಾದ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳ್ ಅವರನ್ನು ಕೆ.ಆರ್.ಕ್ಷೇತ್ರದ ವಿಪ್ರ ಮುಖಂಡರು, ಅಖಿಲ ಭಾರತೀಯ ಬ್ರಾಹ್ಮಣ ಏಕೀಕೃತ ಪರಿಷತ್ ಕರ್ನಾಟಕ ರಾಜ್ಯಾಧ್ಯಕ್ಷ ಎನ್.ಎಂ.ನವೀನ್ ಕುಮಾರ್ ಮಹಾರಾಜ ಕಾಲೇಜು ಮೈದಾನದಲ್ಲಿ ಗೌರವಗಳೊಂದಿಗೆ ಸ್ವಾಗತ ಕೋರಿದರು.

ನೀಟ್ ರದ್ದಾದ ಆಘಾತದಲ್ಲಿ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ

ದುರಂತದ ಹೊಣೆ ಹೊತ್ತು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲಿ

ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಆಗ್ರಹ

ಮೈಸೂರು, ಮೇ 17– ನೀಟ್ ಪರೀಕ್ಷೆ ರದ್ದಾದ ಕಾರಣದಿಂದ ಆಘಾತಕ್ಕೊಳಗಾಗಿ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದು, ಇದರ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಆಗ್ರಹಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ವೈದ್ಯರಾಗಬೇಕೆಂಬ ಕನಸು ಹೊತ್ತು ಮೇ 3ರಂದು ನೀಟ್ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳಿಗೆ, ಪರೀಕ್ಷೆಯೇ ರದ್ದಾಗಿದ್ದರಿಂದ ಆಘಾತವಾಗಿದೆ. ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ಸ್ಥಿತಿಯಲ್ಲೂ ಹಿಜಾಬ್, ಹಲಾಲ್, ಮಂದಿರ, ಮಸೀದಿ, ಹಿಂದೂ–ಮುಸ್ಲಿಂ ಎಂದು ಬಿಜೆಪಿ ರಾಜಕಾರಣ ಮಾಡುವ ಯಾವೊಬ್ಬ ನಾಯಕರೂ ಸರಣಿ ಸಾವಿಗೆ ಕಾರಣವಾದ ಅಕ್ರಮದ ವಿರುದ್ಧ ಧ್ವನಿ ಎತ್ತುವುದಿಲ್ಲ ಎಂದು ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ.



ಬಿ.ಸುಬ್ರಹ್ಮಣ್ಯ

ರಾಜ್ಯದ ಬಿಜೆಪಿ ಹಾಗೂ ಜೆಡಿಎಸ್ ಸಂಸದರಾಗಲೀ, ಕೇಂದ್ರ ಸಚಿವರಾಗಲೀ ನೀಟ್ ಹಗರಣವನ್ನು ಒಪ್ಪಿಕೊಳ್ಳದೇ ತಮಗೆ ಅನ್ನಿಸಿದ ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಒಬ್ಬ ಪ್ರೊಫೆಸರ್ ತನ್ನ ಮನೆಯ ಕೋಚಿಂಗ್ ಕ್ಲಾಸ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರಶ್ನೆಪತ್ರಿಕೆ ಹಂಚಿಕೆ ಮಾಡುತ್ತಾನೆ ಎನ್ನುವುದಾದರೆ ಕೇಂದ್ರ ಸರ್ಕಾರ ಎಷ್ಟು ನಿರ್ಲಕ್ಷ್ಯ ವಹಿಸಿದೆ ಎಂದು ತಿಳಿಯುತ್ತದೆ. ಇಂತಹ ಪ್ರಕರಣ ಸಿದ್ದರಾಮಯ್ಯ ಸರ್ಕಾರದಲ್ಲಿ ಆಗಿದ್ದಿದ್ದರೆ ಇಷ್ಟೊತ್ತಿಗೆ ಬೀದಿಯಲ್ಲಿ ನಿಂತು ಮೈ ಪರಚಿಕೊಳ್ಳುತ್ತಿದ್ದರು ಎಂದು ಬಿ. ಸುಬ್ರಹ್ಮಣ್ಯ ವಾಗ್ದಾಳಿ ನಡೆಸಿದ್ದಾರೆ.

ಪ್ರತಾಪ್ ಸಿಂಹ ಹೇಳಿಕೆಗೆ ಖಂಡನೆ: ಹಿಂದೂಗಳನ್ನ ಉರಿಸಲು ಶಾಲೆಯಲ್ಲಿ ಹಿಜಾಬ್‌ಗೆ ಅವಕಾಶ ನೀಡಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿಕೆ ನೀಡಿರುವುದು ಖಂಡನೀಯ. ಕೇಸರಿ, ಹಳದಿ, ನೀಲಿ, ಗುಲಾಬಿ ಶಾಲುಗಳು ಅಥವಾ ಹಿಜಾಬ್ ಯಾವುದೂ ಉದ್ಯೋಗ ಕೊಡುವುದಿಲ್ಲ. ಉತ್ತಮ ಬದುಕು ರೂಪಿಸಿಕೊಳ್ಳಲು ಬೇಕಿರುವುದು ಶಿಕ್ಷಣ ಮತ್ತು ಕೌಶಲ್ಯ. ಈ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದನ್ನು ಬಿಟ್ಟು, ರಾಜಕೀಯ ಮಾತನಾಡುವುದು ಸರಿಯಲ್ಲ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಪೆಟ್ರೋಲ್ ಬೆಲೆ ಏರಿಕೆ ಬೆನ್ನಲ್ಲೇ ಸಿಎನ್‌ಜಿ ದರ 3 ರೂ. ಹೆಚ್ಚಳ

ನವದೆಹಲಿ: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಬೆನ್ನಲ್ಲೇ ಸಿಎನ್‌ಜಿ ದರದಲ್ಲೂ ಒಟ್ಟು 3 ರೂ. ಹೆಚ್ಚಳವಾಗಿದ್ದು, ಗ್ರಾಹಕರು ಕಂಗಾಲಾಗಿದ್ದಾರೆ.


ದೇಶದ ಪ್ರಮುಖ ನಗರಗಳಲ್ಲಿ ಮೇ 15ರಂದು ಸಿಎನ್‌ಜಿ ದರವನ್ನು ಕೆಜಿಗೆ 2 ರೂ. ಹೆಚ್ಚಿಸಲಾಗಿತ್ತು, ಇದೀಗ ಮತ್ತೆ 1 ರೂ. ಏರಿಕೆ ಮಾಡಲಾಗಿದೆ. ತೈಲ ಕಂಪನಿಗಳು ಕೇವಲ 48 ಗಂಟೆಗಳ ಅವಧಿಯಲ್ಲಿ ಎರಡನೇ ಬಾರಿ ಬೆಲೆ ಏರಿಕೆಯಾಗಿರುವುದರಿಂದ ಗ್ರಾಹಕರು ಹಾಗೂ ಆಟೋ–ಟ್ಯಾಕ್ಸಿ ಚಾಲಕರು ಆತಂಕಕ್ಕೀಡಾಗಿದ್ದಾರೆ.

ಸಿಎನ್‌ಜಿ ಪ್ರತಿ ಕೆಜಿಗೆ ಮೈಸೂರಿನಲ್ಲಿ 87.50 ರೂ. ಇದ್ದ ಬೆಲೆ 90.50 ರೂ.ಗೆ ಹೆಚ್ಚಳವಾಗಿದೆ. ದೆಹಲಿಯಲ್ಲಿ 80.09 ರೂ., ಬೆಂಗಳೂರಿನಲ್ಲಿ 93 ರೂ., ಮುಂಬೈನಲ್ಲಿ 84 ರೂ. ನೋಯ್ಡಾ ಮತ್ತು ಗಾಜಿಯಾಬಾದ್‌ದಲ್ಲಿ 88.70 ರೂ., ಗುರುಗ್ರಾಮ್‌ನಲ್ಲಿ 85.12 ರೂ., ಹೀಗೆ ಸ್ಥಳೀಯ ತೆರಿಗೆಗೆ ಅನುಗುಣವಾಗಿ ಪರಿಷ್ಕೃತ ದರ ಜಾರಿಗೆ ಬಂದಿದೆ. ಪರಿಣಾಮ ಸಿಎನ್‌ಜಿ ಆಧಾರಿತ ಆಟೋ ರಿಕ್ಷಾ, ಟ್ಯಾಕ್ಸಿ ಮತ್ತು ಖಾಸಗಿ ವಾಹನ ಬಳಕೆದಾರರ ದಿನನಿತ್ಯದ ವೆಚ್ಚ ಹೆಚ್ಚಾಗಲಿದ್ದು, ಸಾರಿಗೆ ಸಂಸ್ಥೆಗಳ ಕಾರ್ಯಾಚರಣಾ ವೆಚ್ಚವೂ ಏರಿಕೆಯಾಗುವ ಸಾಧ್ಯತೆ ಇದ್ದು, ಇದರಿಂದ ಸಾರ್ವಜನಿಕ ಸಾರಿಗೆ ದರಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ಹುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿಮಿತ್ತ ಮೇ 18ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಹುರ, ಹಲ್ಲರೆ, ಮಲ್ಕುಂಡಿ, ಅಂಬಳೆ, ಹಂಚೀಪುರ, ಚನ್ನಪಟ್ಟಣ, ಸಿದ್ದೇಗೌಡನಹುಂಡಿ, ಮಲ್ಲಹಳ್ಳಿ, ಕೆಲ್ಲೂಪುರ, ನಾಗಣಾಪುರ, ಇಪುರ, ಬಳ್ಳೂರುಹುಂಡಿ, ಕೊತ್ತನಹಳ್ಳಿ, ರಾಜನಗರ, ಬೀರದೇವನಪುರ, ಬೋಗವಾಳು ಒಡೆಯನಪುರ, ಎಂ.ಕೊಂಗಳ್ಳಿ, ಕಗ್ಗಲೂರು, ಯಡಹಳ್ಳಿ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.5.2026 ಸೋಮವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೆನ್ನುಮೂಳೆ ಮತ್ತು ಕೀಲು ನೋವು, ಸಂಧಿವಾತ ಸಮಸ್ಯೆ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ದೃಷ್ಟಿಮಾಂದ್ಯ, ತಲೆನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಪುರುಷ ಹಾಗೂ ಸ್ತ್ರೀ ಬಂಜೆತನ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಶ್ರೀ ಕೃಷ್ಣ ಮಿತ್ರಮಂಡಳಿ,ಶ್ರೀ ಕೃಷ್ಣ ಟ್ರಸ್ಟ್:** ಶ್ರೀ ಕೃಷ್ಣ ಮಿತ್ರಮಂಡಳಿಯ ಸುವರ್ಣ ಸಂಭ್ರಮ, ಅಭಿಷೇಕ, ಪಾದಪೂಜೆ, ಮಹಾಮಂಗಳಾರತಿ ಬೆಳಗ್ಗೆ 6ಕ್ಕೆ, ಉಭಯ ಶ್ರೀಗಳ ಸಂಸ್ಥಾನ ಪೂಜೆ ಬೆಳಗ್ಗೆ 11ಕ್ಕೆ, ರಥೋತ್ಸವ ಮಧ್ಯಾಹ್ನ 12ಕ್ಕೆ, ಶ್ರೀ ಕೃಷ್ಣ ಮಿತ್ರಮಂಡಳಿಯ ಸುವರ್ಣ ಸಂಭ್ರಮದ ಉದ್ಘಾಟನಾ ಸಮಾರಂಭ: ದಿವ್ಯ ಉಪಸ್ಥಿತಿ: ಮಂತ್ರಾಲಯ ಶ್ರೀ ರಾಘವೇಂದ್ರ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು, ಉಡುಪಿ ಪೇಜಾವರ ಅಧೋಕ್ಷಜ ಮಠದ ಪೀಠಾಧಿಪತಿಗಳಾದ ಶ್ರೀ 1008 ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಮುಖ್ಯ ಅತಿಥಿ: ಶಾಸಕ, ಟಿ.ಎಸ್.ಶ್ರೀವತ್ಸ, ಸಂಜೆ 5ಕ್ಕೆ, ಶ್ರೀಕೃಷ್ಣನುಗ್ರಹ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು ಹಿರಿಯ ಪತ್ರಕರ್ತರು, ಚಿಂತಕರಾದ ರವೀಂದ್ರ ಜೋಷಿ, ಭಕ್ತಿ ಸುಧೆ ಸಾಂಸ್ಕೃತಿಕ ಕಾರ್ಯಕ್ರಮ : ಹೊತ್ತೂರು ಜಗದೀಶ್ ಆಚಾರ್ಯ ತಂಡದಿಂದ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7ಕ್ಕೆ,
- **ಯಕ್ಷಗಾನ ಪ್ರದರ್ಶನ:** ದಮಯಂತಿ ಪುನಃ ಸ್ವಯಂವರ, ಶ್ರೀನಿವಾಸ ಕಲ್ಯಾಣ ಪ್ರಸಂಗಗಳು. ತೆಂಕುತಿಟ್ಟಿನ ಶ್ರೀ ಕೋದಂಡರಾಮ ಕೃಪಾಪೋಷಿತ ನಾಟಕ ಮಂಡಳಿಯ ಕಲಾವಿದರಿಂದ. ಸ್ಥಳ: ಬಂಟರ ಭವನ, ವಿಜಯನಗರ 3ನೇ ಹಂತ, ಸಂಜೆ 5.30ಕ್ಕೆ
- **ಅಧಿಕ ಮಾಸೋತ್ಸವ:** ಪರಮಪೂಜ್ಯ ಶ್ರೀ1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮ: ದಾಸವಾಣಿ: ವಿದುಷಿ ಪ್ರಸನ್ನ ಗುಡಿ ಅವರಿಂದ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಮೈಸೂರು, ಸಂಜೆ 5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ–ಡಾ.ಬೊಜ್ಜಂಗಡ ಅವನಿಜಾ ಸೋಮಯ್ಯ ಕೆ.ಕೆ., 6.35 ಮತ್ತು ಸಂಜೆ 6.10: ಸಸ್ಯ ಸಿರಿ ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ವಿಶ್ವ ಏಡ್ಸ್ (AIDS) ಲಸಿಕಾ ದಿನದಂದು ಹೆಚ್‌ಐವಿ ಏಡ್ಸ್ ಜಾಗೃತಿ ಮತ್ತು ಲಸಿಕೆ ಸಂಶೋಧನೆ ಕುರಿತು ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೂಕ್ಷ್ಮ ಜೀವಿ ಶಾಸ್ತ್ರಜ್ಞರಾದ ಡಾ.ಛಾಯ ಅವರೊಂದಿಗೆ ಸಂದರ್ಶನ. ಸಂದರ್ಶಕರು– ತೇಜಸ್ವಿನಿ ಗಿರೀಶ್, 7.45 ಚಿತ್ರಗೀತೆಗಳು, 8.30 ನಾ ಕಸ್ತೂರಿ ಅವರ ಪಾತಾಳದಲ್ಲಿ ಪಾಪಚ್ಚಿ ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.35 ಚಿತ್ರಗೀತೆಗಳು, 9.00 ನೆನಪಿನಂಗಳ–ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ–ಹಿರಿಯ ಚಿತ್ರ ಸಾಹಿತಿ ಕಣಗಾಲ್ ಪ್ರಭಾಕರ ಶಾಸ್ತ್ರಿ ಅವರ ವೃತ್ತಿ ಜೀವನ ಕುರಿತು ಅವರ ಸಹೋದರ ಕಣಗಾಲ್ ನರಸಿಂಹಯ್ಯ ಅವರೊಂದಿಗೆ ಶ್ರೀನಿವಾಸ ಪ್ರಸಾದ್ ಅವರು ನಡೆಸಿದ್ದ ಸಂವಾದ 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಹೆಚ್.ಎಲ್.ಶಿವಶಂಕರಸ್ವಾಮಿ ನಿರ್ದೇಶನದಲ್ಲಿ ವಾದ್ಯವೃಂದ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ. ಪ್ರಸ್ತುತಿ–ದಿಗ್ವಿಜಯ್.ಬಿ, **ಮಧ್ಯಾಹ್ನ** 12.05 ವನಿತಾ ವಿಹಾರ, 12.35 ದೇವರನಾಮ–ಆರ್. ಗಿರೀಶ್, 12.45 ನಮ್ಮ ಆರೋಗ್ಯ–IBS ಅಂದರೆ ಇರಿಟೆಬಲ್ ಬೊವೆಲ್ ಸಿಂಡ್ರೋಮ್ ಲಕ್ಷಣಗಳು ಮತ್ತು ಚಿಕಿತ್ಸೆ ಈ ಕುರಿತು ಡಾ.ರಾಜಶೇಖರ್, ಮೈಸೂರು ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ –ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಮಣ್ಣು ಆರೋಗ್ಯ ಕಾರ್ಡ್ ಕುರಿತು ಮಾಹಿತಿ, 1.20 ಭಾವಗೀತೆಗಳು, 2.30–ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಪಿ.ರಾಜಗೋಪಾಲ್ ಹಾಗೂ ಎಂ.ಎನ್.ಗಣೇಶ್–ಯುಗಳ ನಾದಸ್ವರ ವಾದನ, 4.00 ಮಹಿಳಾರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ, ಭಾಗವಹಿಸುತ್ತಾರೆ–ಮೈಸೂರಿನ ಮಹಿಳಾ ಮತ್ತು ಮಕ್ಕಳ ಹಕ್ಕುಗಳ ವಕೀಲರಾದ ಅಂಜಲಿ ರಾಮಣ್ಣ, ಪ್ರಸ್ತುತಿ–ಸಹನ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ: ಎಸ್.ಎನ್.ಭಟ್ ಸೈಪಂಗಲ್ಲು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಜಿಲ್ಲಾ ವಾರ್ತಾ ಪತ್ರ, 6.51 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಹಸಿರೆಲೆ ಗೊಬ್ಬರದ ಮಹತ್ವ ಈ ಕುರಿತು ಮಂಡ್ಯದ ವಿ.ಸಿ.ಫಾರಂ, ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಪ್ರಾಧ್ಯಾಪಕರಾದ ಡಾ.ಬಸವಲಿಂಗಯ್ಯ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಮೈಸೂರಿನ ಮಹಾರಾಣಿ ಕಲಾ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿನಿಯರ ಕಾರ್ಯಕ್ರಮ ವೈವಿಧ್ಯದ 2ನೇ ಭಾಗ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ– ಕೃತಿ ಹೆಚ್.ಆರ್., ಹಾಡುಗಾರಿಕೆ, 10.00 'ಶ್ರೀ ವಿದ್ಯಾವಿಶಾರದ' ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಸವಿನೆನಪು.

ಮೈಸೂರು ಮಿತ್ರ

ಸೋಮವಾರ 18 ಮೇ 2026

ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ಸದ್ದಿಲ್ಲದೆ, ನಡೆಯುತ್ತಿದೆ ಪ್ರತಿ ಭಾನುವಾರ ರೈತರ ವಾರದ ಸಂತೆ

●ರೈತರ ಸ್ವಾವಲಂಬನೆ, ಗ್ರಾಹಕರ ಆರೋಗ್ಯಕರ ಜೀವನ ಶೈಲಿಗೆ ಪೂರಕ ●ಸಾವಯವ ಹಣ್ಣು–ತರಕಾರಿ, ದವಸ ಧಾನ್ಯಗಳು ಸ್ವತಃ ರೈತರಿಂದಲೇ ಮಾರಾಟ ●ರೈತ ಚಳವಳಿ ನೇತಾರ ಪ್ರೊ.ನಂಜುಂಡಸ್ವಾಮಿ ಅವರ ಪರಿಕಲ್ಪನೆಯಡಿ ಮುನ್ನಡೆಯುತ್ತಿರುವ ಮಾರುಕಟ್ಟೆ

ಮೈಸೂರು,ಮೇ 17(ಪಿಎಂ)– ರೈತರ ಸ್ವಾವಲಂಬನೆ ಮತ್ತು ಗ್ರಾಹಕರ ಆರೋಗ್ಯಕರ ಜೀವನ ಶೈಲಿಗೆ ಪೂರಕವಾಗಿ ಹೆಚ್ಚು ಸದ್ದಿಲ್ಲದೆ, ದಶಕದಿಂದ ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ಪ್ರತಿ ಭಾನುವಾರ ನಡೆಯುತ್ತಿದೆ ರೈತರ ವಾರದ ಸಂತೆ.

ಇಲ್ಲಿ ಸಾವಯವ ಹಣ್ಣು–ತರಕಾರಿ, ದವಸ ಧಾನ್ಯಗಳನ್ನು ಸ್ವತಃ ರೈತರೇ ಮಾರಾಟ ಮಾಡುತ್ತಾರೆ. ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳ ರೈತರು ರಾಸಾಯನಿಕ ಮುಕ್ತ ಕೃಷಿ ಉತ್ಪನ್ನಗಳನ್ನು ಇಲ್ಲಿ ಗ್ರಾಹಕರಿಗೆ ಒದಗಿಸುತ್ತಿದ್ದಾರೆ. ತಾಜಾತನದಿಂದ ಕೂಡಿದ ಹಣ್ಣು ತರಕಾರಿ, ಗುಣಮಟ್ಟದ ದವಸ ಧಾನ್ಯಗಳು ದೊರೆಯುವ ಕಾರಣಕ್ಕೆ ಈ ಸಂತೆ ತನ್ನದೇ ಗ್ರಾಹಕ ವರ್ಗವನ್ನು ಸೃಷ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.



ಆಲೂರು ಮೂರ್ತಿ

ದಶಕದ ಸಂಭ್ರಮದಲ್ಲಿರುವ ಈ ಸಂತೆಯಲ್ಲಿ ಪ್ರತಿ ಭಾನುವಾರ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ತಾಜಾ ತರಕಾರಿ, ಸೊಪ್ಪು, ಹಣ್ಣು, ಸಿರಿಧಾನ್ಯ, ಮೌಲ್ಯವರ್ಧಿತ ಉತ್ಪನ್ನಗಳು, ಅಕ್ಕಿ, ದಿನಸಿ, ಕಾಳು, ಸಾವಯವ ಮತ್ತು ನೈಸರ್ಗಿಕ ಗೃಹೋಪಯೋಗಿ ವಸ್ತುಗಳು ಹಾಗೂ ತಿಂಡಿ–ತನಿಸು, ಗಾಣದ ಎಣ್ಣೆ ಮೊದಲಾದವು ದೊರೆಯಲಿವೆ.

ಸಂತೆ ಸ್ಥಾಪನೆಗೆ ಚಾಮರಾಜನಗರದ ಆಲೂರು ಮೂರ್ತಿ ಸೇರಿದಂತೆ ಮಹದೇವ ಪ್ರಸಾದ್, ಶಾಂತಿ ಪ್ರಸಾದ್, ಆನಂದ್ ಮತ್ತು ಎಂ.ಎನ್.ಕೃಷ್ಣಪ್ರಸಾದ್ ಮೊದಲಾದ ರೈತರ ಪರಿಶ್ರಮ ಇದೆ. ರೈತರೇ ಒಟ್ಟುಗೂಡಿ ಆರಂಭಿಸಿದ ಈ ಸಂತೆಯಲ್ಲಿ ಇದೀಗ 15ರಿಂದ 20 ರೈತರು ತಾವು ಬೆಳೆ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದಾರೆ. ಈ ಎಲ್ಲರೂ ಜಮೀನು ಹೊಂದಿದ್ದು, ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಭಾನುವಾರ ಒಂದು ದಿನ ಮಾತ್ರ ಈ ಸಂತೆಯಲ್ಲಿ ವ್ಯಾಪಾರ ಮಾಡುತ್ತಾರೆ.

ಇಲ್ಲಿನ ಬಹುತೇಕ ರೈತರು ತಮ್ಮದೇ ಶೀರ್ಷಿಕೆಯಡಿ ನೈಸರ್ಗಿಕವಾಗಿ ತಾವೇ ತಯಾರು ಮಾಡಿದ ಹಲ್ಲುಜ್ಜುವ ಪುಡಿ, ಸೋಪು, ಸಾಂಬಾರ ಪದಾರ್ಥ, ಹಪ್ಪಳ, ಸಂಡಿಗೆ ಮೊದಲಾದವನ್ನೂ ಮಾರಾಟ ಮಾಡುತ್ತಾರೆ. ಆ ಮೂಲಕ ತಾವೇ ಉತ್ಪನ್ನ ತಯಾರಿಸಿ ಮೌಲ್ಯವರ್ಧನೆಯೊಂದಿಗೆ ಗ್ರಾಹಕರಿಗೆ ಆರೋಗ್ಯಕರ ಪದಾರ್ಥಗಳನ್ನು ಪೂರೈಸುತ್ತಿದ್ದಾರೆ.



ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ಭಾನುವಾರ ರೈತರ ವಾರದ ಸಂತೆ ನಡೆಯಿತು.

ಪ್ರೊ.ನಂಜುಂಡಸ್ವಾಮಿ ಪರಿಕಲ್ಪನೆ: ರೈತ ಚಳವಳಿಯ ನೇತಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ ಪರಿಕಲ್ಪನೆಯಡಿ ಈ ಸಂತೆ ಸಜ್ಜುಗೊಳಿಸಿದ್ದೇವೆ ಎನ್ನುತ್ತಾರೆ ಇಂತಹ ರೈತ ಮಾರುಕಟ್ಟೆಗೆ ಬುನಾದಿ ಹಾಕಿದವರಲ್ಲಿ ಪ್ರಮುಖರಾದ ಆಲೂರು ಮೂರ್ತಿ. ಈ ಸಂತೆ ಸ್ಥಾಪಿಸಿ 10ನೇ ವರ್ಷ ಮುಗಿಯುತ್ತಿದೆ. ತಮ್ಮ ಕೃಷಿ ಉತ್ಪನ್ನಗಳನ್ನು ಬಳಸಿ ದಿನ ಬಳಕೆಗೆ ಅಗತ್ಯವಾದ ಹಲವು ಉತ್ಪನ್ನಗಳನ್ನು ರೈತರೇ ಉತ್ಪಾದಿಸುತ್ತಾರೆ. ಜೊತೆಗೆ ಅವರೇ ಇಲ್ಲಿ ವ್ಯಾಪಾರಸ್ಥರು. ರೈತರು ಮನಸ್ಸು ಮಾಡಿದರೆ ಅಂತಾರಾಷ್ಟ್ರೀಯ ಮಾನ್ಯತೆಯ ಉತ್ಪನ್ನಗಳನ್ನು ತಯಾರು ಮಾಡಬಹುದು ಎನ್ನುತ್ತಾರೆ ಅವರು.

ರೈತರೇ ತಾವು ಬೆಳೆದ ಬೆಳಗೆ ತಾವೇ ಮೌಲ್ಯವರ್ಧನೆ ಮಾಡಿ ಮಾರಾಟವನ್ನೂ ಮಾಡಿದರೆ ಉತ್ತಮ ಬೆಲೆ ದೊರೆಯಲಿದೆ. ಜೊತೆಗೆ ಗ್ರಾಹಕರಿಗೂ ಗುಣಮಟ್ಟ ಹಾಗೂ ಆರೋಗ್ಯಕರ ಪದಾರ್ಥಗಳು ಲಭಿಸಲಿವೆ. ಅದೇ ಉದ್ದೇಶದೊಂದಿಗೆ ಸಂತೆ ಮುನ್ನಡೆಯುತ್ತಿದೆ. ನಾನು ಆರೋಗ್ಯ ಬುತ್ತಿ ಶೀರ್ಷಿಕೆಯಡಿ ವ್ಯಾಪಾರ ಮಾಡುತ್ತಿದ್ದೇನೆ. ಅದೇ ಮಾದರಿಯಲ್ಲಿ ಇಲ್ಲಿನ ಪ್ರತಿಯೊಬ್ಬರು ವಹಿವಾಟು ಮಾಡುತ್ತಿದ್ದಾರೆ. ಜೊತೆಗೆ ಈ ಸಂತೆಯನ್ನು ನಾವು ರೈತರ ಒಂದು ಚಳವಳಿ ಎಂದು ಭಾವಿಸಿದ್ದೇವೆ ಎನ್ನುತ್ತಾರೆ.

ರೈತರಿಗೆ ಲಾಭ ಹಾಗೂ ಗ್ರಾಹಕರಿಗೆ ನ್ಯಾಯ ಸಮ್ಮತ ಬೆಲೆಯಲ್ಲಿ ಪದಾರ್ಥಗಳು ದೊರೆಯಬೇಕು ಎಂಬ ಉದ್ದೇಶದಡಿ ಸಂತೆ ನಡೆಸುತ್ತಿದ್ದೇವೆ ಎನ್ನುವ ಅವರು, ಉತ್ಪನ್ನಗಳ ಬೆಲೆ ನಿಗದಿ ಯಾವ ರೀತಿ ಮಾಡುತ್ತೀರಾ ಎಂಬುದಕ್ಕೆ ಪ್ರತಿಕ್ರಿಯಿಸಿ, ರಸಗೊಬ್ಬರ ಬಳಸದ ಉತ್ಪನ್ನಗಳು ನಮ್ಮವು. ಹಾಪ್‌ಕಾಮ್ಸ್ ದರಕ್ಕಿಂತ ಹೆಚ್ಚು ಎಂದರೆ ಶೇ.20ರಷ್ಟು ಬೆಲೆ ಇರಲಿದೆ. ಒಮ್ಮೊಮ್ಮೆ ಹಾಪ್‌ಕಾಮ್ಸ್ ದರಕ್ಕಿಂತಲೂ ನಮ್ಮದೇ ಕಡಿಮೆ ಬೆಲೆ ಸಹ ಇರುತ್ತದೆ ಎಂದು ಹೇಳುತ್ತಾರೆ.


ಸರ್ಕಾರ ಹಾಗೂ ಸ್ಥಳೀಯ ಆಡಳಿತದಿಂದ ಯಾವ ನೆರವು ಬಯಸುತ್ತೀರಿ? ಎಂಬುದಕ್ಕೆ ಪ್ರತಿಕ್ರಿಯಿಸಿದ ಆಲೂರು ಮೂರ್ತಿ, ಕೃಷಿ ಇಲಾಖೆಯಿಂದ ಇಲ್ಲಿ ಸ್ಥಳಾವಕಾಶ ಕಲ್ಪಿಸಿದ್ದು, ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ಶೌಚಾಲಯ ಸೌಲಭ್ಯ ಸಹ ಕಲ್ಪಿಸಿಕೊಟ್ಟಿದ್ದಾರೆ. ಸ್ಥಳೀಯ ಆಡಳಿತ ಮತ್ತು ಸರ್ಕಾರ ನಮ್ಮಂತಹ ರೈತರಿಗೆ ಉತ್ತೇಜನ ನೀಡಬೇಕು. ನಮ್ಮ ಪದಾರ್ಥಗಳ ಸಂರಕ್ಷಣೆಗೆ ಮಾರಾಟದ ಸ್ಥಳದಲ್ಲೇ ಸಂಗ್ರಹ ಕೊಠಡಿ ಅಗತ್ಯವಿದೆ. ಇಂತಹ ಸವಲತ್ತು ಕಲ್ಪಿಸಿದರೆ ಅನುಕೂಲವಾಗಲಿದೆ ಎನ್ನುತ್ತಾರೆ ಅವರು.

ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಇನ್ನು ಉತ್ತಮ. ಒಂದೇ ಸೂರಿನಡಿ ರೈತರಿಗೆ ಮಳಿಗೆಗಳ ಆರಂಭಿಸಲು ಅವಕಾಶ ಒದಗಿಸಿದರೆ ಹೆಚ್ಚು ಅನುಕೂಲವಾಗಲಿದೆ. ಅದು ಸಾಧ್ಯವಿಲ್ಲವೆಂದರೆ ಸದ್ಯದ ಮಟ್ಟಿಗೆ ನಗರ ಬಸ್ ನಿಲ್ದಾಣದ ಸಮೀಪದಲ್ಲಿ ಒಂದೆರಡು ಮಳಿಗೆ ಒದಗಿಸಿಕೊಟ್ಟರೆ ಭಾನುವಾರ ಮಾತ್ರವಲ್ಲದೆ, ಪ್ರತಿನಿತ್ಯ ಇಲ್ಲಿನ ಎಲ್ಲಾ ರೈತರು ಒಮ್ಮತದಿಂದ ಅನುಸರಿಸಿಕೊಂಡು ಒಬ್ಬೊಬ್ಬರು ಒಂದೊಂದು ದಿನ ನಿಗದಿಪಡಿಸಿಕೊಂಡು ವ್ಯಾಪಾರ ಮಾಡಬಹುದು. ಈ ರೀತಿಯ ಉತ್ತೇಜನ ನೀಡಬೇಕೆಂಬುದು ನಮ್ಮ ಅಪೇಕ್ಷೆ ಎಂದು ಹೇಳುತ್ತಾರೆ.

ಗ್ರಾಹಕರಿಂದಲೂ ಉತ್ತಮ ಪ್ರತಿಕ್ರಿಯೆ ಇದೆ. ಅದಕ್ಕೆ 10 ವರ್ಷಗಳ ಕಾಲ ಸಂತೆ ನಡೆದಿರುವುದೇ ನಿದರ್ಶನ. ಗ್ರಾಹಕರ ಸ್ಪಂದನೆಯಿಂದಲೇ ಈ ಸಂತೆ ಮುನ್ನಡೆಯುತ್ತಿದೆ. ಇಲ್ಲವಾಗಿದ್ದರೆ ಇಷ್ಟು ದೀರ್ಘ ಕಾಲ ಸಂತೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಗುಣಮಟ್ಟದ ಸಾವಯವ ಉತ್ಪನ್ನ ಗ್ರಾಹಕರಿಗೆ ರೈತರಿಂದಲೇ ನೇರವಾಗಿ ತಲುಪುತ್ತಿದೆ. ಮಧ್ಯವರ್ತಿಗಳಿಲ್ಲದೆ, ರಾಸಾಯನಿಕ ಮುಕ್ತವಾದ ಪದಾರ್ಥಗಳ ಪೂರೈಸುತ್ತಿದ್ದೇವೆ ಎನ್ನುವರು ಅವರು.

▶ಈ ಸಂತೆ ಸ್ಥಾಪನೆಗೆ ಕಾರಣಕರ್ತರಲ್ಲಿ ಒಬ್ಬರಾದ ಕೊಳ್ಳೇಗಾಲ ತಾಲೂಕಿನ ರೈತ ಮಹದೇವ ಪ್ರಸಾದ್ ಸಹ ನಿರಂತರವಾಗಿ ಇಲ್ಲಿ ಪ್ರತಿ ಭಾನುವಾರ ವ್ಯಾಪಾರ ಮಾಡುತ್ತಿದ್ದಾರೆ. ಕಪ್ಪಕ್ಕಿ, ಕರಿ ಉದ್ದು, ಬಿದರ ಅಕ್ಕಿ ಮೊದಲಾದ ದವಸ ಧಾನ್ಯ ಮಾರಾಟ ಮಾಡುತ್ತಿದ್ದಾರೆ. ಸಾವಯವ ರೈತ ಮಹಿಳೆ ಇಂದ್ರಮ್ಮ ಅವರು ಸಿದ್ಧಪಡಿಸಿದ ಸಾಂಬಾರು ಪುಡಿ, ಕಡಲೇಬೇಳೆ, ಕಡಲೇಬೀಜ ಮೊದಲಾದ ಪದಾರ್ಥಗಳು ಇಲ್ಲಿ ಲಭ್ಯವಿವೆ. ಸಸ್ಯಶಾಸ್ತ್ರದಲ್ಲಿ ಎಂಎಸ್ಸಿ ಪದವೀಧರ ಹಾಗೂ ಗಿಡಮೂಲಿಕೆ ತಜ್ಞ ಕೃಷ್ಣಮೂರ್ತಿ ಅವರಿಲ್ಲಿ ಗಿಡಮೂಲಿಕೆ ಕಷಾಯ, ಅಂಬಲಿ ಸೇರಿದಂತೆ ಮೊದಲಾದ ಆರೋಗ್ಯಕರ ಪಾನೀಯ ಮಾರಾಟ ಮಾಡುತ್ತಿದ್ದಾರೆ. ಚಂದ್ರೇಗೌಡ ಅವರ ನುಗ್ಗೆ ಸೊಪ್ಪು ಟೀ ಪೌಡರ್, ಹರ್ಬಲ್ ಟೀ ಇಲ್ಲಿನ ಮತ್ತೊಂದು ವಿಶೇಷ. ಹೀಗೆ ಇಲ್ಲಿನ ಎಲ್ಲಾ ರೈತರು ತಮ್ಮ ಗುಣಮಟ್ಟದ ಪದಾರ್ಥಗಳನ್ನು ಗ್ರಾಹಕರಿಗೆ ಪೂರೈಕೆ ಮಾಡುತ್ತಿದ್ದಾರೆ.

ಇಂದು ದೇವೇಗೌಡರ ಹುಟ್ಟುಹಬ್ಬ; ಮೈಸೂರಲ್ಲಿ ವಿಶೇಷ ಪೂಜೆ



ಮೈಸೂರು, ಮೇ 17– ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರ 93ನೇ ಹುಟ್ಟುಹಬ್ಬದ ಅಂಗವಾಗಿ ಮೈಸೂರು ನಗರ (ಜಿಲ್ಲೆ) ಜೆಡಿಎಸ್ ವತಿಯಿಂದ ಸೋಮವಾರ(ಮೇ 18) ಬೆಳಗ್ಗೆ 8ಕ್ಕೆ ಚಾಮುಂಡಿಬೆಟ್ಟದ ದೇವಿಯ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ, ಪಕ್ಷದ ಕಚೇರಿ ಬಳಿ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಸಿಹಿ ಹಂಚಲಾಗುವುದು.

ಈ ವೇಳೆ ಜೆಡಿಎಸ್ ಪಕ್ಷದ ರಾಜ್ಯ ರಾಜಕೀಯ ವ್ಯವಹಾರಗಳ ಸಮಿತಿ ಸದಸ್ಯರಾದ ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕ ಕೆ.ಮಹದೇವ್, ವರುಣ ಕ್ಷೇತ್ರದ ಮುಖಂಡ ಅಭಿಷೇಕ್, ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್‌ಕುಮಾರ್, ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಹೆಚ್.ಡಿ.ಕೋಟೆ ಮುಖಂಡ ಕೃಷ್ಣನಾಯಕ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ರಾಜೇಶ್ವರಿ ಸೋಮು, ಭಾಗ್ಯ ಸೇರಿದಂತೆ ಪಾಲಿಕೆ ಮಾಜಿ ಸದಸ್ಯರು, ಪಕ್ಷದ ಪದಾಧಿಕಾರಿಗಳು, ಮುಖಂಡರು ಭಾಗವಹಿಸಲಿದ್ದಾರೆ ಎಂದು ಪಕ್ಷದ ರಾಜ್ಯ ವಕ್ತಾರ ಎನ್.ಆರ್.ರವಿಚಂದ್ರೇಗೌಡ ತಿಳಿಸಿದ್ದಾರೆ.

101 ಗಣಪತಿ ದೇವಾಲಯದಲ್ಲಿ ಪೂಜೆ: ಮೈಸೂರಿನ ಅರಿವು ಸಂಸ್ಥೆಯ ವತಿಯಿಂದ ದೇವೇಗೌಡರ ಹೆಸರಿನಲ್ಲಿ ವಿಶೇಷ ಪೂಜೆ ಹಾಗೂ ಸಿಹಿ ವಿತರಣಾ ಕಾರ್ಯಕ್ರಮವನ್ನು ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾದ ನಾರಾಯಣಗೌಡ, ಹಿರಿಯ ಸಮಾಜ ಸೇವಕರಾದ ಕೆ ರಘುರಾವ್ ವಾಜಪೇಯಿ, ಮುಡಾ ಮಾಜಿ ಅಧ್ಯಕ್ಷರಾದ ಯಶಸ್ವಿನಿ ಸೋಮಶೇಖರ್, ಮಾಜಿ ನಗರ ಪಾಲಿಕೆ ಸದಸ್ಯ ಮಾವಿ ರಾಮಪ್ರಸಾದ್ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಅರಿವು ಸಂಸ್ಥೆಯ ಅಧ್ಯಕ್ಷರಾದ ಶ್ರೀಕಾಂತ ಕಶ್ಯಪ್ ತಿಳಿಸಿದ್ದಾರೆ.

ಕೊಪ್ಪಳದಲ್ಲಿ ಎಸ್.ಅರುಣ್‌ಕುಮಾರ್‌ಗೆ ಸನ್ಮಾನ...



ಕೊಪ್ಪಳದ ಪಾರ್ಥ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕೊಪ್ಪಳದ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯ ನೂತನವಾಗಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ವೇದಿಕೆ ರಾಜ್ಯಾಧ್ಯಕ್ಷರೂ ಆದ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಅರುಣ್‌ಕುಮಾರ್ ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು.

ಶ್ರೀಮದ್ಭಾಗವತ ಪ್ರವಚನ

ಮೈಸೂರು, ಮೇ 17– ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ತತ್ವಜ್ಞಾನ ಮಂದಿರದಲ್ಲಿ ಅಧಿಕಮಾಸದ ವಿಶೇಷ ಕಾರ್ಯಕ್ರಮ 'ಶ್ರೀಮದ್ಭಾಗವತ ಪ್ರವಚನ' ಇದೇ ಮೇ.20 ವರೆಗೆ ನಡೆಯಲಿದೆ. ಮಂತ್ರಾಲಯ ಮಠದ ಪೀಠಾಧಿಪತಿಗಳಾಗಿದ್ದ 108ನೇ ಸುವಿದ್ಯೇಂದ್ರತೀರ್ಥ ಶ್ರೀಪಾದರಿಂದ ಪ್ರತಿದಿನ ಸಂಜೆ 6 ರಿಂದ 8 ವರೆಗೆ ಪ್ರವಚನ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಐದು ಷರತ್ತುಗಳನ್ನು ಇರಾನ್ ಮುಂದಿಟ್ಟ ಅಮೆರಿಕ: ಇನ್ನೂ ಬಗೆಹರಿಯದ ಬಿಕ್ಕಟ್ಟು



ವಾಷಿಂಗ್ಟನ್: ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಸದ್ಯ ನಡೆಯುತ್ತಿರುವ ಶಾಂತಿ ಮಾತುಕತೆ ವೇಳೆ ಇರಾನ್ ಮುಂದೆ ಐದು ಪ್ರಮುಖ ಷರತ್ತುಗಳನ್ನು ಅಮೆರಿಕ ಮುಂದಿಟ್ಟಿದೆ ಎಂದು ವರದಿಯಾಗಿದೆ.

ಇರಾನ್‌ನ ಫಾರ್ಸ್ ನ್ಯೂಸ್ ಏಜೆನ್ಸಿ ವರದಿ ಪ್ರಕಾರ, ಹಿಂದಿನ ನಿರ್ಬಂಧಗಳು ಮತ್ತು ನೀತಿ ನಿರ್ಧಾರಗಳಿಂದ ಉಂಟಾದ ನಷ್ಟಗಳಿಗೆ ಇರಾನ್‌ಗೆ ಯಾವುದೇ ಪರಿಹಾರವನ್ನು ನೀಡಲು ವಾಷಿಂಗ್ಟನ್ ನಿರಾಕರಿಸಿದೆ. ಇದರ ಜೊತೆಗೆ ಮಾತುಕತೆಗಳ ಭಾಗವಾಗಿ ಇರಾನ್ 400 ಕಿಲೋಗ್ರಾಂಗಳಷ್ಟು ಸಮೃದ್ಧ ಯುರೇನಿಯಂ ಅನ್ನು ಅಮೆರಿಕಕ್ಕೆ ಹಸ್ತಾಂತರಿಸಬೇಕೆಂದು ಅಮೆರಿಕ ಒತ್ತಾಯಿಸಿದೆ ಎಂದು ವರದಿಯಾಗಿದೆ.

ಮತ್ತೊಂದು ಷರತ್ತು ಯಾವುದೆಂದರೆ, ಇರಾನ್‌ನ ಕೇವಲ ಒಂದು ಪರಮಾಣು ಕೇಂದ್ರ ಮಾತ್ರ ಕಾರ್ಯನಿರ್ವಹಿಸುತ್ತಿರಬೇಕು. ವಶಕ್ಕೆ ಪಡೆದ ಇರಾನ್‌ನ ವಿದೇಶಿ ಆಸ್ತಿಗಳಲ್ಲಿ ಶೇ.25 ರಷ್ಟನ್ನು ಬಿಡುಗಡೆ ಮಾಡುವುದನ್ನು ಸಹ ಅಮೆರಿಕ ತಿರಸ್ಕರಿಸಿದೆ ಎಂದು ಹೇಳಲಾಗುತ್ತದೆ. ಇದಲ್ಲದೆ ವಿವಿಧ ರಂಗಗಳಲ್ಲಿನ ಸಂಘರ್ಷಗಳ ಅಂತ್ಯವನ್ನು ಮಾತುಕತೆಯೊಂದಿಗೆ ಮುಂದುವರಿಸುವುದು ಮತ್ತು ಪೂರ್ಣಗೊಳಿಸುವುದು ಸೇರಿದೆ.

ಇರಾನ್ ಈ ಷರತ್ತುಗಳನ್ನು ಪೂರೈಸಿದರೂ ಸಹ ಅಮೆರಿಕ ಮತ್ತು ಇಸ್ರೇಲಿ ಆಕ್ರಮಣದ ಬೆದರಿಕೆ ಜಾರಿಯಲ್ಲಿರುತ್ತದೆ. ಯುದ್ಧವನ್ನು ಕೊನೆಗೊಳಿಸಲು ಮಾತುಕತೆ ನಡೆಸುವ ಇರಾನ್‌ನ ಪ್ರಸ್ತಾವನೆಗೆ ಪ್ರತಿಕ್ರಿಯೆಯಾಗಿ ಅಮೆರಿಕ ಯಾವುದೇ ನಿರ್ದಿಷ್ಟ ರಿಯಾಯಿತಿಗಳನ್ನು ನೀಡುವಲ್ಲಿ ವಿಫಲವಾಗಿದೆ ಎಂದು ಇರಾನ್ ಮಾಧ್ಯಮ ಹೇಳಿದೆ. ಈ ಮಧ್ಯೆ ಹೊಸದಾಗಿ ಯಾವುದೇ ಮಿಲಿಟರಿ ಕಾರ್ಯಾಚರಣೆಗೆ ಮುಂದಾದರೆ ತೀವ್ರ ಹೊಡೆತ ಎದುರಿಸಬೇಕಾಗುತ್ತದೆ ಎಂದು ಇರಾನ್‌ನ ಸಶಸ್ತ್ರ ಪಡೆಗಳ ವಕ್ತಾರರು ಅಮೆರಿಕಕ್ಕೆ ಎಚ್ಚರಿಕೆ ನೀಡಿದ್ದಾರೆ.

ಜೆಡಿಎಸ್ ಮುಖಂಡ ಕೋಟೆಹುಂಡಿ ಮಹದೇವು ಮನೆಯಲ್ಲಿ ನಾಟಿಕೋಳಿ ಸಾರು–ರಾಗಿಮುದ್ದೆ ಸವಿದ ಕೇಂದ್ರ ಸಚಿವ ಕುಮಾರಸ್ವಾಮಿ



ಕೋಟೆಹುಂಡಿ ಮಹದೇವು ಅವರ ಮನೆಗೆ ಭೇಟಿ ನೀಡಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಭಾರೀ ಹಾರದೊಂದಿಗೆ ಗೌರವಿಸಲಾಯಿತು.

ಮೈಸೂರು, ಮೇ 17– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಶ್ರೀರಾಂಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಜೆಡಿಎಸ್ ಮುಖಂಡ ಕೋಟೆಹುಂಡಿ ಮಹದೇವು ಅವರ ಮನೆಗೆ ಭಾನುವಾರ ಭೇಟಿ ನೀಡಿ, ರಾಗಿಮುದ್ದೆ ನಾಟಿಕೋಳಿ ಸಾಂಬಾರ್ ಊಟ ಸವಿದರು.

ಬೋಗಾದಿ ಬಳಿ ನಡೆದ ಚಾಮುಂಡೇಶ್ವರಿ ಕ್ಷೇತ್ರದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದ ಬಳಿಕ ತಮ್ಮ ದಟ್ಟಗಳ್ಳಿ ನಿವಾಸಕ್ಕೆ ಆಗಮಿಸಿದ ಕುಮಾರಸ್ವಾಮಿ ಅವರನ್ನು ಕೋಟೆಹುಂಡಿ ಮಹದೇವು ಹೂಗುಚ್ಛ ನೀಡಿ ಬರಮಾಡಿಕೊಂಡರೆ, ಕುಟುಂಬದ ಮಹಿಳೆಯರು ಆರತಿ ಬೆಳಗಿ ಸ್ವಾಗತಿಸಿದರು.

ಬಳಿಕ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕ ಜಿ.ಡಿ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ಮೈಸೂರು ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಮುಖಂಡರಾದ ಪಿರಿಯಾಪಟ್ಟಣ ಮಾಜಿ ಶಾಸಕ ಮಹದೇವು ಸೇರಿದಂತೆ ಹಲವು ಮುಖಂಡರೊಂದಿಗೆ ಕುಮಾರಸ್ವಾಮಿ ಅವರು, ಊಟ ಸೇವಿಸಿದರು. ಈ ವೇಳೆ ನೆರೆದಿದ್ದ ನೂರಾರು ಮುಖಂಡರು ಹಾಗೂ ಕಾರ್ಯಕರ್ತರಿಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಇದೇ ವೇಳೆ ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಅವರಿಗೆ ಬೃಹತ್ ಹೂವಿನ ಹಾರ ಹಾಕಿ, ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಲಾಯಿತು. ನಿಮಗೆ ರಾಜಕೀಯದಲ್ಲಿ ಉತ್ತಮ ಭವಿಷ್ಯವಿದೆ ಎಂದು ಮಹದೇವು ಅವರಿಗೆ ಹಾರೈಸಿದ ಕುಮಾರಸ್ವಾಮಿ, ಮಹದೇವು ಕುಟುಂಬದ ಸದಸ್ಯರೊಂದಿಗೆ ಫೋಟೋ ತೆಗೆಸಿಕೊಂಡು ಪ್ರಯಾಣ ಬೆಳೆಸಿದರು.

ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ಭಾರೀ ಅಗ್ನಿ ಅವಘಡ: ಅದೃಷ್ಟವಶಾತ್ 68 ಪ್ರಯಾಣಿಕರು ಪಾರು!

ಮಧ್ಯಪ್ರದೇಶ: ಇಲ್ಲಿನ ರತ್ಲಾಮ್ ಜಿಲ್ಲೆಯಲ್ಲಿ ತಿರುವನಂತಪುರಂ–ಹಜರತ್ ನಿಜಾಮುದ್ದೀನ್ ರಾಜಧಾನಿ ಎಕ್ಸ್‌ಪ್ರೆಸ್ ರೈಲಿನ ಎಸಿ ಕೋಚ್‌ನಲ್ಲಿ ಭಾನುವಾರ ಮುಂಜಾನೆ ಭೀಕರ ಅಗ್ನಿ ಅವಘಡ ಸಂಭವಿಸಿದ್ದು, ಅದೃಷ್ಟವಶಾತ್ ಸಾವು–ನೋವು ಸಂಭವಿಸಿಲ್ಲ.

ಪಶ್ಚಿಮ ಮಧ್ಯ ರೈಲ್ವೆಯ ಕೋಟಾ ವಿಭಾಗದ ಲುನಿ ರಿಚ್ಚಾ ಮತ್ತು ವಿಕ್ರಮಗಢ ಅಲೋಟ್ ನಿಲ್ದಾಣಗಳ ನಡುವೆ ಮುಂಜಾನೆ ಸುಮಾರು 5.30ಕ್ಕೆ ರೈಲು ಸಂಖ್ಯೆ 12431ರ ಬಿ–1 ಕೋಚ್‌ನಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಈ ಬೋಗಿಯಲ್ಲಿದ್ದ ಒಟ್ಟು 68 ಪ್ರಯಾಣಿಕರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಕಿ ಕಾಣಿಸಿಕೊಂಡ ತಕ್ಷಣ ಎಚ್ಚೆತ್ತುಕೊಂಡ ರೈಲ್ವೆ ಸಿಬ್ಬಂದಿ, ಪ್ರಯಾಣಿಕರನ್ನು ಕೆಳಗಿಳಿಸಿ, ಬೆಂಕಿಗಾಹುತಿ ಯಾದ ಬೋಗಿಯನ್ನು ರೈಲಿನಿಂದ ಪ್ರತ್ಯೇಕಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಓವರ್‌ಹೆಡ್ ಎಲೆಕ್ಟ್ರಿಕ್ ಸರಬರಾಜು ಸ್ಥಗಿತಗೊಳಿಸಿ, ನಂತರ ಅಗ್ನಿಶಾಮಕ ದಳದ ಸಿಬ್ಬಂದಿಗಳ ಮೂಲಕ ಮೂಲಕ ಬೆಂಕಿಯನ್ನು ನಿಯಂತ್ರಿಸಿದ್ದಾರೆ. ಎಸಿ ಕೋಚ್‌ನಲ್ಲಿ ಉಂಟಾದ ಶಾರ್ಟ್ ಸರ್ಕ್ಯೂಟ್‌ನಿಂದ ಈ ಅಗ್ನಿ ದುರಂತ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬದ ಆಚರಣೆ...



ಮೈಸೂರಿನ ವಾರ್ಡ್ ನಂ.4ರ ಬಸವನಗುಡಿ ಸರ್ಕಲ್‌ನಲ್ಲಿ ಉಪಮುಖ್ಯಮಂತ್ರಿಗಳೂ ಆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಸಿಹಿ ಹಂಚಿದರು. ಈ ವೇಳೆ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಪೈ.ಶ್ರೀನಿವಾಸ್, ಕಾಂಗ್ರೆಸ್‌ನ ವಾರ್ಡ್ ಅಧ್ಯಕ್ಷ ಕೃಷ್ಣಪ್ಪ, ಮುಖಂಡರಾದ ಕೇಬಲ್ ಮಹೇಶ್, ಪ್ರಕಾಶ್, ಜಯರಾಮೇಗೌಡ, ನಾರಾಯಣಪ್ಪ, ಹುಲಿಕೆರೆ ಬೋರೇಗೌಡ, ವಿಕ್ರಾಂತ್ ಬೋರೇಗೌಡ, ನಾಗೇಂದ್ರ, ಚಿಲ್ಲಿ ದಿನಿ, ಅರ್ಜುನ್, ಮಲ್ಲೇಗೌಡ ದುಡ್ಡಾಣಿ, ರಾಘು, ಕೃಷ್ಣ ಸ್ವಾಮಿ, ಪುಟ್ಟರಾಜು, ರತ್ನಮ್ಮ ಮತ್ತಿತರರು ಹಾಜರಿದ್ದರು.

ಡೆಲ್ಲಿ ಮುಂದೆ ಮಂಡಿಯೂರಿದ ರಾಯಲ್ಸ್



ಡೆಲ್ಲಿ, ಮೇ 17(ವಿವಿಹೆಚ್)– ಅಭಿಷೇಕ್ ಪೋರೆಲ್ ಹಾಗೂ ಕೆ.ಎಲ್.ರಾಹುಲ್ ಅವರ ಅರ್ಧಶತಕದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್, ರಾಜಸ್ಥಾನ್ ರಾಯಲ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿತು.

ಇಲ್ಲಿನ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಆರ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 193ರನ್ ಗಳಿಸಿತು. ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಡಿಸಿ 19.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 197 ರನ್ ಬಾರಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟ್ ಮಾಡಿದ ಆರ್‌ಆರ್ ವೈಭವ್ ಸೂರ್ಯವಂಶಿ ಭರ್ಜರಿ ಆರಂಭ ಒದಗಿಸಿದರು. 21 ಎಸೆತಗಳಲ್ಲಿ 46ರನ್ ಚಚ್ಚಿ ಔಟಾದರು. ಮತ್ತೊಂದೆಡೆ ಯಶಸ್ವಿ ಜೈಸ್ವಾಲ್ 12(9) ರನ್ ಬಾರಿಸಿ ನಿರಾಸೆ ಮೂಡಿಸಿದರು.

ಈ ವೇಳೆ ಒಂದಾದ ಜುರೇಲ್ 53(40), ಪರಾಗ್ 51(26) ಭರ್ಜರಿ ಹಾಕಿಕೊಟ್ಟರು. ಈ ಇಬ್ಬರ ನಿರ್ಗಮನದ ಬಳಿಕ ಮಧ್ಯಮ ಕ್ರಮಾಂಕ ದಿಢೀರ್ ಕುಸಿತ ಕಂಡಿತು.

ಡೆವೋನ್ ಫೆರಿರ್ರಾ ಗೋಲ್ಡನ್ ಡಕ್‌ಔಟ್, ರವಿ ಸಿಂಗ್ 4(2), ಶುಭಂ ದುಬೆ 5(9), ದಸುನ್ ಶಣಕ 10(8), ಜೋಫ್ರಾ ಆರ್ಚರ್ ಅಜೇಯ 2(2), ಆಡಂ ಮಿಲ್ನೆ ಅಜೇಯ 2(2) ರನ್ ಗಳಿಸಿದರು.

ಡೆಲ್ಲಿ ಪರ ಮಿಚೆಲ್ ಸ್ಟಾರ್ಕ್ ಪ್ರಮುಖ 4 ವಿಕೆಟ್ ಕಿತ್ತರು. ಲುಂಗಿ ಎನ್‌ಗಿಡಿ ಹಾಗೂ ಮಾಧವ್ ತಿವಾರಿ ತಲಾ 2 ವಿಕೆಟ್ ಪಡೆದು, ಗಮನ ಸೆಳೆದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಡೆಲ್ಲಿಗೆ ಕೆ.ಎಲ್.ರಾಹುಲ್ ಹಾಗೂ ಅಭಿಷೇಕ್ ಪೋರೆಲ್ ಶತಕದ ಜೊತೆಯಾಟದ ಮೂಲಕ ಉತ್ತಮ ಆರಂಭ ದೊರೆಯಿತು. ಪೋರೆಲ್ 31 ಎಸೆತಗಳಲ್ಲಿ 51 ರನ್ ಗಳಿಸಿದರೆ, ಕೆ.ಎಲ್.ರಾಹುಲ್ 42 ಎಸೆತಗಳಲ್ಲಿ 56 ರನ್ ಗಳಿಸಿದರು. ನಂತರ ಬಂದ ಸಾಹಿಲ್ ಪರಾಖ್ 9(8), ಟ್ರಿಸ್ಟನ್ ಸ್ಟಬ್ಸ್ 4(6), ಡೇವಿಡ್ ಮಿಲ್ಲರ್ 9(6) ಮತ್ತೊಮ್ಮೆ ನಿರಾಸೆ ಮೂಡಿಸಿದರು.


ಈ ವೇಳೆ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ನಾಯಕ ಅಕ್ಷರ್ ಪಟೇಲ್ 18 ಎಸೆತಗಳಲ್ಲಿ ಅಜೇಯ 34 ರನ್ ಬಾರಿಸಿ ತಂಡದ ಗೆಲುವಿಗೆ ಕಾರಣರಾದರು. ಇವರಿಗೆ ಸಾಥ್ ನೀಡಿದ ಅಶುತೋಷ್ ಶರ್ಮಾ 5 ಎಸೆತಗಳಲ್ಲಿ ಅಜೇಯ 18 ರನ್ ಕಲೆಹಾಕಿದರು. ಆರ್‌ಆರ್ ಪರ ಜೋಫ್ರಾ ಆರ್ಚರ್ ಹಾಗೂ ಬ್ರಿಜೇಶ್ ಶರ್ಮಾ ತಲಾ 2 ವಿಕೆಟ್, ದಸುನ್ ಶನಕ ಒಂದು ವಿಕೆಟ್ ಕಿತ್ತರು.

ಕೊಹ್ಲಿ–ವೆಂಕಟೇಶ್ ಕಮಾಲ್; ಪಂಜಾಬ್ ಮಣಿಸಿ ಪ್ಲೇ–ಆಫ್‌ಗೆ ಎಂಟ್ರಿಕೊಟ್ಟ ಆರ್‌ಸಿಬಿ

ಧರ್ಮಶಾಲಾ, ಮೇ 17(ವಿವಿಹೆಚ್)– ವಿರಾಟ್, ವೆಂಕಟೇಶ್ ಅಯ್ಯರ್ ಅರ್ಧಶತಕ, ಭುವನೇಶ್ವರ್ ಹಾಗೂ ಹೇಜಲ್ವುಡ್ ಬೌಲಿಂಗ್ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವನ್ನು 23 ರನ್‌ಗಳಿಂದ ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 2026ನೇ ಸಾಲಿನ ಐಪಿಎಲ್‌ನ ಪ್ಲೇ–ಆಫ್‌ಗೆ ಚೊಚ್ಚಲ ತಂಡವಾಗಿ ಎಂಟ್ರಿಕೊಟ್ಟಿದೆ.

ಆರ್‌ಸಿಬಿ ಈವರೆಗೆ 13 ಪಂದ್ಯಗಳನ್ನಾಡಿ 4ರಲ್ಲಿ ಸೋತು 9ರಲ್ಲಿ ಗೆಲುವು ದಾಖಲಿಸಿ 18 ಅಂಕಗಳೊಂದಿಗೆ ಅಗ್ರಸ್ಥಾನದಲ್ಲೇ ಮುಂದುವರಿದಿದೆ.

ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 222 ರನ್ ಗಳಿಸಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಪಂಜಾಬ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಲಷ್ಟೆ ಶಕ್ತವಾಯಿತು.



ವಿಕೆಟ್ ಪಡೆದ ಸಂದರ್ಭದಲ್ಲಿ ಆರ್‌ಸಿಬಿ ಆಟಗಾರರ ಸಂಭ್ರಮ

ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿಗೆ ವಿರಾಟ್ ಹಾಗೂ ದೇವದತ್ ಭರ್ಜರಿ ಆರಂಭ ಕೊಟ್ಟರು. ದೇವದತ್ತ ಪಡಿಕ್ಕಲ್ 45(25), ವಿರಾಟ್ ಕೊಹ್ಲಿ 58(37ಎ, 4ಬೌ, 3ಸಿ) ರನ್ ಗಳಿಸಿದರು.

ಕೊನೆವರೆಗೂ ನಿಂತು ಭರ್ಜರಿಯಾಗಿ ಬ್ಯಾಟ್ ಬೀಸಿದ ವೆಂಕಟೇಶ್ ಐಯ್ಯರ್ 40ಎಸೆತಗಳಲ್ಲಿ 8 ಬೌಂಡರಿ, 4 ಸಿಕ್ಸರ್ ಸಹಿತ ಅಜೇಯ 73 ರನ್‌ಗಳಿಸಿ ತಂಡದ ಮೊತ್ತ ಇನ್ನೂರರ ಗಡಿ ದಾಟಿಸಿದರು. ಉಳಿದಂತೆ ಟಿಮ್ ಡೇವಿಡ್ 28(12) ಹಾಗೂ ಜಾಕೋಬ್ ಬೆಥೆಲ್ 11(7) ರನ್ ಕಲೆ ಹಾಕಿದರು. ಪಂಜಾಬ್ ಪರ ಹರ್ಪ್ರೀತ್ ಬ್ರಾರ್ 2, ಚಹಾಲ್ ಹಾಗೂ ಅರ್ಶದೀಪ್ ಸಿಂಗ್ ತಲಾ ಒಂದು ವಿಕೆಟ್ ಪಡೆದರು.

223 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಪಂಜಾಬ್ ತಂಡಕ್ಕೆ ಭುವನೇಶ್ವರ್ ಕುಮಾರ್ ಆರಂಭಿಕ ಆಘಾತ ನೀಡಿದರು. ಆರಂಭಿಕ ಪ್ರಿಯಾಂಶ್ ಆರ್ಯಾ ಮೂರನೇ ಎಸೆತದಲ್ಲಿ ಡಕ್ ಔಟ್ ಆದರೆ, ಪ್ರಭಸಿಮ್ರಾನ್ ಸಿಂಗ್ 2 ರನ್‌ಗೆ ವಿಕೆಟ್ ಒಪ್ಪಿಸಿದರು. ನಾಯಕ ಶ್ರೇಯಸ್ ಅಯ್ಯರ್ ಕೂಡ 1 ರನ್ ಗಳಿಸಿ ಪೆವಿಲಿಯನ್ ಸೇರಿದರು.

ಕೂಪರ್ ಕೊನೊಲಿ 37(2) ಸೂರ್ಯಾಂಶ್ ಶೆಡ್ಜ್ 35(22), ಮಾರ್ಕಸ್ ಸ್ಟೋಯ್ನಿಸ್ 37(25) ರನ್ ಬಾರಿಸಿದರು. ಈ ವೇಳೆ ಅಲ್ಪ ಹೋರಾಟ ಮಾಡಿದ ಶಶಾಂಕ್ ಸಿಂಗ್ 27 ಎಸೆತಗಳಲ್ಲಿ 4ಬೌಂಡರಿ, 4 ಸಿಕ್ಸರ್ ಸಹಿತ 56 ರನ್ ಬಾರಿಸಿಯೂ ತಂಡವನ್ನು ಗೆಲುವಿನ ದಡ ಸೇರಿಸುವಲ್ಲಿ ವಿಫಲರಾದರು. ಉಳಿದಂತೆ ಓಮರ್ಜೈ 14(10) ಹಾಗೂ ಹರ್ಪ್ರೀತ್ ಬಾರ್ ಅಜೇಯ 5(3) ರನ್ ಪೇರಿಸಿದರು.

ಆರ್‌ಸಿಬಿ ಪರ ರಸಿಕ್ ಸಲಾಂ ದಾರ್ 3 ವಿಕೆಟ್, ಭುವನೇಶ್ವರ್ ಕುಮಾರ್ 2 ವಿಕೆಟ್, ಸುಯೇಶ್ ಶರ್ಮಾ, ಹೇಜಲ್ವುಡ್ ಹಾಗೂ ರೊಮಾರಿಯೊ ಶೇಫರ್ಡ್ ತಲಾ ಒಂದೊಂದು ವಿಕೆಟ್ ಪಡೆದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಾನು ಯಾವಾಗ ಬಹಳ ಕ್ಯೂಟಾಗಿ ಕಾಣ್ತೇನಿ?
ಗಂಡ : ನೀ ಮಲಗಿದ್ದಾಗ....
ಹೆಂಡತಿ : ನಾನು ಮಲಗಿದ್ದಾಗ ಅಷ್ಟೊಂದು ಕ್ಯೂಟಾಗಿ ಕಾಣ್ತೇನಾ...ಯಾಕೆ?
ಗಂಡ : ಯಾಕಂದ್ರೆ.... ನಿನ್ನ ಬಾಯಿ ಮ್ಯೂಟ್ ಆಗಿರುತ್ತಲ್ಲ ಅದಕ್ಕೆ.

ಮೈಸೂರು ಮಿತ್ರ

ಸೋಮವಾರ, ಮೇ 18, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮುಳುಗುತ್ತಿರುವವನನ್ನು ರಕ್ಷಿಸಬೇಕೆ ಹೊರತು
ಅವನಿಗೆ ಈಜು ಕಲಿಸಲು ಹೋಗಬಾರದು.

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು } ತಲೆಯಿಂದ ಮೇಲೆ ಸಾಲ / ಒಲೆಯಿಂದ ಮೇಲೆ ಬೆಂಕಿ ಆಗಬಾರದು

ನಿಮ್ಮ ಪತ್ರಗಳು

ಹೃದಯಾಘಾತ; ಬೇಕಿದೆ ಅರಿವು, ಸೂಕ್ತ ಚಿಕಿತ್ಸೆ!

ಮಾನ್ಯರೆ,

ಈ ಮೊದಲು ಹೃದಯಾಘಾತವು ವಯಸ್ಸಾದವರ ಮೇಲೆ ಮಾತ್ರ ಪರಿಣಾಮ ಬೀರುತ್ತದೆ ಎಂದು ಎಲ್ಲರೂ ನಂಬಿದ್ದರು. ಆದರೆ ನಟ ಪುನೀತ್ ರಾಜಕುಮಾರ್ ಹಾಗೂ ಇತ್ತೀಚಿಗೆ ಹೃದಯಾಘಾತದಿಂದ ಮರಣ ಹೊಂದಿದ ಕಿರುತೆರೆ ನಟ ದಿಲೀಪ್‌ರಾಜ್ ಅವರ ಸಾವನ್ನು ಗಮನಿಸಿದಾಗ ಯುವಜನರಲ್ಲಿ ಹೃದಯಾಘಾತದ ಘಟನೆಗಳು ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ನಮ್ಮ ಯುವಜನತೆ ಹೃದಯಕ್ಕೆ ಒತ್ತಡ ಇರುವ ಮತ್ತು ಹೃದಯದ ಅಂಗಾಂಶಗಳಿಗೆ ಹಾನಿ ಮಾಡುವಂತಹ ಕೆಲಸ ಕಾರ್ಯಗಳು ಹಾಗೂ ದುಶ್ಚಟಗಳಿಗೆ ಮಾರುಹೋಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿರುವುದರ ಪರಿಣಾಮವಾಗಿ ಹಠಾತ್ ಹೃದಯ ಸಾವಿನ ಅಪಾಯವನ್ನು ಹೆಚ್ಚಿಸುತ್ತಿವೆ.

ವ್ಯಕ್ತಿಗೆ ಹೃದಯಘಾತ ಸಂಭವಿಸಿದಾಗ ಆ ವ್ಯಕ್ತಿ ಆಸ್ಪತ್ರೆಗೆ ದಾಖಲಾಗುವ ಮುನ್ನ ತಕ್ಷಣ ಸೂಕ್ತ ಪ್ರಥಮ ಚಿಕಿತ್ಸೆ ಸಿಗದೇ ಮಾರ್ಗ ಮಧ್ಯೆಯೇ ಕೊನೆಯುಸಿರೆಳೆಯುತ್ತಿರುವ ಘಟನೆಗಳು ಇತ್ತೀಚಿಗೆ ಹೆಚ್ಚಾಗುತ್ತಿದ್ದು, ಇದು ತಪ್ಪಬೇಕಿದೆ. ಹೃದಯಾಘಾತ ಸಂಭವಿಸಿದಾಗ ತಕ್ಷಣ ಏನು ಮಾಡಬೇಕು? ಯಾವೆಲ್ಲ ತುರ್ತು ಪ್ರಥಮ ಚಿಕಿತ್ಸೆಗಳನ್ನು ಮಾಡಬೇಕು? ಆ ಕ್ಷಣಕ್ಕೆ ತೆಗೆದುಕೊಳ್ಳಬೇಕಾದ ಮಾತ್ರೆಗಳ ಬಗ್ಗೆ ಪ್ರತಿಯೊಬ್ಬರಲ್ಲೂ ಅರಿವು ಮೂಡಿಸುವ ಕಾರ್ಯ ಆಗಬೇಕಿದೆ. ಅಲ್ಲದೆ ಹೃದಯಾಘಾತದ ಕಾರಣದಿಂದ ಆಸ್ಪತ್ರೆಗೆ ದಾಖಲಾಗುವ ವ್ಯಕ್ತಿಯನ್ನು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಿಸುವುದನ್ನು ತಪ್ಪಿಸಿ, ತತಕ್ಷಣ ಸೂಕ್ತ ಚಿಕಿತ್ಸೆ ನೀಡುವ ಪ್ರಕ್ರಿಯೆ ಹಾಗೂ ಇದಕ್ಕೆ ಸಂಬಂಧಿಸಿದ ಸೂಕ್ತ ಸೌಲಭ್ಯಗಳು ಮತ್ತು ವೈದ್ಯರ ಕೊರತೆ ಬಾರದಂತೆ ಪ್ರತಿಯೊಂದು ಆಸ್ಪತ್ರೆಗಳಲ್ಲೂ ಎಚ್ಚರಿಕೆಯ ನಿಗಾ ವಹಿಸುವುದು ಅಗತ್ಯವಾಗಿದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

ದುಬಾರಿ ದುನಿಯಾದಲ್ಲಿ ಜೀವನ ಕಷ್ಟ

ಮಾನ್ಯರೆ,

ಈ ರೀತಿ ಬೆಲೆ ಏರಿಕೆಯಾದಲ್ಲಿ ಸಾಮಾನ್ಯ ಜನರ ಜೀವನ ಅತಂತ್ರಗೊಳ್ಳುತ್ತದೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿರುವುದರಿಂದ ಜೀವನ ಅತ್ಯವಶ್ಯಕವಾದ ವಸ್ತುಗಳು ಬೆಲೆ ಏರಿಕೆಯಾಗುತ್ತವೆ. ಸರಕು ಸಾಗಾಣಿಕೆಯ ವೆಚ್ಚ ಅಧಿಕವಾಗುವುದರಿಂದ ದಿನಸಿ ಪದಾರ್ಥಗಳು ಹೋಟೆಲ್ ತಿಂಡಿ, ಊಟ, ಕಾಫಿ ದರಗಳು ಏರಿಕೆಯಾಗುತ್ತವೆ. ಇದನ್ನೆ ನೆಚ್ಚಿಕೊಂಡವರಿಗೆ ತುಂಬಾ ಕಷ್ಟವಾಗುತ್ತದೆ. ದಿನದಿಂದ ದಿನಕ್ಕೆ ಪದಾರ್ಥಗಳ ಬೆಲೆ ಏರಿಕೆಯಿಂದ ಸಾಮಾನ್ಯ ಜನರ ಬದುಕು ಅತಂತ್ರವಾಗುತ್ತದೆ. ಜೀವನ ಅವಶ್ಯಕ ಪದಾರ್ಥಗಳನ್ನು ಕೊಳ್ಳುವುದಕ್ಕೂ ಕಷ್ಟವಾಗುತ್ತದೆ. ಎಲ್ಲರಿಗೂ ದಿನದ ಕೂಲಿಗಳು ಇರಬಹುದು. ತಿಂಗಳ ಸಂಬಳದಲ್ಲಿ ಏರಿಕೆಯಾಗುವುದಿಲ್ಲ. ಈಗಾಗಲೇ ಶಾಲೆ ತೆರೆಯುವ ಸಮಯ. ಆದ್ದರಿಂದ ಎಲ್ಲರಿಗೂ ಅಧಿಕ ಖರ್ಚಿನ ಹೊರೆಯಾಗುತ್ತದೆ. ಇನ್ನು ಬಡವರ ಗಂಜಿ ಊಟವೇ ಅವರಿಗೆ ಮೃಷ್ಟಾನ್ನ ಊಟವಾಗುತ್ತದೆ. ಕನಿಷ್ಠ ಮಟ್ಟದ ಜೀವನ ನಡೆಸಲು ಕಷ್ಟವಾಗುತ್ತದೆ. ಸಾಮಾನ್ಯ ಜನರ ಕಷ್ಟವನ್ನು ಅರಿತು ಬೆಲೆ ಏರಿಕೆಯನ್ನು ತಡೆಗಟ್ಟಬೇಕು.

–ಎಂ.ಎಸ್.ಉಷಾ ಪ್ರಕಾಶ್, ಲೇಖಕಿ, ಕವಯಿತ್ರಿ ಮೈಸೂರು.

ಮೂಕ ಜೀವಗಳ ಉಳಿಸುವುದು ನಮ್ಮ ಹೊಣೆ

ಮಾನ್ಯರೇ,

ಇತ್ತೀಚಿನ ತೀವ್ರ ಬೇಸಿಗೆಯಿಂದಾಗಿ ರಾಜ್ಯದಾದ್ಯಂತ ತಾಪಮಾನವು 43ಡಿಗ್ರಿ ಸೆಲ್ಸಿಯಸ್ ದಾಟುತ್ತಿದ್ದು ಅಂತರ್ಜಲ ಕುಸಿತದಿಂದ ಕೆರೆ ಕುಂಟೆಗಳು ಬತ್ತಿ ಹೋಗಿವೆ. ವರದಿಗಳ ಪ್ರಕಾರ ಕುಡಿಯುವ ನೀರಿನ ಕೊರತೆಯಿಂದ ಪ್ರತಿವರ್ಷ ಸಾವಿರಾರು ಪಕ್ಷಿಗಳು ಮತ್ತು ವನ್ಯಜೀವಿಗಳು ಸಾವನ್ನಪ್ಪುತ್ತಿವೆ. ಕೇವಲ ಮನುಷ್ಯರಿಗಾಗಿ ಟ್ಯಾಂಕರ್ ನೀರು ಒದಗಿಸಿದರೆ ಸಾಲದು ಪ್ರಕೃತಿಯ ಸಮತೋಲನ ಕಾಯುವ ಪ್ರಾಣಿ ಪಕ್ಷಿಗಳಿಗೂ ಬದುಕುವ ಹಕ್ಕಿದೆ.

ಸರ್ಕಾರವು ತಕ್ಷಣವೇ ಜಾಗೃತಿ ಅಭಿಯಾನ ಹಮ್ಮಿಕೊಳ್ಳಬೇಕು. ಸಾರ್ವಜನಿಕ ಸ್ಥಳಗಳಲ್ಲಿ, ಉದ್ಯಾನವನಗಳಲ್ಲಿ ಮತ್ತು ಅರಣ್ಯ ಪ್ರದೇಶಗಳ ಅಂಚಿನಲ್ಲಿ ಕೃತಕ ನೀರಿನ ಹೊಂಡಗಳನ್ನು ನಿರ್ಮಿಸಬೇಕು. ಶಾಲಾ ಕಾಲೇಜುಗಳ ಮೂಲಕ ಮಕ್ಕಳಿಗೆ ಮನೆಯ ಮೇಲೆ ನೀರು ಮತ್ತು ಆಹಾರ ಇಡುವಂತೆ ಪ್ರೇರೇಪಿಸಬೇಕು. ಮಾಧ್ಯಮಗಳ ಮೂಲಕ ಜೀವಜಲ ಅಭಿಯಾನ ನಡೆಸಬೇಕು. ಪ್ರಾಣಿಗಳಿಗೆ ದಯೆ ತೋರುವುದು ಕೇವಲ ಸದಾಚಾರವಲ್ಲ ಅದು ನಮ್ಮ ಪರಿಸರ ಉಳಿವಿನ ಅನಿವಾರ್ಯತೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು.

–ಡಾ. ವಿಜಯಕುಮಾರ್ ಎಚ್.ಕೆ., ಮೈಸೂರು.

ಮಾಡುವ ಕೆಲಸ ಸರಿಯಾಗಿ ಮಾಡಿ...



ಮಾನ್ಯರೇ,

ನಮ್ಮ ಜನಗಳು ಮಾಡುವ ಕೆಲಸಗಳ ಗುಣಮಟ್ಟ ಹೇಗಿದೆ ನೋಡಿ. ನ್ಯಾಯಾಲಯಗಳ ಮುಂದೆ ವಾಣಿ ವಿಲಾಸ ರಸ್ತೆಯಲ್ಲಿ ಕೇಬಲ್ ಹಾಕಲು ತೆಗೆದ ಹಳ್ಳವನ್ನು ಸರಿಯಾಗಿ ಮುಚ್ಚದ ಕಾರಣ ರಾತ್ರಿ ಸುರಿದ ಮಳೆಗೆ ಸುಮಾರು ಮೂರು ಅಡಿಗಳಷ್ಟು ಆಳದ ಕೊರಕಲು ಉಂಟಾಗಿದ್ದು, ಓಡಾಡುವ ಜನರಿಗೆ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ. ಸಂಬಂಧಪಟ್ಟವರು ಕೊರಕಲನ್ನು ತುಂಬಿ ರಸ್ತೆಬದಿಯನ್ನು ಮೊದಲ ಸ್ಥಿತಿಗೆ ತಂದು ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ.

–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಟೋಪಿ ಹಾಕಬಹುದು!

ಮಾನ್ಯರೆ,

ಇನ್ನು ಮುಂದೆ ಶಾಲಾ–ಕಾಲೇಜುಗಳಲ್ಲಿ ಹಿಜಾಬ್ ಹಾಕಬಹುದು! ಕೇಸರಿ ಶಾಲು,ಪೇಟಾ ಹಾಕಬಾರದು... ಎಂದಿದ್ದಾರೆ ಮುಖ್ಯಮಂತ್ರಿ ಸಿದ್ದರಾಮಯ್ಯ!

ಮುಂದಿನ ಚುನಾವಣೆಯಲ್ಲಿ ಮತದಾರರು ನಿಮ್ಮ ಪಕ್ಷಕ್ಕೆ ಟೋಪಿ ಹಾಕಿಯಾರು ಎಚ್ಚರಿಕೆ? **–ಪಿ.ಜೆ.ರಾಘವೇಂದ್ರ, ಮೈಸೂರು.**



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಬದುಕು ಎಲ್ಲಕ್ಕಿಂತ ದೊಡ್ಡದು...



> ಅಹಂಕಾರ, ಹೊಟ್ಟೆಕಿಚ್ಚು, ದ್ವೇಷಗಳನ್ನು ಬೆಳೆಸಿಕೊಳ್ಳದೇ ಮಾನವೀಯತೆ, ಸಹಾನುಭೂತಿ, ಕರುಣೆ ಗುಣಗಳನ್ನು ಬೆಳೆಸಿಕೊಂಡು ಮುಂದೆ ಸಾಗುವಂತಾಗಬೇಕು. ನಮ್ಮ ಬದುಕು ಇತರರಿಗೂ ಮಾರ್ಗದರ್ಶನವಾಗಿ, ಮಾರ್ಗದರ್ಶಕವಾಗಿದ್ದರೆ ಆ ಬದುಕಿಗೊಂದು ಮೌಲ್ಯ, ಮನ್ನಣೆ ಸಿಗುತ್ತದೆ. ಸಾವಿನ ನಂತರವೂ ಜನಮಾನಸದಲ್ಲಿ ನಮ್ಮನ್ನು ಜೀವಂತವಾಗಿಸಿರುತ್ತವೆ. ಬದುಕಿರುವಾಗಲೇ ಒಬ್ಬರನ್ನೊಬ್ಬರು ಪ್ರೀತಿಸುವ, ಪರಸ್ಪರ ಗೌರವಿಸುವ ಮನೋಭಾವ ಬೆಳೆಸಿಕೊಳ್ಳೋಣ.

ಆಯುಷ್ಯವನ್ನು ಮೀರಿ ಒಂದು ಗಳಿಗೆಯು ಬದುಕಿರಲು ಸಾಧ್ಯವಿಲ್ಲ. ಬದುಕಿರುವವರೆಗೆ ಚೆನ್ನಾಗಿ ಬದುಕಬೇಕು, ಮಜಾ ಮಾಡಬೇಕು. ಜಿಮ್, ಆರೋಗ್ಯ, ಸೌಂದರ್ಯ ಏನಿದ್ದರೇನೂ ಎಲ್ಲವೂ ವ್ಯರ್ಥ, ಉಳಿಯಬೇಕಾದ ಬದುಕು ಅನರ್ಥ....

ಇತ್ತೀಚೆಗೆ ನಿಧನರಾದ ಪ್ರತಿಭಾವಂತ ನಟ ದಿಲೀಪ್‌ರಾಜ್ ಅವರ ಆಕಸ್ಮಿಕ ನಿಧನದ ನಂತರ ಮತ್ತೆ ಮತ್ತೆ ಈ ಮಾತುಗಳು ಎಲ್ಲರ ಬಾಯಲ್ಲಿಯೂ ಬರುತ್ತಿವೆ (ಅವರು ಬದುಕಿದ್ದಾಗ ಅವರ ಸಿನಿಮಾ, ನಟನೆ ನೋಡಿ ಎಷ್ಟು ಜನ ಒಳ್ಳೆಯ ಮಾತನಾಡಿದ್ರು? ಅವರೇ ನಿರ್ಮಿಸಿದ್ದ ಸಿನಿಮಾಗಳನ್ನು ನೋಡಿ ಪ್ರೋತ್ಸಾಹ ನೀಡಿದ್ರು? ಈ ಪ್ರಶ್ನೆಗಳಿಗೆ ನೀಡುವ ಉತ್ತರ ನಮ್ಮನ್ನು ಚುಚ್ಚದಿದ್ದರೆ ಸರಿ ಅಷ್ಟೇ!)ಇದು ಪುನೀತ್ ರಾಜ್‌ಕುಮಾರ್ ಆದಿಯಾಗಿ ಚಿಕ್ಕ ವಯಸ್ಸಿಗೆ ಅಕಾಲಿಕವಾಗಿ ನಿಧನರಾದಾಗಲೆಲ್ಲಾ ಯುವಪೀಳಿಗೆಯವರನ್ನು ಸಾಮಾನ್ಯವಾಗಿ ಬದುಕಿನ ಬಗ್ಗೆ, ವಿಧಿಯಾಟದ ಬಗ್ಗೆ, ದೇವರ ಬಗ್ಗೆ ಅಸಹನೆ, ಅಸಂತೋಷಗಳು ಉಂಟಾಗಿ ಬೇಸರದಿಂದ ಈ ಮಾತುಗಳನ್ನಾಡುವುದು ಸಹಜ.

ಬದುಕು ಎಲ್ಲವನ್ನೂ ಮೀರಿದ್ದು ಎಂಬುದನ್ನು ಮರೆಯಬಾರದು. ಹಾಗೇ ನೋಡಿದರೆ ಮನುಷ್ಯನ ಬದುಕು ನೀರ ಮೇಲಿನ ಗುಳ್ಳೆಯಂತೆ. ಹುಟ್ಟಿದ ಪ್ರತಿಯೊಬ್ಬರೂ ಒಂದಲ್ಲ ಒಂದು ದಿನ ಈ ಭೂಮಿಯನ್ನು, ಇಲ್ಲಿನ ಬಂಧಗಳನ್ನು–ಬಂಧುಗಳನ್ನು ಬಿಟ್ಟು ಹೊರಡಲೇಬೇಕು. ಜನನ, ಮರಣಗಳನ್ನೆರಡನ್ನೂ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಶಾಶ್ವತವಲ್ಲದ ಈ ಬದುಕಿನಲ್ಲಿ ಇರುವಷ್ಟು ದಿನ ಸಂತೋಷದಿಂದ, ಸಾಧ್ಯವಾದಷ್ಟು ಮತ್ತೊಬ್ಬರಿಗೆ ಕೇಡನ್ನು ಬಯಸದೆ, ಜನರಿಗೊಪ್ಪುವಂತೆ ಬಾಳಲಾಗದಿದ್ದರೂ ಆತ್ಮಸಾಕ್ಷಿಗೊಪ್ಪುವಂತೆ ಬದುಕಿ ಕೈಲಾದ ಮಟ್ಟಿಗೆ ಸಹಾಯವನ್ನು ಮಾಡಿ ಸಂತೋಷದಿಂದ ಬಾಳ್ವೆ ನಡೆಸಬೇಕು.

ದ್ವೇಷ ಬಿಟ್ಟು, ಪ್ರೀತಿ ಹಂಚೋಣ...

ಕಾಲ ಬದಲಾಗುತ್ತಿದೆ. ಜನರ ಮನೋಭಾವಗಳು ಬದಲಾಗುತ್ತಿವೆ, ಸಂಬಂಧಗಳಿಗೆ ಬೆಲೆ ಇಲ್ಲ, ಎಲ್ಲವನ್ನೂ ವ್ಯವಹಾರದ ದೃಷ್ಟಿಕೋನದಿಂದ ನೋಡುವ ಮನೋಭಾವ ಉದ್ಭವವಾಗಿದೆ. ಹೀಗೆ ಬರೀ ನಕಾರಾತ್ಮಕ ಮಾತುಗಳನ್ನೇ ಕೇಳಿ, ಕೇಳಿ ಇರುವ ಒಳ್ಳೆಯತನವನ್ನು ಮರೆಯುತ್ತಲಿರುವೆವು. ಸುತ್ತಮುತ್ತ ಇರುವ ಒಳ್ಳೆಯತನಗಳೆಲ್ಲ ನಮ್ಮ ಅನುಮಾನದ ದೃಷ್ಟಿಕೋನದಿ ಕಣ್ಮರೆಯಾಗುತ್ತಿವೆ. ಎಲ್ಲೆಲ್ಲಿಯೂ ಬರೀ ಮತ್ಸರದ. ದ್ವೇಷದ ಮಾತುಕತೆಗಳನ್ನೇ ಕೇಳಿ, ಕೇಳಿ ಈ ಶ್ರೇಷ್ಠವಾದ ಮನುಷ್ಯ ಜನುಮದಿ ಪ್ರೀತಿ ಭಾವನೆಯನ್ನೇ ಮರೆತು ಜೀವಿಸುತ್ತಿದ್ದೇವೆ.

ನಾವು ಏನನ್ನು ಬಿತ್ತುತ್ತೇವೆಯೋ ಅದರ ಪ್ರತಿಫಲ ನಮಗೆ ದೊರಕುವುದು. ದ್ವೇಷವನ್ನು ಬಿತ್ತಿದರೆ, ದ್ವೇಷದ ಪ್ರತಿಫಲವೇ ಸಿಗುತ್ತದೆ.ಅದೇ ಪ್ರೀತಿಯನ್ನು ಬಿತ್ತಿದರೆ. ಸಂತೋಷವನ್ನು ಹಂಚಿದರೆ ಅದರ ಪ್ರತಿಫಲ ಪ್ರೀತಿಯಾಗಿಯೇ ಸಿಗುತ್ತದೆ. ಆತ್ಮೀಯರು, ಬಂಧುಗಳು ನಿಧನರಾದ ಬಳಿಕವೇ ಅವರ ಭಾವನೆಗಳು ಅರ್ಥವಾಗುವುದು ಎನ್ನುವುದಾದರೆ, ಅಲ್ಲಿ ಮಾನವೀಯತೆಗೆ ಜಾಗವಿಲ್ಲವೆಂದೇ ಅರ್ಥ. ಬದುಕಿರುವಾಗಲೇ ಒಬ್ಬರನ್ನೊಬ್ಬರು ಪ್ರೀತಿಸುವ, ಪರಸ್ಪರ ಗೌರವಿಸುವ, ಮಾನವೀಯತೆಯ ಗುಣಗಳನ್ನು ಬೆಳೆಸಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳುವುದನ್ನು ಕಲಿತರೆ ನಿಜವಾದ ಅರ್ಥದಲ್ಲಿ ಬದುಕಿಗೊಂದು ಬೆಲೆ, ಹುಟ್ಟಿಗೊಂದು ಸಾರ್ಥಕತೆ ಬರುತ್ತದೆ.

ನಾಲ್ಕು ಒಳ್ಳೆಯ ಮಾತಾಡೋಣ...

ಪ್ರತಿಯೊಬ್ಬರಲ್ಲಿಯೂ ಅವರದೇ ಆದ ಪ್ರತಿಭೆ ಅಡಗಿರುತ್ತದೆ. ಅವಕಾಶಗಳನ್ನು ಬಳಸಿಕೊಂಡು ಪ್ರತಿಭೆಯನ್ನು ತೋರಿದವರಿಗೆ, ಒಳ್ಳೆಯ ಕೆಲಸಗಳನ್ನು ಮಾಡಿದವರ ಬಗ್ಗೆ ಒಳ್ಳೆಯ ನಾಲ್ಕು ಮಾತುಗಳನ್ನು ಆಡುವುದನ್ನು ಕಲಿಯೋಣ. ನಮ್ಮಿಂದ ಮಾಡಲಾಗದ ಕೆಲಸಗಳನ್ನು ಬೇರೆಯವರು ಮಾಡಿದಾಗ ಅಥವಾ ಒಳ್ಳೆಯ ಕೆಲಸಗಳನ್ನು ಮಾಡಿರುವುದನ್ನು ನೋಡಿದಾಗ ಅದನ್ನು ಗುರುತಿಸಿ ಒಳ್ಳೆಯ ಮಾತುಗಳನ್ನಾಡಿದರೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಮುಂದೆ ಅವರು ಮತ್ತಷ್ಟು ಒಳ್ಳೆಯ ಕೆಲಸಗಳನ್ನು ಮಾಡಲು ಉತ್ತೇಜನ ಸಿಗುತ್ತದೆ. ನನಗೆ ಇದನ್ನು ಹೇಳುವಾಗ ಇತ್ತೀಚೆಗೆ ಕೆ.ಸಿ.ಶಿವಪ್ಪ ಸರ್ ಅವರ ಕಾವ್ಯಗಳ ವಿಚಾರ ಸಂಕಿರಣದಲ್ಲಿ ಹಿರಿಯ ವಿದ್ವಾಂಸರಾದ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಹೇಳಿದ ಮಾತೊಂದು ನೆನಪಿಗೆ ಬರುತ್ತದೆ.

ಒಮ್ಮೆ ಬಿ.ಎಂ.ಶ್ರೀ ಅವರಿಗೆ ವಿದ್ಯಾರ್ಥಿಯೊಬ್ಬ ತಾನು ಬರೆದ ಇಂಗ್ಲಿಷ್ ಕವನಗಳನ್ನು ತೋರಿಸಿದನಂತೆ. ಅದನ್ನು ನೋಡಿದ ಬಿ.ಎಂ.ಶ್ರೀ ಅವರು ಚೆನ್ನಾಗಿದೆ, ಹೀಗೆ ಉತ್ತಮವಾಗಿ ಬರೆಯುವುದನ್ನು ಅಭ್ಯಾಸ ಮಾಡು ಎಂದು ಹರಸಿ ಕಳುಹಿಸಿದರು. ಬಿ.ಎಂ.ಶ್ರೀ ಅವರ ಆಪ್ತರು ಆ ಮಾತನ್ನು ಕೇಳಿ ಆ ಹುಡುಗ ಹೋದ ನಂತರ ಅಲ್ಲ ಸರ್ ಹುಡುಗನ ಕವನಗಳು ಸುಮಾರಾಗಿವೆ. ಭಾವನೆಗಳು, ಅಕ್ಷರಗಳ ಬಳಕೆ ಇನ್ನೂ ಪಳಗಬೇಕು, ಹೀಗಿರುವಾಗ ನೀವು ಚೆನ್ನಾಗಿದೆ ಅಂತ ಹೇಳಿದ್ದು ತಪ್ಪಲ್ಲವೇ ಸರ್? ಎಂದಾಗ ಬಿ.ಎಂ.ಶ್ರೀ ಅವರು ನಕ್ಕು ಈ ರೀತಿ ಹೇಳಿದರಂತೆ–ಅದು ಆ ಯುವಕನ ಮೊದಲ ಬರಹಗಳು. ದೊಡ್ಡ ಸಾಹಿತಿಯ ಬರಹಗಳನ್ನು ನೋಡುವ ದೃಷ್ಟಿಕೋನದಿಂದ ಆ ಯುವಕನ ಬರಹವನ್ನು ನೋಡಬಹುದೇ? ಕವನ ಮಗುವಿನಂತೆ, ಅದು ಹುಟ್ಟಿ ಅಂಬೆ ಕಾಲಿಟ್ಟಿದೆ, ಅದಿನ್ನು ಬೆಳೆಯಬೇಕು. ಹಾಗೆಂಯೇ ಆರಂಭದಲ್ಲಿಯೇ ಅವನ ಕವನಗಳನ್ನು ನಿಂದಿಸಿದರೆ ಮಗುವನ್ನು ಸಣ್ಣದರಲ್ಲಿಯೇ ಸಾಯಿಸಿದಂತಾಗುತ್ತದೆ. ಯಾರಲ್ಲಿ ಸತ್ವವಿರುತ್ತದೆಯೋ ಅವರು ಮುಂದೆ ಕಾವ್ಯದಲ್ಲಿ ಪಾಂಡಿತ್ಯ ಪಡೆದು ಗಟ್ಟಿಯಾಗಿ ನೆಲೆ ನಿಲ್ಲುವರು. ಸತ್ವವಿಲ್ಲದವರು ಮರೆಯಾಗಿ ಹೋಗುವರು. ಬರಹಕ್ಕೆ ಮೊದಲು ಪ್ರೋತ್ಸಾಹ ನೀಡಬೇಕು. ಒಂದೊಳ್ಳೆಯ ಮಾತುಗಳನ್ನಾಡುವುದರಿಂದ ಕಳೆದುಕೊಳ್ಳುವುದು ಏನಿದೆ ಎಂದರಂತೆ.

ನನಗೆ ಬಿ.ಎಂ.ಶ್ರೀ ಅವರ ಮಾತು ತುಂಬಾ ಪ್ರಭಾವವನ್ನು ಬೀರಿತು. ನಮ್ಮಲ್ಲಿ ಅನೇಕರಿಗೆ ಒಳ್ಳೆಯ ಮಾತುಗಳನ್ನಾಡಿ ಪ್ರೋತ್ಸಾಹಿಸುವ ಗುಣವೇ ಇರುವುದಿಲ್ಲ. ಕಿಚ್ಚಿಗಿಂತ ಹೊಟ್ಟೆ ಕಿಚ್ಚೇ ಮೇಲಾಗಿ ಆ ವ್ಯಕ್ತಿ ಇರುವವರೆಗೂ ಅವನಿಗೆ ಇನ್ನಿಲ್ಲದಂತೆ ಹಿಂಸೆ, ರೋಧನೆಯನ್ನು ನೀಡಿ ಸತ್ತ ನಂತರ ಬಂದು ಗೋಳಾಡಿ, ಸಾವಿರ ಒಳ್ಳೆಯ ಮಾತುಗಳನ್ನಾಡಿದರೆ ಪ್ರಯೋಜನವೇನು? ಬದುಕಿದ್ದಾಗ ಅಗತ್ಯವಿದ್ದಾಗ ಸಹಾಯ ನೀಡದೇ ಸತ್ತ ನಂತರ ಸಾವಿರ ರೂಪಾಯಿ ಹೂವಿನ ಹಾರ ತಂದು ಹಾಕಿದರೇನು ಫಲ? ಸಾಧ್ಯವಾದಷ್ಟು ಜನರೊಂದಿಗೆ ಒಳ್ಳೆಯ ವಿಚಾರಗಳನ್ನು ವಿನಿಮಯ ಮಾಡಿಕೊಂಡು, ಒಳ್ಳೊಳ್ಳೆಯ ಮಾತುಗಳನ್ನಾಡುವ ಗುಣವನ್ನು ಬೆಳೆಸಿಕೊಳ್ಳೋಣ. ಬದುಕು ವಿಶಾಲವಾದುದು ಕೂಡ ಹೌದು, ಕ್ಷಣಿಕವಾದುದು ಕೂಡ ಹೌದು.ಆದ್ದರಿಂದ ಒಳ್ಳೆಯ ಮಾತುಗಳನ್ನಾಡುತ್ತಾ ಪರಸ್ಪರ ಗೌರವವನ್ನು ನೀಡುತ್ತಾ ಬಾಳೋಣ, ಬದುಕನ್ನು ಹಸನಾಗಿಸಿಕೊಳ್ಳೋಣ.

ನಮ್ಮಂತೆ ಇತರರು ಎಂದು ತಿಳಿಯೋಣ...

ನಮಗೆ ನೋವಾದಂತೆ ಮತ್ತೊಬ್ಬರಿಗೂ ಆಗುತ್ತದೆ. ನಮ್ಮಂತೆ ಇತರರು ಕೂಡ ಎಂಬುದನ್ನು ಅರ್ಥ ಮಾಡಿಕೊಳ್ಳೋಣ. ನಮ್ಮ ಕಷ್ಟ ನಮಗೆ ಅರ್ಥವಾದರೆ ನಾವು ಬದುಕಿದ್ದೇವೆ ಎಂದೂ, ಮತ್ತೊಬ್ಬರ ನೋವು ನಮಗರ್ಥವಾದರೆ ಮಾನವೀಯತೆ ನಮ್ಮಲ್ಲಿನ್ನೂ ಸ್ವಲ್ಪವಾದರೂ ಉಳಿದಿದೆ ಎಂದೂ ಅರ್ಥ ಎಂಬ ಹಿರಿಯರ ಮಾತು ಸತ್ಯವಾದುದು. ಅದಕ್ಕೆ ಸರ್ವಜ್ಞಕವಿ ಹೇಳಿರುವ ಮಾತು ಇಲ್ಲಿ ಪ್ರಸ್ತುತವಾದುದು ಎನಿಸುತ್ತದೆ

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದೊಡೆ ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ.

ಈ ಮಾತೊಂದು ಮನುಜನಿಗೆ ಅರ್ಥವಾಗಿದ್ದೇಯಾದರೆ ಯಾರು ಯಾರನ್ನೂ ನೋಯಿಸುವುದಿಲ್ಲ. ನಮ್ಮಂತೆ ಇತರರು ಎಂದು ಅರ್ಥ ಮಾಡಿಕೊಂಡ ದಿನ ಪರಸ್ಪರ ಒಬ್ಬರಿಗೊಬ್ಬರು ತಮ್ಮ ಶಕ್ತಿಗನುಗುಣವಾಗಿ ಸಹಾಯ ಮಾಡುತ್ತಾ, ಭಾವನೆಗಳಿಗೆ ಸ್ಪಂದಿಸುತ್ತಾ ಬದುಕುವುದನ್ನು ಕಲಿಯಬಹುದು. ಇಲ್ಲದಿದ್ದರೆ ಬದುಕಿನುದ್ದಕ್ಕೂ ನಿಂದನೆಯ ಮಾತುಗಳನ್ನಾಡುತ್ತಾ, ಅಸೂಯೆ, ಕೋಪದ ಮಾತುಗಳಿಂದ ನಮ್ಮ ಮನಸ್ಸನ್ನು ಹಾಳು ಮಾಡಿಕೊಂಡು ಮತ್ತೊಬ್ಬರಿಗೂ ನೋವನ್ನುಂಟು ಮಾಡುತ್ತಾ ಆತ್ಮವಿಲ್ಲದ ಶರೀರದಂತೆ, ಮಾನವೀಯತೆ ಇಲ್ಲದ ಬದುಕಿನಂತೆ ವ್ಯರ್ಥವಾದ ಜೀವನವನ್ನು ನಡೆಸಬೇಕಾಗುತ್ತದೆ.

ಮನರಂಜನೆಗಿಂತ ಮುಂದಾಲೋಚನೆ ಮುಖ್ಯ

ಬದುಕು ಕ್ಷಣಿಕ, ಹಾಗಾಗಿ ಇರುವುದರೊಳಗೆ ಮಜಾ ಮಾಡುತ್ತಾ ಜೀವನ ಕಳೆಯಬೇಕೆಂಬುದು ಇಂದಿನ ಬಹುತೇಕ ಯುವ ಸಮೂಹದ ಮನಸ್ಥಿತಿ. ಒಂದರ್ಥದಲ್ಲಿ ಇದು ನಿಜ ಎನಿಸಿದರೂ ಕೂಡ ಅದು ವಾಸ್ತವವಲ್ಲ. ಕಡಿಮೆ ವಯಸ್ಸಿನವರು ನಿಧನರಾದಾಗ ಈ ರೀತಿ ಅನಿಸುವುದು ಸಹಜ, ಆದರೆ ಎಲ್ಲರಿಗೂ ಒಂದೇ ತರಹ ಸಾವು ಬರುವುದಿಲ್ಲ ಅಥವಾ ಎಲ್ಲರ ಬದುಕು ಒಂದೇ ತರಹ ಇರುವುದಿಲ್ಲ. ಆದಾಯಕ್ಕಿಂತ ವ್ಯಯ ಹೆಚ್ಚು ಮಾಡಿಕೊಂಡರೆ, ದುಡಿಯುವುದರಲ್ಲಿ ಉಳಿತಾಯ ಮಾಡದೇ ಎಲ್ಲವನ್ನೂ ಖರ್ಚು ಮಾಡಿದರೆ, ಮುಂದಿನ ಜೀವನದ ಬಗ್ಗೆ ಆಲೋಚನೆ ಮಾಡದೇ ಬದುಕುತ್ತಾ ಹೋದರೆ ಮುಂದೆ ಬಹಳಷ್ಟು ಪರಿತಪಿಸಬೇಕಾಗುತ್ತದೆ. ಏಕೆಂದರೆ ನಮ್ಮನ್ನು ನಂಬಿಕೊಂಡು ತಂದೆ, ತಾಯಿ, ಮಡದಿ, ಮಕ್ಕಳು ಇರುವುದರಿಂದ ಮುಂದೆ ನಾವಿಲ್ಲದಿದ್ದರೂ ಅವರಿಗೆ ತೊಂದರೆಯಾಗದಂತೆ (ನಾವಿಲ್ಲದ ದುಃಖದೊಂದಿಗೆ ನಮ್ಮ ಜೀವನಕ್ಕೆ ಏನು ಭದ್ರತೆ ಒದಗಿಸಿಲ್ಲ ಎಂಬ ಆತಂಕ ನಮ್ಮವರನ್ನು ಕಾಡಬಾರದು) ಭದ್ರತೆಯನ್ನು ಒದಗಿಸಿ ಕೊಡುವುದು ಮುಖ್ಯವಾಗಿರುತ್ತದೆ. ತಿರುಗಾಟ, ಸುತ್ತಾಟ ಯಾವಾಗ ಬೇಕಾದರೂ ಮಾಡಬಹುದು, ಆದರೆ ಬದುಕಿನಲ್ಲಿ ಭದ್ರತೆ ಮುಖ್ಯವಾಗಿರುತ್ತದೆ. ಮುಂದಾಲೋಚನೆ ಇಲ್ಲದೆ ಹೇಗೇ ಬೇಕಾದರೂ ಬದುಕುವುದನ್ನು ರೂಢಿಸಿಕೊಂಡರೆ ಮುಂದೆ ಇದರಿಂದಲೇ ಪರಿತಪಿಸುವಂತಾಗುತ್ತದೆ. ಬದುಕಿರುವವರೆಗೆ ಸಂತೋಷದಿಂದ ಬದುಕಬೇಕು. ಆದರೆ ಅದರ ಜೊತೆಗೆ ಆರೋಗ್ಯ, ಸಂಬಂಧಗಳು ಮತ್ತು ಭವಿಷ್ಯದ ಭದ್ರತೆಯನ್ನೂ ಕಾಪಾಡಿಕೊಳ್ಳಬೇಕು.

ಬದುಕು ಎಲ್ಲವ ಮೀರಿದ್ದು, ಎಲ್ಲರನ್ನೂ ಮೀರಿದ್ದು...

ಬದುಕು ಎನ್ನುವುದು ಎಲ್ಲವನ್ನೂ, ಎಲ್ಲರನ್ನೂ ಮೀರಿದ್ದು. ಈ ಸತ್ಯ ತಿಳಿಯುವುದರೊಳಗೆ ಅರ್ಧ ಆಯುಷ್ಯವೇ ಮುಗಿದಿರುತ್ತದೆ. ಹಣ, ಆಸ್ತಿ, ಪದವಿ, ಗೌರವ ಕ್ಷಣಿಕವಾದವು. ಕಾಲ ಚಕ್ರ ತಿರುಗಿದಂತೆ ಒಂದಲ್ಲ ಒಂದು ದಿನ ಎಲ್ಲವೂ ಮರೆಯಾಗುತ್ತವೆ. ಆದರೆ ಕೊನೆಯವರೆಗೂ ಉಳಿಯುವುದು ಒಂದೇ ಅದು ನಮ್ಮ ವ್ಯಕ್ತಿತ್ವ. ಜನರೊಂದಿಗೆ ಹೊಂದಿಕೊಂಡು ಪರಸ್ಪರ ಗೌರವ ಭಾವದಿಂದ ಒಬ್ಬರನ್ನೊಬ್ಬರು ತಿಳಿದುಕೊಂಡು ಬದುಕುವುದನ್ನು ಕಲಿಯಬೇಕು. ಅಹಂಕಾರ ಮನುಷ್ಯನಿಗೆ ಶೋಭೆ ತರದು, ಪ್ರಚಾರ ಎಲ್ಲ ಕಾಲದಲ್ಲಿಯೂ ಸಹಾಯಕ್ಕೆ ಬರದು. ಜಾತಿ, ಧರ್ಮಗಳೆಂಬ ಕಟ್ಟುಪಾಡುಗಳಿಗಿಂತ ಜೀವನ ಪ್ರೀತಿ ದೊಡ್ಡದು, ಮನುಷ್ಯತ್ವ ದೊಡ್ಡದು. ಎಲ್ಲಕ್ಕಿಂತ ಶ್ರೇಷ್ಠವಾದ ಈ ಬದುಕು ಎಲ್ಲವನ್ನೂ, ಎಲ್ಲರನ್ನೂ ಮೀರಿದ್ದು ಹಾಗಾಗಿ ಇರುವಷ್ಟು ದಿನ ಸಂತೋಷದಿಂದ ಸಾಮರಸ್ಯದಿಂದ ಬದುಕುವುದನ್ನು ಕಲಿಯಬೇಕು.

ಅಹಂಕಾರ, ಹೊಟ್ಟೆ ಕಿಚ್ಚು, ದ್ವೇಷಗಳನ್ನು ಬೆಳೆಸಿಕೊಳ್ಳದೇ ಮಾನವೀಯತೆ, ಸಹಾನುಭೂತಿ, ಕರುಣೆ ಗುಣಗಳನ್ನು ಬೆಳೆಸಿಕೊಂಡು ಮುಂದೆ ಸಾಗುವಂತಾಗಬೇಕು. ನಮ್ಮ ಬದುಕು ಇತರರಿಗೂ ಮಾರ್ಗದರ್ಶನವಾಗಿ, ಮಾರ್ಗದರ್ಶಕವಾಗಿದ್ದರೆ ಆ ಬದುಕಿಗೊಂದು ಮೌಲ್ಯ, ಮನ್ನಣೆ ಸಿಗುತ್ತದೆ. ಸಾವಿನ ನಂತರವೂ ಜನಮಾನಸದಲ್ಲಿ ನಮ್ಮನ್ನು ಜೀವಂತವಾಗಿಸಿರುತ್ತವೆ. ಬದುಕಿರುವಾಗಲೇ ಒಬ್ಬರನ್ನೊಬ್ಬರು ಪ್ರೀತಿಸುವ, ಪರಸ್ಪರ ಗೌರವಿಸುವ ಮನೋಭಾವವನ್ನು ಬೆಳೆಸಿಕೊಳ್ಳೋಣ.

ಮಧುರಚೆನ್ನ ಕಾವ್ಯನಾಮದ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿ ಅಪ್ರತಿಮ ಕವಿ

● ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲರಿಂದ ಸ್ಮರಣೆ ● ಮಧುರಚೆನ್ನ ಏಕವ್ಯಕ್ತಿ ನಾಟಕ ಪ್ರದರ್ಶನ



ಕಿರುರಂಗ ಮಂದಿರದಲ್ಲಿ ಮಧುರಚೆನ್ನ ನಾಟಕದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು,ಮೇ 17(ಪಿಎಂ)– ಕನ್ನಡ ಸಾಹಿತ್ಯ ಲೋಕದಲ್ಲಿ ಮಧುರಚೆನ್ನ ಕಾವ್ಯ ನಾಮದಿಂದ ಪ್ರಖ್ಯಾತರಾದ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿಯವರು ಅಪ್ರತಿಮ ಕವಿ ಎಂದು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ ಸ್ಮರಿಸಿದರು.


ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಕವಿತಾ ಕಲಾ ತಂಡದ ವತಿಯಿಂದ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಜೆಪಿಐಆರ್ ಸಹಕಾರದೊಂದಿಗೆ ಶನಿವಾರ ಹಮ್ಮಿಕೊಂಡಿದ್ದ ಗಣೇಶ ಅಮೀನಗಡ ರಚಿಸಿ ನಿರ್ದೇಶಿಸಿದ 'ಮಧುರಚೆನ್ನ–ಅನುಭಾವಿಯೊಂದಿಗೆ ಅನುಸಂಧಾನ' ಏಕವ್ಯಕ್ತಿ ನಾಟಕ ಪ್ರದರ್ಶನಕ್ಕೆ ನಾಟಕದ ಪೋಸ್ಟರ್ ಬಿಡುಗಡೆಗೊಳಿಸಿ ಚಾಲನೆ ನೀಡಿ ಮಾತನಾಡಿದರು.

ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿಯವರು ವಿಜಯಪುರ (ಹಿಂದಿನ ಬಿಜಾಪುರ) ಜಿಲ್ಲೆಯವರು. ನಾನು ಬಿಜಾಪುರ ಜಿಲ್ಲೆಯಲ್ಲಿ ಹುಟ್ಟಿದವನು. ಮಧುರಚೆನ್ನ ಅವರು ಅಪ್ರತಿಮ ಕವಿ. ನಮ್ಮ ಹಿರಿಯರಿಗೆ ಅವರ ಬಗ್ಗೆ ಗೊತ್ತಿದೆ. ಇಂದಿನ ಪೀಳಿಗೆಗೆ ಅವರನ್ನು ಪರಿಚಯಿಸುವುದು ಅವಶ್ಯಕ. ಅವರ ಸಾಹಿತ್ಯ ಕೃಷಿ, ಆದರ್ಶ ಜೀವನದ ಬಗ್ಗೆ ಈ ನಾಟಕದಲ್ಲಿ ಸಮಗ್ರವಾಗಿ ಕಟ್ಟಿಕೊಡಲಾಗಿದೆ. ಈ ನಾಟಕ ನಾಡಿನಾದ್ಯಂತ ದೊಡ್ಡ ಮಟ್ಟದಲ್ಲಿ ಪ್ರದರ್ಶನಗೊಳ್ಳಲಿ. ನಾಟಕ ರಚಿಸಿ, ನಿರ್ದೇಶಿಸಿದ ಗಣೇಶ ಅಮೀನಗಡ ಅವರಿಗೆ ಧನ್ಯವಾದ ಹಾಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ನಾಟಕ ನಿರ್ದೇಶಕ ಗಣೇಶ ಅಮೀನಗಡ ಮಾತನಾಡಿ, ಈ ನಾಟಕಕ್ಕೆ ಕಾರಣರಾದವರು ಶುಭಾ ಸಂಜಯ್ ಅರಸ್. ಕಳೆದ ವರ್ಷ ಅವರು ಸಾಹಿತ್ಯ ಸಂಭ್ರಮ ಏರ್ಪಡಿಸಿದ್ದಾಗ, ಅದರಲ್ಲಿ ಮಧುರಚೆನ್ನರ ಪುತ್ರ ದೇವಪ್ರಿಯ ಗಲಗಲಿಯವರು ಪಾಲ್ಗೊಂಡಿದ್ದರು. ಆಗ ಅವರ ಪರಿಚಯವಾಗಿ ಇಂದು ನಾಟಕ ಆಗಲು ಸಾಧ್ಯವಾಯಿತು ಎಂದು ತಿಳಿಸಿದರು.

ನಾಟಕ ಪ್ರದರ್ಶನ ನೀಡಿದ ಜಗದೇವ ಗಲಗಲಿ ಮಾತನಾಡಿ, ಮಧುರಚೆನ್ನ ಅವರು 20ನೇ ಶತಮಾನದ ಸಾಹಿತ್ಯ ಲೋಕ ಕಂಡಂತಹ ಅದ್ಭುತ ಅನುಭಾವಿ ಕವಿ. ಸಂಪಾದಕ, ಸಂಶೋಧಕ, ಬಹು ಭಾಷ ಪಂಡಿತ, ಲಿಪಿಶಾಸ್ತ್ರಜ್ಞ, ಶಾಸನಗಳ ಅಧ್ಯಯನದಲ್ಲೂ ಪಾಂಡಿತ್ಯ ಸಾಧಿಸಿದ್ದರು ಎಂದು ಸ್ಮರಿಸಿದರು.

ನಂತರ ಒಂದು ಗಂಟೆ ಅವಧಿಯ ನಾಟಕ ಪ್ರದರ್ಶನ ಕಂಡಿತು. ನಾಟಕ ವೀಕ್ಷಣೆಗೆ ಉಚಿತ ಪ್ರವೇಶ ಕಲ್ಪಿಸಲಾಗಿತ್ತು. ಮಧುರಚೆನ್ನರ ಪುತ್ರ ಡಾ.ದೇವಪ್ರಿಯ ಗಲಗಲಿ, ಹಿರಿಯ ಲೇಖಕ ಡಾ.ಮೊರಬದ ಮಲ್ಲಿಕಾರ್ಜುನ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಸಾಹಿತ್ಯ ಸಂಭ್ರಮ ಸಂಸ್ಥಾಪಕಿ ಶುಭಾ ಸಂಜಯ್ ಅರಸ್, ಎಸ್‌ಬಿಐ ಮೈಸೂರು ಮುಖ್ಯ ವ್ಯವಸ್ಥಾಪಕ ಪ್ರವೀಣ ಗೋರಬಾಳ ಮತ್ತಿತರರು ಹಾಜರಿದ್ದರು.



ಜಗದೇವ ಗಲಗಲಿ ಅವರು ನಾಟಕ ಪ್ರದರ್ಶನ ನೀಡುತ್ತಿರುವುದು.

ರಂಗ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ರಂಗಾಯಣದ ವತಿಯಿಂದ 2026–27ನೇ ಸಾಲಿನ ಹತ್ತು ತಿಂಗಳ ರಂಗ ಶಿಕ್ಷಣ ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ರಂಗಾಯಣದ ವೆಬ್‌ಸೈಟ್ http://rangayanamysorekarnataka.gov.in ಮೂಲಕ ಅಥವಾ ರಂಗಾಯಣದ ಕಚೇರಿಯಲ್ಲಿ ಖುದ್ದಾಗಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಮೇ 20 ಕಡೆಯ ದಿನ. ಹೆಚ್ಚಿನ ಮಾಹಿತಿಗೆ ದೂ: 0821–2512639 ಸಂಪರ್ಕಿಸಿ.

ಮೇ 30 ರಂದು ಮಾ ಉತ್ಸವ 2026

ಮೈಸೂರು: ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ 2026ರ ಮಾ ಉತ್ಸವವನ್ನು ಮೇ.30 ರಂದು ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯದ ಅಮೃತ ಮಹೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವೈದ್ಯಕೀಯ ವಿಚಾರಗೋಷ್ಠಿ, ಮಧ್ಯಾಹ್ನ 2ರಿಂದ 5.30ರವರೆಗೆ ಸಂಘದ ವಾರ್ಷಿಕ ಸಭೆ ಮತ್ತು 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಚುನಾವಣೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ: 9606344500 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಸೋಮವಾರ 18 ಮೇ 2026

ಮೇ 30ಕ್ಕೆ ಲೇಖಕ ವಿಕ್ರಮ್ ಸಂಪತ್ ಅವರ 'ನನ್ನ ಹೆಸರು ಗೌಹರ್ ಜಾನ್' ಅನುವಾದಿತ ಕೃತಿ ಬಿಡುಗಡೆ

ಮೈಸೂರು, ಮೇ 17– ಲೇಖಕ ಹಾಗೂ ಇತಿಹಾಸಕಾರ ಡಾ.ವಿಕ್ರಮ್ ಸಂಪತ್ ಅವರ 'ನನ್ನ ಹೆಸರು ಗೌಹರ್ ಜಾನ್' ಪುಸ್ತಕದ ಅನುವಾದಿತ ಕೃತಿ ಬಿಡುಗಡೆ ಸಮಾರಂಭವನ್ನು ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿರುವ ಜಗನ್ನಾಥ ಕಲಾ ಮತ್ತು ಸಂಸ್ಕೃತಿ ಕೇಂದ್ರ(ಜೆಸಿಎಸಿ)ದಲ್ಲಿ ಮೇ 30ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಲೇಖಕ ಡಾ.ವಿಕ್ರಮ್ ಸಂಪತ್ ಅವರ ಆಡಿಯೋ–ವಿಶ್ಯುಯಲ್ ಪ್ರಸ್ತುತಿ ಇರಲಿದ್ದು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಸಿಐಐಎಲ್‌ನ ಭಾಷಾಶಾಸ್ತ್ರಜ್ಞ ಹಾಗೂ ಸಂಶೋಧಕ ಡಾ.ನಾರಾಯಣ ಕುಮಾರ್ ಚೌಧರಿ ಉಪಸ್ಥಿತರಿರಲಿದ್ದಾರೆ. ಕಾರ್ಯಕ್ರಮದ ಪ್ರಯುಕ್ತ ರಿಯಾಯಿತಿ ಬೆಲೆಯಲ್ಲಿ ಪುಸ್ತಕ ಮಾರಾಟ, ಲೇಖಕರೊಂದಿಗೆ ಸೆಲ್ಫಿ ಹಾಗೂ ಹಸ್ತಾಕ್ಷರ ಪಡೆಯುವ ಅವಕಾಶವಿದೆ.

'ಸಂಗೀತ ಕಲಾವಿದೆಯೊಬ್ಬರ ಜೀವನ ಮತ್ತು ಕಾಲಘಟ್ಟ' ಉಪ ಶೀರ್ಷಿಕೆಯನ್ನೊಳಗೊಂಡ ಈ ಪುಸ್ತಕವನ್ನು ಶ್ರೀಗೌರಿ ಎಸ್.ಜೋಶಿ ಅವರು ಅನುವಾದಿಸಿದ್ದು, ಸಾಹಿತ್ಯ ಪ್ರಕಾಶನ ಸಂಸ್ಥೆ ಪ್ರಕಟಿಸಿದೆ. ಈ ಕೃತಿಯು 2012ರ ಸಾಹಿತ್ಯ ಅಕಾಡೆಮಿ ಯುವ ಪುರಸ್ಕಾರಕ್ಕೆ ಭಾಜನವಾಗಿದ್ದು, ಎನ್‌ಎಎವಿ ಎಐ ತಂತ್ರಾಂಶದ ಸಹಾಯದಿಂದ ಅನುವಾದಗೊಂಡ ಪ್ರಪ್ರಥಮ ಭಾರತೀಯ ಭಾಷೆಯ ಕೃತಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.


ಔಷಧಿ ವ್ಯಾಪಾರಿಗಳು ಮುಷ್ಕರದಲ್ಲಿ ಪಾಲ್ಗೊಳ್ಳದಂತೆ ಸಚಿವ ದಿನೇಶ್ ಗುಂಡೂರಾವ್ ಮನವಿ



ಮೈಸೂರು, ಮೇ 17– ರಾಜ್ಯದಲ್ಲಿ ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ಸ್ ಅಂಡ್ ಡ್ರಗ್ಗಿಸ್ಟ್ಸ್(ಎಐಓಸಿಡಿ) ಸಂಘಟನೆ ಕರೆ ನೀಡಿರುವ ರಾಜ್ಯವ್ಯಾಪಿ ಮುಷ್ಕರದಲ್ಲಿ ಪಾಲ್ಗೊಳ್ಳದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಔಷಧಿ ವ್ಯಾಪಾರಿಗಳಿಗೆ ಮನವಿ ಮಾಡಿದ್ದಾರೆ.

ಇದೇ ವೇಳೆ ಸಾರ್ವಜನಿಕರಿಗೆ ಯಾವುದೇ ರೀತಿಯ ಔಷಧಿ ಕೊರತೆಯಾಗದಂತೆ ಎಚ್ಚರಿಕೆ ವಹಿಸುವುದರ ಜೊತೆಗೆ ಆಸ್ಪತ್ರೆಗಳ ಔಷಧಿ ಮಳಿಗೆಗಳು ಎಂದಿನಂತೆ ಕಾರ್ಯನಿರ್ವಹಿಸುವಂತೆ ನಿಗಾ ವಹಿಸಬೇಕು. ಔಷಧಿ ಪೂರೈಕೆಗೆ ಯಾವುದೇ ಅಡಚಣೆ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಆನ್‌ಲೈನ್ ಮೂಲಕ ಔಷಧಿ ಮಾರಾಟ, ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಭಾರೀ ರಿಯಾಯಿತಿ ನೀತಿ ವಿರೋಧಿಸಿ ಮೇ 20ರಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಲಾಗಿದೆ.

ಶ್ರೀಮತಿ ಧನ್ಯಸತ್ಯೇಂದ್ರಮೂರ್ತಿ ಜೆ.ಪಿ.ನಗರ ಲಯನ್ಸ್ ಸಂಸ್ಥೆ ಅಧ್ಯಕ್ಷೆ





ಮೈಸೂರು, ಮೇ 16– ಜೆ.ಪಿ. ನಗರ ಲಯನ್ಸ್ ಸಂಸ್ಥೆಗೆ ಅಧ್ಯಕ್ಷರಾಗಿ ಶ್ರೀಮತಿ ಧನ್ಯಸತ್ಯೇಂದ್ರ ಮೂರ್ತಿ ಹಾಗೂ ಕಾರ್ಯದರ್ಶಿಯಾಗಿ ಗೆಜ್ಜಗಳ್ಳಿ ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರಸ್ತೆ, ನಾಲೆ ಅಭಿವೃದ್ಧಿಗೆ ಶಕ್ತಿ ಮೀರಿ ಸೇವೆ



ಶಾಸಕ ಕೆ.ಎಂ.ಉದಯ್ ರಸ್ತೆ ಅಭಿವೃದ್ಧಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಮದ್ದೂರು: ರೈತರು ಜಮೀನಿಗೆ ತೆರಳುವ ಸಂಪರ್ಕ ರಸ್ತೆಗಳನ್ನು ಹಾಗೂ ನಾಲೆಗಳ ಆಧುನೀಕರಣಗೊಳಿಸಬೇಕೆಂಬ ಉದ್ದೇಶದಿಂದ ಕೋಟ್ಯಾಂತರ ರೂ. ಅನುದಾನವನ್ನು ತಂದು ಶಕ್ತಿಮೀರಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವುದಾಗಿ ಶಾಸಕ ಕೆ.ಎಂ.ಉದಯ್ ತಿಳಿಸಿದರು.

ತಾಲೂಕಿನ ಪಣ್ಣೆದೊಡ್ಡಿ ನಾಲೆ ಮೇಲಿನ ರಸ್ತೆಯ 3.50 ಕೋಟಿ ವೆಚ್ಚದ ಅಭಿವೃದ್ಧಿಗೆ ಗುದ್ದಲಿ ಪೂಜೆ ನೆರವೇರಿಸಿ, 40 ವರ್ಷಗಳಿಂದ ಅಭಿವೃದ್ಧಿಯೇ ಕಾಣದೆ ಹೂಳು ತುಂಬಿಕೊಂಡಿದ್ದ ಈ ನಾಲೆಯನ್ನು ಗ್ರಾಮಸ್ಥರು ಮನವಿ ಮೇರೆಗೆ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಲಾಗಿದೆ ಎಂದರು.

ಕ್ಷೇತ್ರದಲ್ಲಿ 200 ಗ್ರಾಮಗಳಿದ್ದು, ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಅನುದಾನ ತರಬೇಕಾಗಿದೆ. ಈಗಾಗಲೇ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಬಳಿ ಅವರ ಕ್ಷೇತ್ರಕ್ಕಿಂತಲೂ ಹೆಚ್ಚು ನನಗೆ ಅನುದಾನ ನೀಡಿದ್ದಾರೆ. ಮತ್ತೆ ಪದೇ ಪದೆ ಅವರ ಬಳಿ ಅನುದಾನ ಕೇಳಿದ್ರೆ ಬೇರೆ ಕ್ಷೇತ್ರದ ಶಾಸಕರುಗಳು ಬೇಜಾರು ಮಾಡಿಕೊಳ್ಳುತ್ತಾರೆ ಎಂದರು.

ಈಗಾಗಲೇ ನೀರಾವರಿ ಇಲಾಖೆಯಿಂದ 800 ಕೋಟಿ ಹೆಚ್ಚು ಅನುದಾನವನ್ನು ಉಪಮುಖ್ಯಮಂತ್ರಿಗಳ ಸಹಕಾರದಿಂದ ತಂದು ಗ್ರಾಮೀಣ ಭಾಗದ ಎಲ್ಲಾ ನಾಲೆಗಳ ಅಭಿವೃದ್ಧಿಪಡಿಸಿ. ಕೊನೆ ಭಾಗದ ಕಟ್ಟ ಕಡೆಯ ರೈತರ ಜಮೀನಿಗೆ ನೀರು ತಲುಪಿಸುವ ಉದ್ದೇಶದಿಂದ ತಾಲೂಕಿನ ಎಲ್ಲಾ ದೊಡ್ಡ ನಾಲೆಯಿಂದ ಹಿಡಿದು ಸಣ್ಣ ಕಿರು ನಾಲೆಗಳ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವುದಾಗಿ ತಿಳಿಸಿದರು.

ಮನ್‌ಮುಲ್ ನಿರ್ದೇಶಕ ಹರೀಶ್ ಬಾಬು, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ ಸಂದರ್ಶ, ಅಡ್ಡ ರಸ್ತೆ ಗೋಪಿ, ಗ್ರಾಪಂ ಮಾಜಿ ಸದಸ್ಯ ಎಂ.ಬಿ. ವಿಜಯ್, ಎಂ.ಆರ್. ಅನೀಲ್ ಕುಮಾರ್, ಮುಖಂಡರಾದ ಪಣ್ಣೆದೊಡ್ಡಿ ಸುಧಾಕರ, ಮುರಳಿ, ಧನಂಜಯ, ತಿಮ್ಮಣ್ಣ ಇತರರಿದ್ದರು.

ದುಶ್ಚಟಕ್ಕೆ ಒಳಗಾಗಿ ಭವಿಷ್ಯ ನಾಶಮಾಡಿಕೊಳ್ಳಬೇಡಿ



ಪ್ರತಿಭಾಪುರಸ್ಕಾರ ಸಮಾರಂಭದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಪಾಂಡವಪುರ, ಮೇ 17– ಇತ್ತೀಚಿನ ದಿನಗಳಲ್ಲಿ ನನ್ನ ಯುವ ಸಮುದಾಯ ಹಲವಾರು ದುಶ್ಚಟಗಳಿಗೆ ಒಳಗಾಗಿ ತಮ್ಮ ಭವಿಷ್ಯವನ್ನು ನಾಶಮಾಡಿಕೊಳ್ಳುತ್ತಿದ್ದಾರೆ. ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ತಿಳಿಸಿದ್ದಾರೆ.

ಪಟ್ಟಣದ ಕಸಾಪ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಿದ್ದ ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿದ ಮಕ್ಕಳಿಗೆ ಪ್ರತಿಭಾಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ, ಯುವ ಸಮುದಾಯ ಜಾಗೃತಗೊಂಡು, ದುಶ್ಚಟಗಳಿಂದ ದೂರು ಉಳಿದು ಉತ್ತಮ ಶಿಕ್ಷಣ ಪಡೆದು ಉಜ್ವಲ ಭವಿಷ್ಯ ರೂಪಿಸಿಕೊಳ್ಳುವುದಲ್ಲದೆ ಪೋಷಕರ ಕನಸನ್ನು ನನಸಾಗಿಸಿ ಎಂದು ಕಿವಿಮಾತು ಹೇಳಿದರು.

ತಾವು ಸಚಿವರಾಗಿದ್ದಾಗ ಕ್ಷೇತ್ರದ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ಕೆಲಸ ಮಾಡಿದ್ದೆ. 2006ರಲ್ಲಿ ಎಚ್.ಡಿ.ಕುಮಾರಸ್ವಾಮಿ ಆಡಳಿತ ಅವಧಿಯಲ್ಲಿ ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿಯೇ ನಡೆಯಿತು. ನಮ್ಮ ಕ್ಷೇತ್ರಕ್ಕೆ 12 ಹೊಸ ಪ್ರೌಢಶಾಲೆಗಳು, 5 ಪಿಯು ಕಾಲೇಜು ಹಾಗೂ 3 ಡಿಗ್ರಿ ಕಾಲೇಜುಗಳು ಹಾಗೂ ಹೋಬಳಿಗೆ ಒಂದೊಂದು ವಸತಿ ಶಾಲೆಗಳನ್ನು ತಂದು ಗ್ರಾಮೀಣ, ನಗರ ಪ್ರದೇಶದ ಬಡ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿಯಾಗಿ ಕೆಲಸ ಮಾಡಿದ್ದೇನೆ ಎಂದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ವಿದ್ಯಾರ್ಥಿಗಳು ತಮಗೆ ಆಸಕ್ತಿ ಇರುವ ಕ್ಷೇತ್ರಗಳ ಕಡೆಗೆ ತೊಡಗಿಸಿಕೊಂಡು ಸಾಧನೆ ಮಾಡಬೇಕು. ಪೋಷಕರು ಸಹ ಮಕ್ಕಳ ಆಸಕ್ತಿಗೆ ಕ್ಷೇತ್ರದ ಕಡೆಗೆ ಹೋಗಲು ಸಹಕಾರ ನೀಡಬೇಕು ಎಂದರು. ಇದೇವೇಳೆ ಸಾಹಿತ್ಯ ಪರಿಷತ್ ವತಿಯಿಂದ ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ತಾಲೂಕಿನ 183 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಅಪರ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ, ಉಪ ವಿಭಾಗಾಧಿಕಾರಿ ಶ್ರೀನಿವಾಸ್, ಸಮಾಜ ಸೇವಕ ಅರವಿಂದ್ ರಾಘವನ್, ರೆವಿನ್ಯೂ ಇನ್ಸ್‌ಪೆಕ್ಟರ್ ಟಿ.ಪಿ. ರೇವಣ್ಣ, ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್ ಸೇರಿ ಹಲವರು ಹಾಜರಿದ್ದರು.

ಪ್ರಮುಖ ವೃತ್ತಗಳಿಗೆ ವಿದೇಶಿ ಮಾದರಿ ರೂಪ



ಕಾಳಪ್ಪ ಬಡಾವಣೆಯಲ್ಲಿ ನಿರ್ಮಾಣವಾಗುತ್ತಿರುವ ರಸ್ತೆ ಅಭಿವೃದ್ದಿಗೆ ಶಾಸಕ ಪಿ.ರವಿಕುಮಾರ್‌ಗೌಡ ಚಾಲನೆ ನೀಡಿದರು.

ಮಂಡ್ಯ: ನಗರದಲ್ಲಿರುವ ಪ್ರಮುಖ ವೃತ್ತಗಳನ್ನು ವಿದೇಶಿ ಮಾದರಿಯಲ್ಲಿ ಅಭಿವೃದ್ದಿಪಡಿಸಲಾಗುತ್ತಿದೆ ಎಂದು ಶಾಸಕ ಪಿ.ರವಿ ಕುಮಾರ್‌ಗೌಡ ಹೇಳಿದರು.

ನಗರದ 9ನೇ ವಾರ್ಡಿನ ಕಾಳಪ್ಪ ಬಡಾವಣೆಯಲ್ಲಿ ಎಸ್ಸಿಪಿಟಿಎಸ್ಪಿ ಯೋಜನೆಯಡಿ ನಿರ್ಮಾಣವಾಗುತ್ತಿರುವ ರಸ್ತೆ ಅಭಿವೃದ್ದಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ನಗರದ ವ್ಯಾಪ್ತಿಯಲ್ಲಿ 10ಕೋಟಿ ರೂ. ವೆಚ್ಚದಲ್ಲಿ ರಸ್ತೆಗಳು ಮತ್ತು 3ವೃತ್ತಗಳಾದ ಹೊಸಹಳ್ಳಿ, ಫ್ಯಾಕ್ಟರಿ ವೃತ್ತ, ಹೊಳಲು ವೃತ್ತಗಳನ್ನು ವಿದೇಶಿ ಮಾದರಿಯಲ್ಲಿ ನಿರ್ಮಾಣಕ್ಕೆ ಸಿದ್ದತೆ ನಡೆಯುತ್ತಿದೆ.

ಮೈಸೂರು– ಬೆಂಗಳೂರು ಹೆದ್ದಾರಿಯಲ್ಲಿರುವ ಜೆ.ಸಿ.ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡ ಪ್ರತಿಮೆ ನಿರ್ಮಾಣ ಟೆಂಡರ್ ಹಂತದಲ್ಲಿದ್ದು, ಶೀಘ್ರದಲ್ಲೇ ಆರಂಭಿಸುತ್ತೇವೆ, ಅಂಬೇಡ್ಕರ್ ಜೋಡಿ ರಸ್ತೆ ಕೆಂಪೇಗೌಡ ರಸ್ತೆಯನ್ನು ವಿಶೇಷವಾಗಿ 9 ಕೋಟಿ ರೂ.ಬಿಡುಗಡೆ ಮಾಡಿದ್ದೀವಿ, ಅದರಲ್ಲಿ ಹೈಟೆಕ್ ಫುಟ್ ಪಾತ್, ಸೈಕಲ್‌ಬೇ ಮತ್ತು ರಸ್ತೆ ಡಾಂಬರೀಕರಣ ಆಗಲಿದೆ, ಫುಟ್ ಬಾತ್ ಅಭಿವೃದ್ದಿಗೆ 3ಕೋಟಿ ರೂ. ನಿಗಧಿಯಾಗಿದೆ ಎಂದರು.

ಕಾವೇರಿ ನೀರಾವರಿ ನಿಗಮದಿಂದ 30 ಕೋಟಿ ರೂ.ಗಳನ್ನು ನಗರಕ್ಕೆ ವಿನಿಯೋಗಿಸುತ್ತಿದ್ದೀವಿ, ಹೈಟೆಕ್ ಆದ ವಿದೇಶಿ ಮಾದರಿಯಲ್ಲಿ ಪುಟ್‌ಪಾತ್ ಮತ್ತು ನಾಲೆ ನಿರ್ಮಾಣವಾಗಲಿದೆ, ಹೊಳಲು ವೃತ್ತದಿಂದ 1ನೇ ವಾರ್ಡ್ ಕಾಳಿಕಾಂಬ ವರಗೆ ಹರಿಯುವ ನಾಲೆ ಅಭಿವೃದ್ದಿಗೆ ವಿಶೇಷ ರೂಪ ನೀಡಲಾಗುವುದು, ನೀಲನಕ್ಷೆ ರೆಡಿಯಾಗಿದ್ದು, 100 ಕೋಟಿ ರೂ. ಟೆಂಡರ್ ವಾರದಲ್ಲಿ ಆಗಲಿದೆ, 3 ತಿಂಗಳಲ್ಲಿ ಆ ಕೆಲಸವನ್ನು ಮುಗಿಸುತ್ತೇವೆ ಎಂದರು.

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಗೀತಾ, ಶ್ರೀಧರ್, ಶಿವಪ್ರಕಾಶ್, ವಿಜಯಲಕ್ಷ್ಮಿ, ದೀಪಕ್, ನಾಗೇಶ್, ಸುಬ್ಬು ಇದ್ದರು.

ಮೊಗರಹಳ್ಳಿ ಹೊರವಲಯದಲ್ಲಿ ವಿಷಕಾರಿ ಹೊಗೆ

ಕೈಗಾರಿಕಾ ತ್ಯಾಜ್ಯ ದಹನದಿಂದ ಜನಜೀವನ ದುಸ್ತರ



ಶ್ರೀರಂಗಪಟ್ಟಣ: ತಾಲೂಕಿನ ಮೊಗರಹಳ್ಳಿ (ಮಂಟಿ) ಸಾಂಸ್ಕೃತಿಕ ನಗರಿ ಮೈಸೂರಿಗೆ ಹೊಂದಿಕೊಂಡಂತಿರುವ ಪ್ರದೇಶವಾಗಿದ್ದರೂ ಆಡಳಿತಾತ್ಮಕವಾಗಿ ಮಂಡ್ಯ ಜಿಲ್ಲೆಗೆ ಸೇರಿದೆ. ಇಲ್ಲಿ 30ಕ್ಕೂ ಹೆಚ್ಚು ವಿವಿಧ ಬಗೆಯ ಕಾರ್ಖಾನೆಗಳಿದ್ದು, ಸಾವಿರಾರು ಮಂದಿ ಬದುಕಿಗಾಗಿ ಇಲ್ಲೇ ಕೆಲಸ ಮಾಡುತ್ತಾ ತಮ್ಮ ಜೀವನೋಪಾಯವಾಗಿ ಮಾಡಿಕೊಂಡಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಕೈಗಾರಿಕಾ ಪ್ರದೇಶದ ಸಮೀಪ ಅಕ್ರಮವಾಗಿ ಕೈಗಾರಿಕಾ ತ್ಯಾಜ್ಯ ಸುರಿದು ಅದಕ್ಕೆ ಬೆಂಕಿ ಹಚ್ಚುತ್ತಿರುವ ಪರಿಣಾಮ ಪರಿಸರ ಹಾಗೂ ಸಾರ್ವಜನಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಆತಂಕಕ್ಕೆ ಎಡೆಮಾಡಿಕೊಟ್ಟಿದೆ.

ಗ್ರಾಮದ ಹೊರ ಭಾಗದಲ್ಲಿನ ಖಾಲಿ ಜಾಗ ಮತ್ತು ಗಿಡಗಂಟಿಗಳ ಮಧ್ಯೆ ರಾತ್ರಿ ವೇಳೆ ಅಪಾರ ಪ್ರಮಾಣದ ಕೈಗಾರಿಕಾ ತ್ಯಾಜ್ಯವನ್ನು ತಂದು ಸುರಿದು, ಬೆಂಕಿ ಹಚ್ಚಲಾಗುತ್ತಿದೆ . ಇದರಿಂದ ಹೊರಬರುತ್ತಿರುವ ದಟ್ಟವಾದ ಕಪ್ಪು ಹೊಗೆ ಸುತ್ತಮುತ್ತಲಿನ ಪ್ರದೇಶಗಳನ್ನು ಆವರಿಸಿಕೊಂಡಿದ್ದು, ಜನರು ಉಸಿರಾಟದ ತೊಂದರೆ ಅನುಭವಿಸುವಂತಾಗಿದೆ.

ಸ್ಥಳೀಯ ನಿವಾಸಿಗಳ ಪ್ರಕಾರ, ಕೆಲವರ್ಷಗಳಿಂದ ರಾತ್ರಿ ಸಮಯದಲ್ಲಿ ಕೈಗಾರಿಕಾ ತ್ಯಾಜ್ಯವನ್ನು ವಾಹನಗಳಲ್ಲಿ ರಾತ್ರಿ ವೇಳೆ ತಂದು ಸುರಿದು ಯಾರಿಗೂ ತಿಳಿಯದಂತೆ ಬೆಂಕಿ ಹಚ್ಚಿ ಸ್ಥಳದಿಂದ ತೆರಳುತ್ತಾರೆ. ಇದರಿಂದ ಹೊಗೆ ವ್ಯಾಪಕವಾಗಿ ಹರಡಿ, ಮನೆಯೊಳಗೂ ದುರ್ವಾಸನೆ ವ್ಯಾಪಿಸುತ್ತಿದೆ. ವಿಶೇಷವಾಗಿ ಮಕ್ಕಳು, ವೃದ್ಧರು ಹಾಗೂ ಉಸಿರಾಟದ ಸಮಸ್ಯೆ ಹೊಂದಿರುವವರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕೆಲವರು ಕಣ್ಣುರಿ, ಗಂಟಲು ಉರಿಯಿಂದ ಬಳಲುವಂತಾಗಿದೆ. ಈ ದಹನದಿಂದ ಪರಿಸರ ಮಾಲಿನ್ಯ ಹೆಚ್ಚಾಗಿ, ಕೃಷಿ ಭೂಮಿ ಹಾಗೂ ಸುತ್ತಮುತ್ತಲಿನ ಜೀವ ವೈವಿಧ್ಯಕ್ಕೂ ಹಾನಿಯಾಗುವ ಭೀತಿ ಎದುರಾಗಿದೆ.

ಸ್ಥಳೀಯರು ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂಬ ಆರೋಪ ಕೇಳಿಬಂದಿದೆ. ಪರಿಸರ ಇಲಾಖೆ, ಗ್ರಾ. ಪಂ. ಹಾಗೂ ಜಿಲ್ಲಾಡಳಿತ ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ತ್ಯಾಜ್ಯ ಸುರಿದು ಬೆಂಕಿ ಹಚ್ಚುತ್ತಿರುವವರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳಬೇಕು ಈ ಪ್ರದೇಶಗಳಲ್ಲಿ ನಿಗಾ ಹೆಚ್ಚಿಸಿ, ರಾತ್ರಿ ಪಾಳಿಯಲ್ಲಿ ತಪಾಸಣೆ ನಡೆಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ. ಪರಿಸರ ಸಂರಕ್ಷಣೆ ಹಾಗೂ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಆಗ್ರಹಿಸಿದ್ದಾರೆ.

ಹೊಸಹೊಳಲು ಡೇರಿ : ಡಾಲು ರವಿ, ಹರೀಶ್ ಬಣ ಜಯಭೇರಿ

ಕೆ.ಆರ್.ಪೇಟೆ: ತಾಲೂಕಿನ ಹೊಸಹೊಳಲು ಹಾಲು ಉತ್ಪಾದಕರ ಸಹಕಾರ ಸಂಘದ 5 ವರ್ಷಗಳ ಆಡಳಿತ ಮಂಡಳಿಯ 10 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಮನ್‌ಮುಲ್ ನಿರ್ದೇಶಕ ಡಾಲು ರವಿ ಹಾಗೂ ಎಂ.ಬಿ. ಹರೀಶ್ ಬಣದ 6 ಮಂದಿ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದರೆ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹೆಚ್.ಕೆ ಅಶೋಕ್ ಬೆಂಬಲಿತ ನಾಲ್ಕು ಮಂದಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಡಾಲು ರವಿ ಬಣದ ಹೆಚ್.ಟಿ.ಕಾಂತರಾಜು, ಟಿ.ಸೂರ್ಯಪ್ರಕಾಶ್, ಹೆಚ್.ಜಿ. ರಮೇಶ್, ಚಂದ್ರು, ಭಾರತೀನಾಗರಾಜು, ಶೈಲಜ ಚನ್ನಕೇಶವ ಅವರು ಜಯ ಸಾಧಿಸಿದ್ದರೆ, ಹೆಚ್.ಕೆಅಶೋಕ್ ಬಣದಿಂದ ಹೆಚ್.ವಿ. ಶ್ರೀನಿವಾಸ್, ಹೆಚ್.ಎಸ್.ಬಸವರಾಜು, ಸಿ. ಪೂರ್ಣಿಮಾಲೋಕೇಶ್, ಹೆಚ್.ಕೆ.ಮಹೇಶ್ ಅವರು ಜಯಶೀಲರಾಗಿದ್ದಾರೆ. ಸಹಕಾರ ಇಲಾಖೆ ಅಧಿಕಾರಿ ವಾಸಿಂಪಾಷಾ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ನೂತನ ನಿರ್ದೇಶಕರನ್ನು, ಪುರಸಭಾ ಮಾಜಿ ಅಧ್ಯಕ್ಷರಾದ ಹೆಚ್.ವಿ.ಕೃಷ್ಣೇಗೌಡ, ರೂಪಾ ಪ್ರಕಾಶ್, ಪುರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹೆಚ್.ಎನ್.ಪ್ರವೀಣ್, ಉದ್ಯಮಿ ಹೊಸಹೊಳಲು ನಂಜುಂಡಸ್ವಾಮಿ, ವರುಣ್, ಚನ್ನಪ್ಪ, ಸಾಮಿಲ್ ರಘುನಾಥ್, ಸೊಸೈಟಿ ನಿರ್ದೇಶಕ ಚಂದ್ರು, ಪುಟ್ಟರಾಜು, ನಿವೃತ್ತ ಶಿಕ್ಷಕ ಶಿವಣ್ಣ, ರಾಜು ಮತ್ತಿತರರು ಅಭಿನಂದಿಸಿದರು.

ಪುರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹೆಚ್.ಎನ್.ಪ್ರವೀಣ್ ಮಾತನಾಡಿ, ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಜಯ ಗಳಿಸಿದ ಎಲ್ಲಾ ನಿರ್ದೇಶಕರು ಒಗ್ಗಟ್ಟಿನಿಂದ ಕೆಲಸ ಮಾಡಿ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು. ಗುಣಮಟ್ಟದ ಹಾಲು ಸಂಗ್ರಹಿಸುವ ಮೂಲಕ ಸಂಘದ ಆಧಾಯ ಹೆಚ್ಚಿಸಲು ಪ್ರಥಮ ಆದ್ಯತೆ ನೀಡಬೇಕು. ನೌಕರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘದಲ್ಲಿ ಯಾವುದೇ ಲೋಪಗಳು ಆಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನೂತನ ನಿರ್ದೇಶಕರು ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಚುನಾವಣಾ ಫಲಿತಾಂಶ ಘೋಷಣೆ ಆಗುತ್ತಿದ್ದಂತೆಯೇ ಡಾಲು ರವಿ ಬಣದ ನಿರ್ದೇಶಕರು ಹಾಗೂ ಬೆಂಬಲಿಗರು ಪಟಾಕಿ ಸಿಡಿಸಿ, ವಿಜಯೋತ್ಸವ ಆಚರಿಸಿದರು.

ನಾರಾಯಣಗೌಡ ನಿಧನ



ಪಾಂಡವಪುರ: ಪಟ್ಟಣದ ಕೃಷ್ಣಾನಗರ ನಿವಾಸಿ ಹಿರೋಡೆ ಕೆರೆ ನೀರು ಬಳಕೆದಾರರ ಸಂಘದ ಮಾಜಿ ಅಧ್ಯಕ್ಷ ನಾರಾಯಣಗೌಡ(66) ನಿಧನರಾದರು. ಮೃತರಿಗೆ ಪತ್ನಿ ಪುಷ್ಪಾ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಹಲವು ಗಣ್ಯರು ಅಂತಿಮ ದರ್ಶನ ಪಡೆದರು. ಪಟ್ಟಣದ ಹಿರೋಡೆ ಕೆರೆಯ ಬಳಿಯ ಮೃತರ ಜಮೀನಿನಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿತು.

ಒಂದನೇ ಪುಟದಿಂದ

ರಾಜ್ಯದಲ್ಲಿ ಜನಪರ ಮೈತ್ರಿ ಸರ್ಕಾರ ಅಧಿಕಾರಕ್ಕೆ

ಜೆಡಿಎಸ್‌ನ ಬೆನ್ನೆಲುಬಾಗಿದ್ದಾರೆ. ಕಾರ್ಯಕರ್ತರ ಶ್ರಮದ ಫಲವಾಗಿ ಇಂದಿಗೂ ಜೆಡಿಎಸ್ ಉಳಿದಿದೆ ಎನ್ನುತ್ತಲೇ 2006ರ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆ ಸನ್ನಿವೇಶ ಮೆಲುಕು ಹಾಕಿದ ಕುಮಾರಸ್ವಾಮಿ, ಅಂದು ನಮ್ಮ ನಾಯಕರು ಎಚ್ಚರಿಕೆ ವಹಿಸಿದ್ದರೆ ಈ ರಾಜ್ಯಕ್ಕೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ನಮ್ಮದೇ ಆದ ಕೆಲ ತಪ್ಪಿನಿಂದಲೇ ಅಂದು ಜೆಡಿಎಸ್ ಸೋಲನುಭವಿಸಿತು ಎಂದರು.

ಎಲ್ಲರ ಪರವಾಗಿ ಜೆಡಿಎಸ್: ನಾನು ಸಾಮಾನ್ಯವಾಗಿ ತಲೆಗೆ ರುಮಾಲು (ಪೇಟ) ಕಟ್ಟಿಕೊಳ್ಳಲು ಹಿಂಜರಿಯುತ್ತೇನೆ. ಆದರೆ, ಇಂದು ಹಾಲು ಮತಸ್ಥ (ಕುರುಬ) ಸಮುದಾಯದ ಜೊತೆಗೆ ಜೆಡಿಎಸ್ ಕೂಡ ಇದೆ ಎಂಬುದನ್ನು ಮನವರಿಕೆ ಮಾಡಿಕೊಡಲು ಪೇಟ ಕಟ್ಟಿಕೊಂಡು ಮಾತನಾಡುತ್ತಿದ್ದೇನೆ. ಕುರುಬರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲರ ಪರವಾಗಿ ಜೆಡಿಎಸ್ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಏತಕ್ಕಾಗಿ ಕಾಂಗ್ರೆಸ್ ಸಾಧನಾ ಸಮಾವೇಶ?: ಮೇ 19 ರಂದು ತುಮಕೂರಿನಲ್ಲಿ ಕಾಂಗ್ರೆಸ್‌ನವರು ಸಾಧನಾ ಸಮಾವೇಶ ಮಾಡುತ್ತಿದ್ದಾರೆ. ಕಳೆದ 2 ವರ್ಷದಲ್ಲಿ 712 ಅಧಿಕಾರಿಗಳನ್ನು ವಜಾ ಮಾಡಿರುವುದಾಗಿ ಪತ್ರಿಕೆಯಲ್ಲಿ ಓದಿದ್ದೆ. ಜನರ ಬಳಿ ಸುಲಿಗೆ ಮಾಡುವ ಅಧಿಕಾರಿಗಳನ್ನು ರಾಜ್ಯ ಸರ್ಕಾರ ಯಾವ ರೀತಿ ನಡೆಸಿಕೊಳ್ಳುತ್ತಿದೆ ಎಂಬುದು ಗೊತ್ತಿದೆ. ಇಲವಾಲದ ಬಳಿ ಚಿನ್ನ ದರೋಡೆ ಮಾಡಿದ, ಕಚೇರಿಯಲ್ಲೇ ಅಸಭ್ಯವಾಗಿ ವರ್ತಿಸಿದ ಅಧಿಕಾರಿಗಳನ್ನು ರಕ್ಷಣೆ ಮಾಡಿರುವುದನ್ನು ತಿಳಿಸುವುದಕ್ಕಾಗಿ ಕಾಂಗ್ರೆಸ್‌ನವರು ಸಾಧನಾ ಸಮಾವೇಶ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಯುದ್ಧದಿಂದ ಬೆಲೆ ಏರಿಕೆ: ಇದೇ ವೇಳೆ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯನ್ನು ಸಮರ್ಥಿಸಿಕೊಂಡ ಹೆಚ್‌ಡಿಕೆ, ಅಮೆರಿಕ ಮತ್ತು ಇಸ್ರೇಲ್ ಜೊತೆಗೂಡಿ ಇರಾನ್ ಮೇಲೆ 60 ದಿನಗಳ ಕಾಲ ಯುದ್ಧ ಮಾಡಿದ್ದರ ಪರಿಣಾಮದಿಂದಾಗಿ ತೈಲ ಸರಬರಾಜು ಬಿಕ್ಕಟ್ಟು ಉಂಟಾಗಿದೆ. ವಿಶ್ವದ ಮುಂದುವರಿದ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿಮೆ ಇದೆ ಎಂದರು.

ನೀವು ಎಷ್ಟುದರ ಏರಿಸಿದ್ದೀರಿ!: ಪೆಟ್ರೋಲ್–ಡೀಸೆಲ್ ದರ ಏರಿಸಿದ್ದಕ್ಕೆ ಕೇಂದ್ರ ಸರ್ಕಾರದ ಮೇಲೆ ಮುಗಿ ಬೀಳುತ್ತಿರುವ ಕಾಂಗ್ರೆಸ್ ನಾಯಕರು, ಕಳೆದ ಮೂರು ವರ್ಷದಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ ಎಷ್ಟು ಬಾರಿ ವಿದ್ಯುತ್, ಬಸ್ ಟಿಕೆಟ್ ಮತ್ತು ಮದ್ಯದ ದರ ಏರಿಸಿದ್ದೀರಿ ಎಂಬ ಪಟ್ಟಿ ಇಡಲಿ ಎಂದು ಸವಾಲು ಹಾಕಿದ ಕೇಂದ್ರ ಸಚಿವರು, ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಜನತೆ ನೆಮ್ಮದಿಯಿಂದ ಇದ್ದಾರೆ ಎಂಬ ಗುಂಗಿನಿಂದ ಹೊರಬಂದು ಪ್ರತಿದಿನ ನನ್ನ ಮನೆಯ ಬಳಿ ಬಂದು ನೋಡಿ, ಜನರ ಸ್ಥಿತಿ ಏನಾಗಿದೆ ಎಂದು ಮನವರಿಕೆ ಆಗಲಿದೆ ಎಂದು ಕಿಡಿಕಾರಿದರು.

ಮೈಸೂರು–ಬೆಂಗಳೂರು ಅಭಿವೃದ್ಧಿಗೆ ಕೊಡುಗೆ: ಮೈಸೂರು ಮತ್ತು ಬೆಂಗಳೂರು ನಗರವನ್ನು ಸುಸಜ್ಜಿತವಾಗಿ ಅಭಿವೃದ್ಧಿ ಮಾಡುವ ಉದ್ದೇಶದಿಂದಲೇ ಈ ಎರಡು ನಗರಗಳನ್ನು ಜೆಎನ್‌ಎನ್‌ಯುಆರ್‌ಎಂ(ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮಿಷನ್) ಸ್ಕೀಂ ಅಡಿಯಲ್ಲಿ ತರಲಾಯಿತು. ಇದರಿಂದಾಗಿಯೇ ಮೈಸೂರು ಮತ್ತು ಬೆಂಗಳೂರು ಅಭಿವೃದ್ಧಿ ಕಾಣುತ್ತಿವೆ. ಹಾಗೆಯೇ ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಕೇಂದ್ರ ಸರ್ಕಾರ ಉತ್ಸುಕವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ವಿವೇಕಾನಂದ, ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕ ಕೆ.ಮಹದೇವ್, ಜಿಲ್ಲಾಧ್ಯಕ್ಷ ಅಶ್ವಿನಿ ಕುಮಾರ್, ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ಸವಿತಾ ಸುರೇಶ್, ಜೆಡಿಎಸ್ ಮುಖಂಡರಾದ ಕೃಷ್ಣ ನಾಯಕ, ಚಂದ್ರಿಕಾ ಸುರೇಶ್, ಗಂಗಾಧರ್, ರವಿಚಂದ್ರೇಗೌಡ, ಶಿವಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ನಡೆದ ಚಾಮುಂಡೇಶ್ವರಿ ಕ್ಷೇತ್ರದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮಕ್ಕೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ ಮತ್ತಿತರ ಮುಖಂಡರು ಅದ್ದೂರಿ ಮೆರವಣಿಗೆ ಮೂಲಕ ಆಗಮಿಸಿದರು.

ಜಿ.ಟಿ.ದೇವೇಗೌಡರು ಗೈರು...



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಕಾರ್ಯಕ್ರಮನದಿಂದ ದೂರ ಉಳಿಸಿದ್ದರು. ಸ್ಥಳೀಯ ಶಾಸಕರ ಅನುಪಸ್ಥಿತಿಯಲ್ಲಿ ನಡೆದ ಜನರೊಂದಿಗೆ ಜನತಾದಳ ಕಾರ್ಯಕ್ರಮ ಸ್ಥಳದಲ್ಲಿ ಹಾಗೂ ವೇದಿಕೆಯಲ್ಲಿ ಅಳವಡಿಸಿದ್ದ ಫ್ಲೆಕ್ಸ್ ಬ್ಯಾನರ್‌ಗಳಲ್ಲಿ ಜಿಟಿಡಿ ಮತ್ತು ಹೆಚ್.ಡಿ. ರೇವಣ್ಣ ಭಾವಚಿತ್ರಗಳಿಗೆ ಕೊಕ್ ನೀಡಲಾಗಿತ್ತು. ಎಲ್ಲೆಡೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಜಿ.ಡಿ.ಹರೀಶ್ ಗೌಡ, ಸಾ.ರಾ.ಮಹೇಶ್, ಸಿ.ಎನ್.ಮಂಜೇಗೌಡ ಇನ್ನಿತರೆ ನಾಯಕರ ಭಾವಚಿತ್ರಗಳು ರಾರಾಜಿಸುತ್ತಿದ್ದವು.

> ಕ್ಷೇತ್ರದಲ್ಲಿ ಸಂಘಟನೆ ದೃಷ್ಟಿಯಿಂದ ಯಶಸ್ವಿಯಾಗಿ 'ಜನರೊಂದಿಗೆ ಜನತಾದಳ' ಕಾರ್ಯಕ್ರಮ ಮಾಡಿದ್ದೇವೆ. ನೀಡಿದ ಜವಾಬ್ದಾರಿಯನ್ನು ಕಡಿಮೆ ಅವಧಿಯಲ್ಲಿ ನಿರ್ವಹಿಸಿದ್ದೇವೆ. 2028ರ ವಿಧಾನಸಭಾ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಪ್ರಮುಖ ಪಾತ್ರವಹಿಸಲಿದ್ದಾರೆ. ಹಾಗೆಂಯೇ ಕುಮಾರಣ್ಣನವರು ಕೈಗಾರಿಕೆಗಳ ಸ್ಥಾಪನೆ ಮೂಲಕ ನಿರುದ್ಯೋಗ ನಿವಾರಿಸಲು ಪ್ರಯತ್ನಿಸುತ್ತಿದ್ದಾರೆ. ಎಲ್ಲಾ ರಾಜ್ಯಗಳ ನಾಯಕರು ಕುಮಾರಣ್ಣನವರನ್ನು ಭೇಟಿ ಮಾಡಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ.
>
> – ಜಿ.ಡಿ.ಹರೀಶ್‌ಗೌಡ, ಶಾಸಕರು

ಜೆಡಿಎಸ್ ಹಳೇ ಮೈಸೂರು ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ, ರಾಜ್ಯದ ಉದ್ದಗಲಕ್ಕೂ ಬಲಿಷ್ಠವಾಗಿದೆ: ನಿಖಿಲ್ ಕುಮಾರಸ್ವಾಮಿ



ಮೈಸೂರು, ಮೇ 17(ಎಂಕೆ)– ಜೆಡಿಎಸ್ ಪಕ್ಷ ಹಳೇ ಮೈಸೂರು ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಬೆಂಗಳೂರು ನಗರ ಗ್ರಾಮಾಂತರ ಸೇರಿದಂತೆ ರಾಜ್ಯದ ಉದ್ದಗಲಕ್ಕೂ ಜೆಡಿಎಸ್ ಬಲಿಷ್ಠವಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಜೆಡಿಎಸ್ ಕೇವಲ ಹಳೇ ಮೈಸೂರು ಪ್ರಾಂತ್ಯಕ್ಕೆ ಮಾತ್ರ ಸೀಮಿತ ಎಂದು ಕೆಲ ರಾಜಕೀಯ ವಿರೋಧಿಗಳು ಹೇಳುತ್ತಾರೆ. ಆದರೆ, ಇಡೀ ರಾಜ್ಯದಲ್ಲಿ ಜನತಾದಳ ಪಕ್ಷ ಸುಭದ್ರವಾಗಿದೆ. ರಾಜ್ಯದ ಜನರ ಒಲವು ಜೆಡಿಎಸ್ ಪಕ್ಷದ ಮೇಲಿದೆ ಎಂದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ಗೆ 19 ಸ್ಥಾನಗಳು ಬಂದವು. ಆದರೆ, ಅದಕ್ಕೂ ಮುನ್ನಾ ಪಂಚರತ್ನ ಕಾರ್ಯಕ್ರಮದ ಮೂಲಕ ಜನರನ್ನು ತಲುಪುವ ಕೆಲಸ ವಿಫಲವಾಯಿತು. ಪರಿಣಾಮ ನಾಯಕರು, ಕಾರ್ಯಕರ್ತರಲ್ಲಿ ಉತ್ಸಾಹ ಕಡಿಮೆಯಾಗಿತ್ತು. ಹಾಗಾಗಿ ನಾನು ಇಡೀ ರಾಜ್ಯವ್ಯಾಪಿ ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ಹಗಲಿರುಳು ಶ್ರಮವಹಿಸುತ್ತಿದ್ದೇನೆ ಎಂದು ತಿಳಿಸಿದರು.

ಜೆಡಿಎಸ್ 25 ವರ್ಷ ಪೂರೈಸಲು ಕಾರ್ಯಕರ್ತರ ಶ್ರಮ ಕಾರಣವಾಗಿದೆ. ಕಳೆದ 25 ವರ್ಷದಿಂದ ಈ ಪಕ್ಷದಿಂದ ಶಾಸಕರು, ಸಂಸದರು, ಡಿಸಿಎಂ ಆದವರು ಪಕ್ಷ ಬಿಟ್ಟು ಹೋದರು. ಆದರೂ ನಿಷ್ಠಾವಂತ ಲಕ್ಷಾಂತರ ಕಾರ್ಯಕರ್ತರ ಬಲದೊಂದಿಗೆ ಜೆಡಿಎಸ್ ಈಗಲೂ ಸದೃಢವಾಗಿದೆ ಮುಂದಿನ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಗಳು ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸಲಿದ್ದಾರೆ ಎಂದರು. 2028ರ ಚುನಾವಣಾ ಫಲಿತಾಂಶದ ಬಳಿಕ ಯಾರು ಸಿಎಂ ಆಗಬೇಕು ಎನ್ನುವುದನ್ನು ಈಗ ಹೇಳುವುದಿಲ್ಲ. ಕುಮಾರಸ್ವಾಮಿ ಅವರು, ಅಲ್ಪಾವಧಿ ಸಿಎಂ ಆಗಿದ್ದಾಗ ಕೊಟ್ಟ ಆಡಳಿತವನ್ನು ಇಂದಿಗೂ ಜನ ನೆನೆಸಿಕೊಳ್ಳುತ್ತಾರೆ. ಹಾಗಾಗಿ ಸಿಎಂ ಕುರ್ಚಿ ಮುಖ್ಯವಲ್ಲ. ನಾಡಿನ ಅಭಿವೃದ್ಧಿ ಮುಖ್ಯ. ಅನಿರೀಕ್ಷಿತ ಬೆಳವಣಿಗೆಯಿಂದ ಕುಮಾರಸ್ವಾಮಿ ಅವರು ಲೋಕಸಭೆಗೆ ಹೋಗಬೇಕಾಯಿತು. ಅಧಿಕಾರ ಇರಲಿ, ಇಲ್ಲದಿರಲಿ ಕುಮಾರಸ್ವಾಮಿ ಅವರು ಯಾವಾಗಲೂ ರೈತ, ದೀನ ದಲಿತರ ಪರವಾಗಿರುತ್ತಾರೆ. ಪ್ರಾದೇಶಿಕ ಸಮಾನತೆ, ಸಾಮಾಜಿಕ ಸಮಾನತೆಯೊಂದಿಗೆ ಜೆಡಿಎಸ್ ಪಕ್ಷ ಎಲ್ಲಾ ವರ್ಗದ ಜನರಿಗೂ ಅವಕಾಶ ಕಲ್ಪಿಸಿದೆ. ವಿರೋಧಿಗಳು ಹೇಳುವ ಮಾತಿಗೆ ಯಾರು ದೃತಿಗೆಡಬೇಕಿಲ್ಲ ಪಕ್ಷಕ್ಕೆ ಇನ್ನಷ್ಟು ಬಲ ತುಂಬಬೇಕು ಎಂದು ಕರೆ ನೀಡಿದರು.

> ಮೈಸೂರು ಜಿಲ್ಲೆಯ 10 ವಿಧಾನಸಭೆ ಕ್ಷೇತ್ರಗಳಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ನಡೆದಿದ್ದು, ಅಂತಿಮವಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಮಾವೇಶ ನಡೆದಿದೆ. ಯಾವುದೇ ನಾಯಕರು ಇಲ್ಲದಿದ್ದರೂ ಸಹ ಸಹಸ್ರಾರು ಸಂಖ್ಯೆಯ ಕಾರ್ಯಕರ್ತರು ಹೆಚ್.ಡಿ.ದೇವೇಗೌಡ, ಕುಮಾರಸ್ವಾಮಿ ಅವರ ಜೊತೆಗಿದ್ದಾರೆ. ಮುಂಬರುವ ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿ ಅವರೇ ಮುಖ್ಯಮಂತ್ರಿ ಆಗಬೇಕೆಂಬ ಅಭಿಯಾನ ಚಾಮುಂಡೇಶ್ವರಿ ಕ್ಷೇತ್ರದಿಂದಲೇ ಆರಂಭವಾಗಿದೆ.
>
> – ಸಾ.ರಾ.ಮಹೇಶ್, ಮಾಜಿ ಸಚಿವ

> ಕರ್ನಾಟಕದಲ್ಲಿ ಬಂಗಾರಪ್ಪ, ಯಡಿಯೂರಪ್ಪ, ಶ್ರೀರಾಮುಲು, ಜನಾರ್ಧನ ರೆಡ್ಡಿ ಮೊದಲಾದ ಪ್ರಮುಖ ನಾಯಕರು ಹೊಸ ಪಕ್ಷ ಕಟ್ಟಿದರೂ ಉಳಿಸಿಕೊಳ್ಳಲು ಆಗಲಿಲ್ಲ. ಆದರೆ ಹೆಚ್.ಡಿ.ದೇವೇಗೌಡ, ಕುಮಾರಸ್ವಾಮಿ ಅವರ ಸಾರಥ್ಯದಲ್ಲಿ ಜೆಡಿಎಸ್ 25 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆ ಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುವಲ್ಲಿ ವಿಫಲವಾಗಿದೆ. ಕಾಂಗ್ರೆಸ್ ನಾಯಕರು ಬರೀ ಸುಳ್ಳು ಹೇಳಿಕೊಂಡು ಓಡಾಡುತ್ತಿದ್ದಾರೆ. ಗೃಹಲಕ್ಷ್ಮಿ ಯೋಜನೆಯ ಹಣವನ್ನು ನೀಡದೇ ವಂಚನೆ ಮಾಡಿದ್ದಾರೆ.
>
> – ಕೃಷ್ಣಾರೆಡ್ಡಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ

ಚಾಮುಂಡೇಶ್ವರಿ ಜೆಡಿಎಸ್ ಭದ್ರಕೋಟೆ



ಜನರೊಂದಿಗೆ ಜನತಾದಳ ಕಾರ್ಯಕ್ರಮದಲ್ಲಿ ನೆರೆದಿದ್ದ ಜನಸ್ತೋಮ.

ಮೈಸೂರು, ಮೇ 17(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಜೆಡಿಎಸ್‌ನ ಭದ್ರ ಕೋಟೆಯಾಗಿದ್ದು, 2028ರ ವಿಧಾನಸಭಾ ಚುನಾವಣೆಯಲ್ಲೂ ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಪಾಲಾಗಲಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭವಿಷ್ಯ ನುಡಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಯಾವುದೇ ಒತ್ತಡಗಳಿಗೆ ಮಣಿಯುವು ದಿಲ್ಲ. ಕಾರ್ಯಕರ್ತರ ಭಾವನೆಗಳಿಗೆ ಬೆಲೆಕೊಟ್ಟು ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಭದ್ರಕೋಟೆ ಎಂಬುದನ್ನು ಮನವರಿಕೆ ಮಾಡಿ ಕೊಡಲು ಈ ಸಮಾವೇಶ ಮಾಡಿದ್ದೇವೆ ಎಂದು ಹೇಳಿದರು. 2006ರಿಂದ ಚಾಮುಂಡೇಶ್ವರಿ ಕ್ಷೇತ್ರಕ್ಕೂ ನನಗೂ ಅವಿನಾಭಾವ ಸಂಬಂಧವಿದೆ. ಈಗಿನ ಹಾಲಿ ಮುಖ್ಯಮಂತ್ರಿ ಗಿಂತ ನಾನು ಸಿಎಂ ಆಗಿದ್ದ ಅಲ್ಪಾವಧಿಯಲ್ಲೇ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಅತಿ ಹೆಚ್ಚು ಅನುದಾನ ನೀಡಿದ್ದೇನೆ. ಯಾರನ್ನೋ ವಿರೋಧಿ ಸುವ ಸಲುವಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಈ ಸಮಾವೇಶ ಮಾಡಿಲ್ಲ. ರಾಜ್ಯ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಲು ಸಮಾವೇಶ ನಡೆದಿದೆ ಎಂದು ಸ್ಪಷ್ಟಪಡಿಸಿದರು. ಚಾಮುಂಡೇಶ್ವರಿ ಕ್ಷೇತ್ರ ಜನತಾದಳದ ಭದ್ರಕೋಟೆ ಎಂಬುದನ್ನು ಕ್ಷೇತ್ರದ ಜನತೆ ನಿರೂಪಿಸಿದ್ದಾರೆ. ಕಳೆದ ಮೂರು ಬಾರಿ ನಿರಂತರವಾಗಿ ಗೆದ್ದಿದ್ದೇವೆ ಎಂದರೆ ಅದು ನಿಷ್ಠಾವಂತ ಕಾರ್ಯಕರ್ತರು ಮತ್ತು ಕ್ಷೇತ್ರದ ಜನತೆಯಿಂದಲೇ ಹೊರತು ವ್ಯಕ್ತಿಯಿಂದಲ್ಲ. ಹಾಗಾಗಿ ಕ್ಷೇತ್ರದ ಜನತೆ ಗೊಂದಲಕ್ಕೀಡಾಗುವ ಅಗತ್ಯವಿಲ್ಲ. ನಾಯಕರೆಲ್ಲಾ ಕೂತು ಕಾರ್ಯಕರ್ತರ ಭಾವನೆಗಳ ಆಧಾರದ ಮೇಲೆ ಯಾವುದೇ ಒತ್ತಡಗಳಿಗೆ ಮಣಿಯದೆ, ಕಾರ್ಯಕರ್ತರಿಗೆ ಅಗೌರವಾಗದಂತೆ ನಡೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

88 ಮಂದಿ ಸಾವು

ಇನ್ನಷ್ಟು ಹರಡುವ ಭೀತಿ ಉಂಟಾಗಿದೆ. ಈ ಸೋಂಕಿನಿಂದ ಈವರೆಗೆ 88 ಮಂದಿ ಮೃತಪಟ್ಟಿದ್ದು, 336ಕ್ಕೂ ಹೆಚ್ಚು ಸಾಂಕ್ರಾಮಿಕ ರಕ್ತಸ್ರಾವ ಜ್ವರದ ಶಂಕಿತ ಪ್ರಕರಣಗಳು ವರದಿಯಾಗಿವೆ ಎಂದು ಆಫ್ರಿಕಾದ ರೋಗ ನಿಯಂತ್ರಣ ಹಾಗೂ ತಡೆಗಟ್ಟುವಿಕೆ ಕೇಂದ್ರ ತಿಳಿಸಿದೆ.

ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ವಿಶ್ವ ಆರೋಗ್ಯ ಸಂಸ್ಥೆಯ ಮಹಾ ನಿರ್ದೇಶಕ ಟೆಡ್ರೋಸ್ ಅಧಾನೋಮ್ ಗೆಬ್ರೆಯೆಸಸ್ ತೀವ್ರ ಕಳವಳ ವ್ಯಕ್ತಪಡಿಸಿ ರುವುದಲ್ಲದೆ, ಈ ಸಾಂಕ್ರಾಮಿಕ ರೋಗವು ಅಂತರಾಷ್ಟ್ರೀಯ ಮಟ್ಟದಲ್ಲಿ ಆತಂಕ ಉಂಟು ಮಾಡುವ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿಯಾಗಿದೆ ಎಂದು ನಿರ್ಧರಿಸಿರುವುದಾಗಿ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಇಂದು ನಾಣ್ಯ ಪ್ರದರ್ಶನ



ಮಡಿಕೇರಿ: ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ಸರ್ಕಾರಿ ವಸ್ತುಸಂಗ್ರಹಾಲಯ, ಮೇ 18ರ ಬೆಳಗ್ಗೆ 9.45 ಗಂಟೆಗೆ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ ಕಾರ್ಯ ಕ್ರಮವು ವಸ್ತುಸಂಗ್ರಹಾಲಯಗಳು ವಿಭಜಿತ ಜಗತ್ತನ್ನು ಒಂದುಗೂಡಿ ಸುತ್ತಿವೆ ಎಂಬ ಘೋಷ ವಾಕ್ಯದಡಿಯಲ್ಲಿ ನಡೆಯಲಿದೆ.

ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಕೊಡಗಿನ ನಾಣ್ಯ ಸಂಗ್ರಹಕಾರ ಡಾ. ಎಂ.ಜಿ. ಪಾಟ್ಕರ್ ಅವರು ಸಂಗ್ರಹಿಸಿರುವ ನಾಣ್ಯಗಳ ಪ್ರದರ್ಶನವನ್ನು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಉದ್ಘಾಟಿಸಲಿದ್ದಾರೆ ಎಂದು ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ಬಿ.ಪಿ.ರೇಖಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೇತುವೆ ಚೆಕ್ ಡ್ಯಾಮ್ ಕಾಮಗಾರಿಗೆ ಚಾಲನೆ

ಮಡಿಕೇರಿ, ಮೇ 17–ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೀರುಗ ಗ್ರಾಮದ ನೂತನ ಸೇತುವೆ ಮತ್ತು ಚೆಕ್ ಡ್ಯಾಮ್ ನಿರ್ಮಾಣ ಕಾಮಗಾರಿಗೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಭೂಮಿ ಪೂಜೆ ನೆರವೇರಿಸಿದರು.

ಇಲ್ಲಿ ಸೇತುವೆ ಮತ್ತು ಚೆಕ್ ಡ್ಯಾಮ್ ನಿರ್ಮಾಣವಾಗಲಿದ್ದು, ದೇವಸ್ಥಾನಕ್ಕೆ ತೆರಳುವ ಭಕ್ತಾದಿಗಳಿಗೆ ಮತ್ತು ಗ್ರಾಮಸ್ಥರಿಗೆ ತೆರಳಲು ಮಾರ್ಗ ಸುಗಮವಾಗಲಿದೆ. ಮಾತ್ರವಲ್ಲದೆ ಚೆಕ್ ಡ್ಯಾಮ್ ನಿರ್ಮಾಣದಿಂದ ಈ ಭಾಗದ ರೈತರಿಗೆ ಬೇಸಿಗೆಯಲ್ಲಿ ನೀರಿನ ಸಂಗ್ರಹದಿಂದ ಕೃಷಿಗೆ ಉಪಯೋಗಿಸಿಕೊಳ್ಳಲು ಅವಕಾಶವಾಗಲಿದೆ. ಈ ಯೋಜನೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಗುತ್ತಿಗೆದಾರರು ಹಾಗೂ ಇಂಜಿನಿಯರ್‌ಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಚೆಪ್ಪುಡಿಕೊಲ್ಲಿ ಈಶ್ವರ, ಚಾಮುಂಡಿ ದೇವಸ್ಥಾನದ ಪ್ರಮುಖರಾದ ಚೆಪ್ಪುಡಿರ ಪೊನ್ನಪ್ಪ ಮಾತನಾಡಿ, ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಶಾಸಕರು ರೂ.2.50 ಕೋಟಿ ಅನುದಾನದಲ್ಲಿ ಸೇತುವೆ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸುವ ಮೂಲಕ ಈ ಭಾಗದ ಜನರಿಗೆ ನದಿ ದಾಟಲು ಉಂಟಾಗಿದ್ದ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ತಮ್ಮ ಬೇಡಿಕೆಗೆ ಸ್ಪಂದಿಸಿದ ಶಾಸಕರಿಗೆ ಅಭಿನಂದನೆ ಸಲ್ಲಿಸಿದರು.

ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಎ.ಜೆ. ಬಾಬು, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಾಳಿ ಮಾಡ ಪ್ರಶಾಂತ್, ಹಿರಿಯರಾದ ಚೆಪ್ಪುಡೀರ ಪೊನ್ನಪ್ಪ, ಚೆಕ್ಕೇರ ಕಾಳಯ್ಯ, ತೀತಿರ ಪ್ರಭು ಸುಬ್ಬಯ್ಯ, ಪೆಮ್ಮಂಡ ರಾಜಾ ಕುಶಾಲಪ್ಪ, ಮಚ್ಚಮಾಡ ಉದಯ, ಬಾದು ಮಂಡ ವಿಷ್ಣು ಕಾರ್ಯಪ್ಪ, ಅಪ್ಪಚ್ಚಂಗಡ ಮೋಟಯ್ಯ, ಚೊಟ್ಟೆಯಂಡಮಾಡ ಉದಯ, ಬೊಳ್ಳೇರ ದೀಪಕ್, ಅಜ್ಜಿಕುಟ್ಟಿರ ಗಿರೀಶ್, ಪಮ್ಮು ಪೊನ್ನು, ಚೆಪ್ಪುಡೀರ ಬೋಪಣ್ಣ, ಸಣ್ಣ ನೀರಾವರಿ ಇಲಾಖೆಯ ಇಂಜಿನಿಯರ್ ಕುಮಾರಸ್ವಾಮಿ ಹಾಗೂ ದೇವಸ್ಥಾನ ಸಮಿತಿಯ ಪ್ರಮುಖರು, ಗ್ರಾಮಸ್ಥರು ಹಾಜರಿದ್ದರು.



ಬೀರುಗ ಗ್ರಾಮದ ನೂತನ ಸೇತುವೆ ಮತ್ತು ಚೆಕ್ ಡ್ಯಾಮ್‌ನ ಕಾಮಗಾರಿ ನಡೆಯುತ್ತಿರುವುದು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಎಸ್‌ಎಸ್‌ಎಫ್ ಪ್ರತಿಭಟನೆ



ನೀಟ್ ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಎಸ್‌ಎಸ್‌ಎಫ್ ಪ್ರತಿಭಟನೆ ನಡೆಸಿತು.

ಸಿದ್ದಾಪುರ, ಮೇ 17–ನೀಟ್ ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧ ಎಸ್‌ಎಸ್‌ಎಫ್ ರಾಜ್ಯ ಸಂಘಟನೆ ರಾಜ್ಯಾದ್ಯಂತ ಮುಷ್ಕರಕ್ಕೆ ಕರೆ ನಿಡಿದ ಮೇರೆಗೆ ವಿರಾಜಪೇಟೆ ಡಿವಿಷನ್ ವತಿಯಿಂದ ಖಾಸಗಿ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಯಿತು. ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆ ಶಾಶ್ವತ ಪರಿಹಾರವನ್ನು ಸಂಬಂಧಪಟ್ಟ ಇಲಾಖೆ ನೀಡಬೇಕೆಂದು ಆಗ್ರಹಿಸಿದರು.

ಎಸ್‌ಎಸ್‌ಎಫ್ ವಿರಾಜಪೇಟೆ ಡಿವಿಷನ್ ಮಾಧ್ಯಮ ಕಾರ್ಯದರ್ಶಿ ತೌಸೀಫ್ ಅಮ್ಮತ್ತಿ ಮಾತನಾಡಿ, ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣಗಳ ವಿರುದ್ಧ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೊಳಪಡಿಸಬೇಕು. ಇಂತಹ ಪ್ರಶ್ನೆ ಪತ್ರಿಕೆಗಳ ಸೋರಿಗೆ ಆಗದಂತೆ ಶಾಶ್ವತ ಪರಿಹಾರವನ್ನು ಪರೀಕ್ಷಾ ಮಂಡಳಿ ಕಂಡು ಕೊಳ್ಳಬೇಕು ಎಂದು ಒತ್ತಾಯಿಸಿದರು.

ಎಸ್‌ಎಸ್‌ಎಫ್ ಸಂಘಟನೆಯ ವಿರಾಜಪೇಟೆ ಡಿವಿಷನ್ ಪ್ರಧಾನ ಕಾರ್ಯದರ್ಶಿ ಶಫೀಕ್, ಶಫೀರ್, ನಿಝಾಮ್ ಅನ್ವಾರಿ, ನೌಫಲ್ ಅನ್ವಾರಿ, ಸುಫಿಯಾನ್ ರಝಾ, ಜುನೈದ್, ಸಯ್ಯಿದ್ ರಶೀದ್, ಹಾಫಿಜ್ ಇಸ್ಮಾಯಿಲ್, ಶಾಹುಲ್ ಅನ್ವಾರಿ, ವಿದ್ಯಾರ್ಥಿಗಳು ಹಾಗೂ ಎಸ್‌ಎಸ್‌ಎಫ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೇಸರಿ ಶಾಲು ಧಾರ್ಮಿಕ ಸಂಕೇತವಲ್ಲ

ನಾಪೋಕ್ಲು, ಮೇ 17– ರಾಜ್ಯ ಸರ್ಕಾರ ಹಿಜಾಬ್‌ಗೆ ಅವಕಾಶ ನೀಡಿದ ವಿಚಾರದ ಬಗ್ಗೆ ಪರ ವಿರೋಧಿಗಳು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಕೇಸರಿ ಶಾಲು ಧಾರ್ಮಿಕ ಸಂಕೇತವಲ್ಲ ಎಂದು ಶಾಸಕ ಎ.ಎಸ್ ಪೊನ್ನಣ್ಣ ಸರಕಾರದ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ.

ಪಟ್ಟಣದಲ್ಲಿ ನೂತನ ಬಿ ಸಿಕ್ಸ್ ಫಿಟ್ನೆಸ್ ಕ್ಲಬ್ ಜಿಮ್ ಸೆಂಟರ್ ಉದ್ಘಾಟಿಸಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ಮಹಿಳೆಯರಿಗೆ ಸಾಂವಿಧಾನಿಕ ಹಕ್ಕನ್ನು ನೀಡಲು ಆದೇಶಿಸಿದೆ. ಕೇಂದ್ರೀಯ ಶಾಲೆಗಳಲ್ಲಿ ಈಗಾಗಲೇ ಇಂತಹ ಕ್ರಮ ಜಾರಿಯಲ್ಲಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆಯ ಭದ್ರತೆಯನ್ನು ಕಾಪಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆ ಎಂದು ಸಮರ್ಥನೆ ಮಾಡಿಕೊಂಡರು.

ಮೊನ್ನೆ ಪರೀಕ್ಷೆ ಬರೆಯಲು ಹೋದ ಸಂದರ್ಭದಲ್ಲಿ ಜನಿವಾರದ ವಿಚಾರದಲ್ಲಿ ಗಲಾಟೆ ಆಯ್ತು ಜನಿವಾರ ಹಾಕಿಕೊಂಡು ಹೋಗುವವರನ್ನ ಬಿಡಬೇಕಾ ಬೇಡ್ವಾ? ಜನಿವಾರಕ್ಕೂ ಶಿಕ್ಷಣ ಭದ್ರತೆಗೂ ಯಾವುದೇ ಸಂಬಂಧ ಇಲ್ಲ. ಜನಿವಾರಕ್ಕೂ ಅವಕಾಶ ನೀಡ ಬೇಕು ಎಂದು ಆದೇಶ ಮಾಡಿದ್ದೇವೆ. ರುದ್ರಾಕ್ಷಿ ಮಾಲೆ ಹಾಕಿಕೊಂಡು ಬಂದವರನ್ನು ತಡೆಯಬಾರದು ಎಂದು ಅದೇಶ ಮಾಡಿದ್ದೇವೆ. ಹೀಗಿರುವಾಗ ಹಿಜಾಬ್ ಮಾತ್ರ ಬಿಡಬೇಕಾ? ಎಂದು ಪ್ರಶ್ನಿಸಿದರು.

ಬಿಜೆಪಿಯವರು ತಮಗೆ ಸೂಕ್ತವಾದದ್ದನ್ನು ಮಾತ್ರ ತೆಗೆದುಕೊಂಡು ಧರ್ಮಗಳ ಮಧ್ಯೆ ಒಡಕು ತರುವ ಪ್ರಯತ್ನ ನಡೆಸುತ್ತಿದ್ದಾರೆ. ದೇಶದಲ್ಲಿ ಬೆಲೆ ಏರಿಕೆ ಆಗಿದೆ. ಎಷ್ಟು ಆಗಿದೆ? ಇಂದು ತೈಲ ಬೆಲೆ, ಡಾಲರ್ ಬೆಲೆ, ಚಿನ್ನದ ಬೆಲೆ, ಎಲ್ಪಿಜಿ ಬೆಲೆ ಮತ್ತು ಡಾಂಬರ್ ಬೆಲೆ ಮೂರರಷ್ಟಾಗಿದೆ. ಇವುಗಳ ಬಗ್ಗೆ ಮಾತನಾಡುವುದಿಲ್ಲ ಎಂದು ಛೇಡಿಸಿದರು. ಕೇಸರಿ ಶಾಲು ಯಾವುದೇ ಧಾರ್ಮಿಕ ಮೌಲ್ಯಗಳ ಸಂಕೇತವಾಗಿ ಬಳಸಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ಕೇಸರಿ ಶಾಲುಗಳನ್ನು ಬಳಸುತ್ತಾರೆ. ಆದ್ದರಿಂದ ಕೇಸರಿ ಶಾಲು ಮತ್ತು ಹಿಜಾಬ್ ಹೋಲಿಕೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಸರ್ಕಾರ ಎಲ್ಲ ಧರ್ಮಗಳ ಭಾವನೆಗಳನ್ನು ಗೌರವಿಸಿ ಕಾನೂನುಬದ್ಧವಾಗಿ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಅವರು ಸ್ಪಷ್ಟಪಡಿಸಿದರು.

ಗ್ರಾವೆಲ್ ಹಾಕಿ ಟೂರ್ನಿ:

ಕೋಣನಕಟ್ಟೆ ಇಲವೆನ್ ತಂಡ ಚಾಂಪಿಯನ್

ನಾಪೋಕ್ಲು, ಮೇ 17– ಬ್ಯಾಕ್ ಟು ರೂಟ್ಸ್ ಗ್ರಾವೆಲ್ ಹಾಕಿ ಟೂರ್ನಿಯಲ್ಲಿ ಕೋಣನಕಟ್ಟೆ ಇಲವೆನ್ ತಂಡ ಮಡಿಕೇರಿ ಚಾರ್ಮರ್ಸ್ ವಿರುದ್ಧ 5–3 ಗೋಲುಗಳಿಂದ ಗೆಲುವು ಸಾಧಿಸಿ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು.

ಸಮಾಜ ಬಾಂಧವರ ಒಗ್ಗೂಡುವಿಕೆಗೆ ಕ್ರೀಡೆ ಸಹಕಾರಿ



ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಬ್ಯಾಟ್ ಬೀಸುವುದರ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ವಿರಾಜಪೇಟೆ, ಮೇ 17– ಕ್ರೀಡೆಯಿಂದ ದೈಹಿಕವಾಗಿ ಮನೋಲ್ಲಾಸ ಎಲ್ಲರೂ ಸಂಘಟನೆ ಮೂಲಕ ಸಮಾಜ ಬಾಂಧವರನ್ನು ಒಗ್ಗೂಡಿಸಲು ಕ್ರೀಡೆ ಸಹಕಾರಿಯಾಗಲಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಸಮಾಜದ ಗೌರವ ಅಧ್ಯಕ್ಷ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅರಮೇರಿ ಕಳಂಚೇರಿ ಮಠದ ಎಸ್‌ಎಂಎಸ್. ಶಾಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ ಕ್ರೀಡಾಕೂಟದಲ್ಲಿ ಬ್ಯಾಟ್ ಬೀಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಸಾಧನೆ ಮಾಡುವುದು ಬಹಳಷ್ಟಿದೆ. ಜೀವನದಲ್ಲಿ ಸಾಧನೆಯ ಮೂಲಕ ದೇಶದ ಉತ್ತಮ ಪ್ರಜೆ ಗಳಾಗುವಂತೆ ಹೇಳಿ ಶುಭ ಹಾರೈಸಿದರು. ಇದಕ್ಕೂ ಮೊದಲು ವೀರ ಶೈವ ಸಮಾಜ ಬಾಂಧವರಿಂದ ಶ್ರೀ ಮಠದ ಗದ್ದುಗೆಗೆ ಪೂಜೆ ಸಲ್ಲಿಸಲಾಯಿತು.

ಅಖಿಲ ಭಾರತ ವೀರಶೈವ ಮಹಾಸಭಾ ಪೊನ್ನಂಪೇಟೆ ಹಾಗೂ ವಿರಾಜಪೇಟೆ ತಾಲೂಕು ಘಟಕದ ಅಧ್ಯಕ್ಷ ಎನ್.ಎಂ. ರಾಜೇಶ್ ಅಧ್ಯಕ್ಷತೆಯಲ್ಲಿ ನಡೆದ ಕ್ರೀಡಾಕೂಟದಲ್ಲಿ ಕ್ರಿಕೆಟ್, ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ಹಗ್ಗ ಜಗ್ಗಾಟ, ಬಾಲಕ ಮತ್ತು ಬಾಲಕಿಯರಿಗೆ 100 ಮಿ. ಓಟ, ಪುಟಾಣಿ ಮಕ್ಕಳಿಗೆ ಕಾಳು ಹೆಕ್ಕುವುದು, ಮಹಿಳೆಯರಿಗೆ ನಿಂಬೆಹಣ್ಣಿನ ಓಟ ಮತ್ತು ನಡಿಗೆಯಲ್ಲಿ ಸೂಜಿಗೆ ದಾರ ಪೋಣಿಸುವುದು, ಮಡಿಕೆ ಒಡೆಯುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕ್ರೀಡಾಕೂಟದ ತೀರ್ಪುಗಾರರಾಗಿ ವೀರ ಶೈವ ಸಮಾಜದ ಕಾರ್ಯದರ್ಶಿ ವೇದಾ ಜಯರಾಜು, ಶಿಕ್ಷಕಿ ಜ್ಯೋತಿ ಹಾಗೂ ಆಡಳಿತ ಮಂಡಳಿ ಸದಸ್ಯರು ಸಮಾಜದ ಬಾಂಧವರು ಭಾಗವಹಿಸಿದ್ದರು.

ನಂತರ ನಡೆದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಕ್ರೀಡಾ ಕೂಟದಲ್ಲಿ ವಿಜೇತರಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಈ ಸಂದರ್ಭ ವಿದ್ಯಾರ್ಥಿ ಪ್ರದೀಪ್ ಭಕ್ತಿಗೀತೆಗಳನ್ನಾಡಿದರು.

ಮೌಢ್ಯ, ಕಂದಾಚಾರ ತೊಡೆದು ಹಾಕಿ



ಕುಶಾಲನಗರ, ಮೇ 17–ಸಮಾಜದಲ್ಲಿ ಬೇರೂರಿರುವ ಮೌಢ್ಯ, ಕಂದಾಚಾರಗಳನ್ನು ತೊಡೆದು ಹಾಕುವ ಮೂಲಕ ವೈಜ್ಞಾನಿಕ ಪ್ರಜ್ಞೆ ಬೆಳೆಸುವುದು ಇಂದಿನ ಅಗತ್ಯವಾಗಿದೆ ಎಂದು ಮ.ನಾ.ವೆಂಕಟನಾಯಕ್ ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ (ಕೆಜಿವಿಎಸ್)ಯ ಜಿಲ್ಲಾ ಘಟಕದ ವತಿಯಿಂದ ಪಟ್ಟಣದ ಅನುಗ್ರಹ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ವೈಜ್ಞಾನಿಕ ಮನೋಭಾವ ಹಾಗೂ ವೈಚಾರಿಕತೆ ಕುರಿತು ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಮಾಜದಲ್ಲಿ ವೈಚಾರಿಕತೆ ಬೆಳೆಸುವ ಮೂಲಕ ಸಮಾಜದಲ್ಲಿನ ಮೌಢ್ಯ, ಕಂದಾಚಾರಗಳನ್ನು ನಿರ್ಮೂಲನ ಮಾಡಲು ಪಣ ತೊಡಬೇಕು ಎಂದರು.

ಸಮಾಜದಲ್ಲಿ ಅನಾದಿಕಾಲದಿಂದಲೂ ಬೇರೂರಿ ಬಂದಿರುವ ಮೂಢನಂಬಿಕೆಗಳಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಟ ನಡೆಸಿ ಜನರಲ್ಲೂ ಜಾಗೃತಿ ಮೂಡಿಸುವ ಕಾರ್ಯ ಮಾಡಬೇಕಾಗಿದೆ ಎಂದರು.

ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾಧ್ಯಕ್ಷೆ ಎಂ.ಟಿ. ಸರಳಕುಮಾರಿ ಮಾತನಾಡಿ, ಜನರನ್ನು ಬಾಧಿಸುತ್ತಿರುವ ಮೌಢ್ಯಗಳ ಬಗ್ಗೆ ಜನ ಜಾಗೃತಿ ಮೂಡಿಸಲು ಎಲ್ಲಾ ಸಂಘಟನೆಗಳು ಒಗ್ಗೂಡಿ ಹೋರಾಟ ನಡೆಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜ್ಞಾನ ವಿಜ್ಞಾನ ಸಮಿತಿ ತಾಲೂಕು ಘಟಕದ ಅಧ್ಯಕ್ಷ ಟಿ.ಬಿ. ಮಂಜುನಾಥ್ ಮಾತನಾಡಿ, ಯುವ ಜನಾಂಗ ಎಚ್ಚೆತ್ತು ಮೌಢ್ಯದ ವಿರುದ್ಧ ಹೋರಾಟ ನಡೆಸಿ ಆಧುನಿಕತೆಗೆ ಅನುಗುಣವಾಗಿ ಬದುಕುವ ಕಲೆ ಬೆಳೆಸಿಕೊಳ್ಳಬೇಕು ಎಂದರು.

ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಕಾರ್ಯದರ್ಶಿ ಎನ್.ಎಸ್.ಕುಮಾರ್ ಮಾತನಾಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂವಾದದಲ್ಲಿ ಎಂ.ಎಸ್.ಕೇಶವಮೂರ್ತಿ, ಎಂ.ಜಿ ಮಾಚಯ್ಯ, ಎಚ್.ಎನ್.ಆಕಾಶ್, ಕೆ.ಎನ್. ಸುಹೈಬ್, ಪ್ರಮೋದ್, ರಾಜು ಇತರಿದ್ದರು.

ಚಾ.ನಗರದಲ್ಲಿ ರಾಜಾವೀರ ಮದಕರಿ ನಾಯಕರ ಪುಣ್ಯಸ್ಮರಣೆ



ಚಾಮರಾಜನಗರದ ಶ್ರೀ ವಾಲ್ಮೀಕಿ ಆಟೋ ನಿಲ್ದಾಣದಲ್ಲಿ ಮದಕರಿನಾಯಕರ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ: ರಾಜಾವೀರ ಮದಕರಿನಾಯಕರು ಒಬ್ಬ ದಕ್ಷ ಆಡಳಿತಗಾರಾಗಿದ್ದು, ಸ್ವಾಭಿಮಾನಿ, ಶೌರ್ಯ ಮತ್ತು ಸಾಹಸದ ಪ್ರತೀಕ ಎಂದು ನಾಯಕ ಸಮುದಾಯದ ಯುವ ಮುಖಂಡ ಬುಲೆಟ್ ಚಂದ್ರು ತಿಳಿಸಿದರು.

ನಗರದ ಶ್ರೀ ವಾಲ್ಮೀಕಿ ಆಟೋ ನಿಲ್ದಾಣದಲ್ಲಿ ನಾಯಕ ಸಮುದಾಯದ ವತಿಯಿಂದ ನಡೆದ ರಾಜಾವೀರ ಮದಕರಿ ನಾಯಕ ಪುಣ್ಯಸ್ಮರಣೆ ಕಾರ್ಯ ಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಮದಕರಿ ನಾಯಕರ ಆಳ್ವಿಕೆ ಅವಧಿಯಲ್ಲಿ ಕೈಗೊಂಡ ಹಲವು ರಾಜಕೀಯ ನಿರ್ಣಯಗಳು ಚಿತ್ರದುರ್ಗ ಸಂಸ್ಥಾನದ ಕೀರ್ತಿಯನ್ನು ದಕ್ಷಿಣ ಭಾರತದಲ್ಲೆಲ್ಲಾ ಹರಡಲು ಕಾರಣವಾಯಿತು. ಅವರ ಆಳ್ವಿಕೆಯಿಂದಾಗಿಯೆ ಚಿತ್ರದುರ್ಗ ಸಂಸ್ಥಾನವು ಹೆಚ್ಚು ಪ್ರವರ್ಧಮಾನಕ್ಕೆ ಬರಲು ಸಾಧ್ಯವಾಯಿತು. ಮುಖ್ಯವಾಗಿ ಶ್ರೀರಂಗಪಟ್ಟಣದ ನವಾಬರು ಮತ್ತು ಮರಾಠ ಪೇಶ್ವೆಗಳೊಡನೆ ಮದಕರಿ ನಾಯಕರು ಇಟ್ಟುಕೊಂಡಿದ್ದ ರಾಜಕೀಯ ಬಾಂಧವ್ಯ ಮತ್ತು ನಡೆಸಿದ ಹೋರಾಟಗಳು ಆತನ ರಾಜಕೀಯ ದೂರದೃಷ್ಟಿ ಹಾಗೂ ಶೌರ್ಯ–ಸಾಹಸಗಳನ್ನು ಪ್ರತಿನಿಧಿಸುತ್ತವೆ ಎಂದರು.

ಬದುಕಿನ ಬಹುಕಾಲ ಯುದ್ಧೋತ್ಸವಗಳಲ್ಲೆ ಭಾಗಿಯಾಗುತ್ತಿದ್ದ ಮದಕರಿ ನಾಯಕರು ಸಂಸ್ಥಾನವನ್ನು ಬಲಪಡಿಸುವಲ್ಲಿ, ರಾಜ್ಯವನ್ನು ಸುಭೀಕ್ಷೆಯಿಂದ ಇಟ್ಟುಕೊಳ್ಳುವಲ್ಲಿ ವಹಿಸುತ್ತಿದ್ದ ಪಾತ್ರ ವಿಶೇಷವಾದುದು. ಅವರ ತತ್ವಾದರ್ಶ ವನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ ಬಂಗಾರು, ಆಟೋಮಂಜು, ಸುಬ್ರಹ್ಮಣ್ಯ, ಮಹದೇವನಾಯಕ, ಲಕ್ಷ್ಮಣ, ಮಹೇಶ್ ನಾಯಕ, ಶ್ರೀನಿವಾಸ, ಬಂಗಾರ ನಾಯಕ, ರಂಗಸ್ವಾಮಿ, ಎಸ್‌ಎಂಬಿಟಿ ಸಿದ್ದರಾಜು, ರಾಜಣ್ಣ, ಚಂದ್ರು, ಸಂತು, ನಾಗೇಶ್, ಮಣಿ, ಗುರು, ಸಿದ್ದರಾಜು, ರಾಘು, ಶ್ರೀನಿವಾಸ, ಚೇತನ್, ಕಿರಣ್, ಮನು ಇತರರು ಹಾಜರಿದ್ದರು.

ಚಾಮರಾಜನಗರದಲ್ಲಿ ರಾಜೀವ್ ಜ್ಯೋತಿ ಯಾತ್ರೆಗೆ ಬೀಳ್ಕೊಡುಗೆ

ರಾಜೀವ್ ಗಾಂಧಿ ಅವರ ಕೊಡುಗೆ ಅನನ್ಯ: ಮಹಮ್ಮದ್ ಅಸ್ಗರ್

ಚಾಮರಾಜನಗರ: ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಕೆಪಿಸಿಸಿ ಕಾರ್ಮಿಕ ಘಟಕ ಹಮ್ಮಿಕೊಂಡಿರುವ 'ರಾಜೀವ್ ಜ್ಯೋತಿ ಯಾತ್ರೆ'ಯು ಶನಿವಾರ ಸಂಜೆ ನಗರಕ್ಕೆ ಆಗಮಿಸಿದ್ದು ಭಾನುವಾರ ಬೆಳಿಗ್ಗೆ ತಮಿಳುನಾಡಿಗೆ ಹೊರಟ ಯಾತ್ರೆಗೆ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಬೀಳ್ಕೊಟ್ಟರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯ ಮುಂಭಾಗದಲ್ಲಿ ರಾಜೀವ್ ಗಾಂಧಿ ಜ್ಯೋತಿ ಯಾತ್ರೆಗೆ ಬೀಳ್ಕೊಟ್ಟು ಮಾತನಾಡಿದ ಅವರು, ಭಾರತದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು ದೇಶದಲ್ಲಿ ಮಾಹಿತಿ ತಂತ್ರಜ್ಞಾನ ಕ್ರಾಂತಿ, ದೂರಸಂಪರ್ಕ ವಲಯದ ಅಭಿವೃದ್ಧಿ, 18 ವರ್ಷಕ್ಕೆ ಮತದಾನದ ಹಕ್ಕು, ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆ ಮತ್ತು ಸ್ಥಳೀಯ ಆಡಳಿತದಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮೂಲಕ ಆಧುನಿಕ ಭಾರತದ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಕೋಮುವಾದ, ಭಯೋತ್ಪಾದನೆ, ಅಶಾಂತಿ ತೊಲಗಿಸುವಲ್ಲಿ ರಾಜೀವ್ ಗಾಂಧಿಯವರ ವಿಚಾರಗಳನ್ನು ಜನ ಸಾಮಾನ್ಯರಿಗೆ ತಿಳಿಸುವುದು. ನಕ್ಸಲ್‌ವಾದ ತಡೆಯುವಲ್ಲಿ ರಾಷ್ಟ್ರದ ಪೊಲೀಸ್ ಪಡೆಗಳೊಂದಿಗೆ ನಾಗರಿಕರು ಕೈಜೋಡಿ ಸುವಂತೆ ಮಾಡುವುದೂ ಈ ಯಾತ್ರೆಯ ಉದ್ದೇಶವಾಗಿದೆ ಎಂದರು.

ಕೆಪಿಸಿಸಿ ಕಾರ್ಮಿಕ ಘಟಕದ ಅಧ್ಯಕ್ಷ ಆರ್.ದೊರೈವೇಲು ಮಾತನಾಡಿ, ಬೆಂಗಳೂರಿನಿಂದ ಮೇ 15ರಂದು ಕಳೆದ 35 ವರ್ಷಗಳಿಂದ ಹೊರಡಿಸಲಾಗುತ್ತಿರುವ ರಾಜೀವ್ ಜ್ಯೋತಿ ಯಾತ್ರೆ, ನೆಲಮಂಗಲ, ಕುಣಿಗಲ್, ಯಡಿಯೂರು, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ, ಕೆ.ಆರ್.ನಗರ ಮತ್ತು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಮೂಲಕ ಸಾಗಿ, ನಂತರ ತಮಿಳುನಾಡಿಗೆ ಸತ್ಯಮಂಗಲಂ, ಕೊಯಮತ್ತೂರು, ಅವಿನಾಶ್, ಪೆರುಮ ನಲ್ಲೂರು, ಈರೋಡ್, ಭವಾನಿ, ಸೇಲಂ, ಅತ್ತೂರು, ಧರ್ಮಪುರಿ, ಕೃಷ್ಣಗಿರಿ, ತಿರು ಪ್ಪತ್ತೂರು, ಉತ್ತಂಗರಾಲ್, ಸಿಂಗಾರ ಪೇಟೆ, ಚೆಂಗಂ, ತಿರುವಣ್ಣಾಮಲೈ, ಜಿಂಜೀ, ತಿಂದಿವನಂ ಮೂಲಕ ಪ್ರವೇಶಿಸಿ ಪಾಂಡಿಚೇರಿಗೆ ಪ್ರವೇಶಿಸುತ್ತದೆ. ರಾಜೀವ್ ಜ್ಯೋತಿ ಯಾತ್ರೆ ಚೆನ್ನೈಗೆ ಮೇ 21 ರಂದು ಶ್ರೀಪೆರಂಬದೂರಿನಲ್ಲಿ ಸಮಾಪ್ತಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ನಾಗರತ್ನ, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಪದ್ಮ ಪುರುಷೋತ್ತಮ, ಕಾಗಲವಾಡಿ ಚಂದ್ರ ನಾಗಯ್ಯ, ರೂಪೇಶ್, ಜಿಲ್ಲಾ ಕಾಂಗ್ರೆಸ್ ಕಚೇರಿ ಕಾರ್ಯದರ್ಶಿ ಎ.ಎಚ್. ನಸ್ರುಲ್ಲಾ ಖಾನ್, ನಾಗರಾಜು, ಕುಮಾರ್ ಇತರರು ಭಾಗವಹಿಸಿದ್ದರು.



ರಾಜೀವ್ ಗಾಂಧಿ ಜ್ಯೋತಿ ಯಾತ್ರೆಗೆ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಬೀಳ್ಕೊಟ್ಟರು

ವೇದಿಕೆ ನೊಂದವರು, ಬಡವರ ಪರ ನಿಲ್ಲಲಿ

- ಜನಪರ ಸೇವೆಗೆ ಮೊದಲ ಆದ್ಯತೆ ನೀಡಬೇಕು, ರಾಜ್ಯಾಧ್ಯಕ್ಷ ಮಹೇಶ್ ಕುಮಾರ್ ಸಲಹೆ
- ಹೊಲಿಗೆ ಯಂತ್ರ, ಸಾಧಕ ವಿದ್ಯಾರ್ಥಿಗಳಿಗೆ ಪುರಸ್ಕಾರದ ಮೂಲಕ ಪದಾಧಿಕಾರಿಗಳ ಪದಗ್ರಹಣ



ಕಾರ್ಯಕ್ರಮದಲ್ಲಿ ಸಾಧಕ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕೊಳ್ಳೇಗಾಲ, ಮೇ 17– ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಬಡವರು, ಶೋಷಿತರು, ನೊಂದವರ ಪರ ಧ್ವನಿಯಾಗಲಿ, ನಮ್ಮ ಭಾಷೆ. ನೆಲ–ಜಲದ ವಿಚಾರದಲ್ಲಿ ಸಂಘಟಿತ ಹೋರಾಟಕ್ಕೆ ಮುಂದಾಗಲಿ, ಕೊಳ್ಳೇಗಾಲ ತಾಲೂಕಿನಲ್ಲಿ ನೂತನ ಬದಲಾವಣೆ ತರುವ ನಿಟ್ಟಿನಲ್ಲಿ ಶ್ರಮಿಸುವಂತಾಗಬೇಕು ಎಂದು ಮುಖ್ಯಮಂತ್ರಿ ಪದಕ ಪುರಸ್ಕೃತ ಎಸಿಪಿ ಮಹಾನಂದ ತಿಳಿಸಿದರು.

ಪಟ್ಟಣದ ಗುರುಭವನದಲ್ಲಿ ಭಾನುವಾರ ವಿಜಯ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಿರುದ್ಯೋಗಿ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ, 10ನೇ ತರಗತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು, ನೊಂದವರ ಪರ ನಿಲ್ಲುವುದು, ಕಳಂಕ ರಹಿತ ಸೇವೆ ನೂತನ ಪದಾಧಿಕಾರಿಗಳು ಹಾಗೂ ಸಂಘಟನೆಯ ಪ್ರಮುಖ ಗುರಿಯಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯಾಧ್ಯಕ್ಷ ಮಹೇಶ್ ಕುಮಾರ್ ಮಾತನಾಡಿ, ಜನಪರ ಸೇವೆ ಸಂಘಟನೆ ಮೊದಲ ಆದ್ಯತೆಯಾಗಿದ್ದು ಇಂದಿನ ಕಾರ್ಯಕ್ರಮದಲ್ಲಿ ಹೊಲಿಗೆ ಯಂತ್ರ, ಸಾಧಕ ಮಕ್ಕಳಿಗೆ ಪುರಸ್ಕಾರ ಹಮ್ಮಿಕೊಂಡಿರುವುದು ಹೆಮ್ಮೆಯ ಸಂಗತಿ. ತಾಲೂಕು, ಜಿಲ್ಲೆ ಪದಾಧಿಕಾರಿಗಳು ಸಂಘಟನೆ ಜೊತೆ ನೊಂದವರ ಪರ ನಿಲ್ಲಬೇಕು, ಜನಪರ ನಿಲ್ಲುವುದೆ ನಮ್ಮ ಧ್ಯೇಯ ಎಂದರು.

ಈ ವೇಳೆ ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷ ಆನಂದಮೂರ್ತಿ, ಪ್ರಥಮ ದರ್ಜೆ ಗುತ್ತಿಗೆದಾರ ಓಲೆ ಮಹದೇವ, ಬಿಇಒ ಮಂಜುಳಾ, ಇತಿಹಾಸ ವಿಭಾಗ ಉಪನ್ಯಾಸಕ ಗಿರೀಶ್ ಬಾಬು, ನಗರಸಭೆ ಮಾಜಿ ಅಧ್ಯಕ್ಷ ಶಾಂತರಾಜು, ತಾ.ಪಂ.ಮಾಜಿ ಉಪಾಧ್ಯಕ್ಷ ಬಸವಣ್ಣ, ರಾಜ್ಯ ಉಪಾಧ್ಯಕ್ಷ ದೇವರಾಜು, ಚಿಕ್ಕಬಳ್ಳಾಪುರ ಜಿಲ್ಲಾಧ್ಯಕ್ಷ ಅಶೋಕ್, ಜಿಲ್ಲಾ ಗೌರವಾಧ್ಯಕ್ಷ ವೆಂಕಟಾಚಾಲ, ಜಿಲ್ಲಾಧ್ಯಕ್ಷ ಶಿವಸುಂದರ್, ತಾಲೂಕು ಅಧ್ಯಕ್ಷ ರೇವಣ್ಣ ಇನ್ನಿತರಿದ್ದರು

ಸ್ವಚ್ಛ ಪರಿಸರ, ಪೌಷ್ಠಿಕ ಆಹಾರದಿಂದ ಆರೋಗ್ಯಕರ ಸಮಾಜ ಕಟ್ಟಲು ಸಾಧ್ಯ

ಚಾಮರಾಜನಗರ: ಆರೋಗ್ಯಯುತ ದೇಶ ಕಟ್ಟಲು ಸ್ವಚ್ಛ ಪರಿಸರ ಕಾಪಾಡಿಕೊಂಡು ಪೌಷ್ಠಿಕ ಆಹಾರ ಸೇವಿಸುವ ಮೂಲಕ ಪ್ರತಿಯೊಬ್ಬರು ಆರೋಗ್ಯವಂತರಾಗಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ್ ಸಲಹೆ ನೀಡಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಕಾನೂನು ಅರಿವು–ನೆರವು ಮತ್ತು ಆರೋಗ್ಯ–ನೈರ್ಮಲ್ಯ ಜಾಗೃತಿ ಕುರಿತು ಆಯೋಜಿಸಲಾಗಿದ್ದ ಒಂದು ದಿನದ ತಾಲೂಕು ಮಟ್ಟದ ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಸ್ವಚ್ಛ ಗಾಳಿ, ಬೆಳಕು ಸೇರಿದಂತೆ ಉತ್ತಮ ಪರಿಸರವನ್ನು ಮುಂದಿನ ಪೀಳಿಗೆಗೂ ಉಳಿಸಬೇಕಾಗಿರುವುದರಿಂದ ನೀರನ್ನು ಮಿತವಾಗಿ ಬಳಸಬೇಕು. ಶುದ್ಧ ಗಾಳಿಗಾಗಿ ಗಿಡಮರಗಳನ್ನು ಯತೇಚ್ಛವಾಗಿ ಬೆಳೆಸಬೇಕು. ರಕ್ತಹೀನತೆ ತಡೆಗಟ್ಟಲು ಪೌಷ್ಠಿಕಾಂಶವುಳ್ಳ ತರಕಾರಿ, ಸೊಪ್ಪು, ಮೊಳಕೆಕಾಳು ಸೇವನೆ ಮಾಡಬೇಕು. ಗರ್ಭಿಣಿ, ಬಾಣಂತಿಯರಿಗೆ ಸರ್ಕಾರದಿಂದ ನೀಡುವ ಪೌಷ್ಠಿಕ ಆಹಾರದ ಕಿಟ್‌ಗಳನ್ನು ಸಮರ್ಪಕವಾಗಿ ತಲುಪಿಸಬೇಕು. ಅನೀಮಿಯ ಮುಕ್ತ ದೇಶ ಕಟ್ಟಲು ನೆರವಾಗುವ ಅಂಶಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸ್ಥಳೀಯ ಗ್ರಾಮ ಪಂಚಾಯಿತಿ ಪಿಡಿಒ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಮುಂದಾಗಬೇಕು ಎಂದು ತಿಳಿಸಿದರು.

ನಂತರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಬಿ. ಮಂಜುಳಾ ಮಾತನಾಡಿ, ಬಾಲ್ಯವಿವಾಹ, ಪೋಕ್ಸೋ ಪ್ರಕರಣಗಳ ತಡೆಯಲು ರಚಿಸಲಾಗಿರುವ ಸ್ಥಳೀಯ ಗ್ರಾಮ ಮಟ್ಟದ ಕಾವಲು ಪಡೆಗಳು ತಮ್ಮ ಕಾರ್ಯಚಟುವಟಿಕೆ ಚುರುಕುಗೊಳಿಸಬೇಕು ಎಂದರು.

ಬಳಿಕ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ ರಾಮಸಮುದ್ರ ಮಾತನಾಡಿ, ನಾಗರಿಕ ಹಕ್ಕು ಸಂರಕ್ಷಣಾ ಕಾಯ್ದೆ–1955 ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು (ದೌರ್ಜನ್ಯ ತಡೆ) ಅಧಿನಿಯಮ–1989ರ ಕುರಿತು ಕಾರ್ಯಕ್ರಮದಲ್ಲಿ ಸವಿವರವಾಗಿ ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್. ಗಿರಿಧರ್, ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಆರ್‌ಡಿಇಪಿಆರ್ ತರಬೇತುದಾರ ಕಾಳಿಂಗಸ್ವಾಮಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಂಯೋಜಕ ಸಿದ್ದಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.



ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ತಾಲೂಕು ಮಟ್ಟದ ಜಾಗೃತಿ ಕಾರ್ಯಾಗಾರವನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ್ ಉದ್ಘಾಟಿಸಿದರು.

> ದೇಶದ ಪ್ರತಿಯೊಬ್ಬ ಪ್ರಜೆಯು ನಾಗರಿಕ ಹಕ್ಕು ಸಂರಕ್ಷಣಾ ಕಾಯ್ದೆಯ ಬಗ್ಗೆ ಹೆಚ್ಚಿನ ಅರಿವು ಪಡೆದುಕೊಂಡು ದೇಶದ ಕಾನೂನು ಪಾಲಿಸಬೇಕು. ಬಾಲ್ಯವಿವಾಹ ಹಾಗೂ ಪೋಕ್ಸೋ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ತಡೆಯಲು ಗ್ರಾಮೀಣ ಮಕ್ಕಳ ಪೋಷಕರಿಗೆ ಜಾಗೃತಿ ನೀಡಬೇಕು. ಒಳ್ಳೆಯ ಹಾಗೂ ಕೆಟ್ಟ ಸ್ಪರ್ಶದ ಕುರಿತು ಹೆಣ್ಣುಮಕ್ಕಳಿಗೆ ತಿಳಿಸಿಕೊಡಬೇಕು. ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕು.
>
> – **ಈಶ್ವರ್**, ಸದಸ್ಯ ಕಾರ್ಯದರ್ಶಿ, ಕಾನೂನು ಸೇವಾ ಪ್ರಾಧಿಕಾರ.

ನಂ.ಗೂಡಲ್ಲಿ ತೋಟಗಾರಿಕೆ ಇಲಾಖೆ ಕಚೇರಿ ಉದ್ಘಾಟನೆ

ನಂಜನಗೂಡು, ಮೇ 17– ತೋಟಗಾರಿಕೆ ಇಲಾಖೆ ಅಧಿಕಾರಿಗಳು ರೈತರ ಜಮೀನುಗಳಿಗೆ ತೆರಳಿ ಸಲಹೆ ನೀಡಿ ಅವರ ಕೃಷಿ ಕಾರ್ಯಕ್ಕೆ ನೆರವು ನೀಡುವ ಜೊತೆಗೆ ಯುವಕರಿಗೆ ಪ್ರೋತ್ಸಾಹ ನೀಡಿ ಕೃಷಿ ಕಾಯಕದಲ್ಲಿ ತೊಡಗುವಂತೆ ಪ್ರೇರೇಪಿಸಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ತೋಟಗಾರಿಕಾ ಇಲಾಖೆ ಆವರಣದಲ್ಲಿ 71 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ತೋಟಗಾರಿಕಾ ಇಲಾಖೆ ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು.

ತೋಟಗಾರಿಕೆ ಇಲಾಖೆ ಅಧಿಕಾರಿಗಳು ಫೋನ್‌ಗೆ ಸಿಗುವುದಿಲ್ಲ ಎಂಬ ಆರೋಪವಿದೆ. ಶಾಸಕರಾಗಿ ನಾವೇ ಎಲ್ಲಾ ಕರೆಗಳಿಗೂ ಸ್ಪಂದಿಸುತ್ತೇವೆ. ಆದರೆ ಅಧಿಕಾರಿಗಳಿಗೆ ಏನಾಗಿದೆ? ರೈತರ ನಡುವೆ ನೇರ ಸಂಪರ್ಕ ಇಟ್ಟುಕೊಂಡು ಜಮೀನುಗಳಿಗೆ ಖುದ್ದಾಗಿ ತೆರಳಿ ಬಾಳೆ ಸೇರಿದಂತೆ ಹಲವು ಬೆಳೆಗಳ ರೋಗ ತಡೆಗಟ್ಟಲು ಸಲಹೆ ನೀಡಿ ರೈತರಿಗೆ ಆಗುವ ನಷ್ಟ ತಪ್ಪಿಸಬೇಕು. ಮುಖ್ಯವಾಗಿ ಬೆಳೆ ಹಾನಿಗೆ ಶೀಘ್ರ ಸೂಕ್ತ ಪರಿಹಾರ ವಿತರಿಸಬೇಕು. ಅಲ್ಲದೆ ಯುವಕರಿಗೆ ಕೃಷಿ ಕಾರ್ಯ ಕೈಗೊಳ್ಳಲು ಹೆಚ್ಚಿನ ಪ್ರೋತ್ಸಾಹ ನೀಡಿ ಅವರನ್ನು ಕೃಷಿಯತ್ತ ಸೆಳೆಯಬೇಕು ಎಂದರು.



ತೋಟಗಾರಿಕಾ ಇಲಾಖೆ ಕಚೇರಿಯನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು ರಸಬಾಳೆ ಸಂಶೋಧನಾ ಕೇಂದ್ರ ಸ್ಥಾಪನೆಗೆ ಕ್ರಮ: ನಂಜನಗೂಡು ರಸಬಾಳೆ ಭೌಗೋಳಿಕ ಸೂಚಕದಲ್ಲಿ ಸ್ಥಾನ ಪಡೆದಿರುವುದರಿಂದ ದೇಶ ವಿದೇಶಗಳಿಗೆ ರಫ್ತಾಗುತ್ತಿದೆ. ಹಿಂದೆ 50 ಎಕರೆ ಪ್ರದೇಶದಲ್ಲಿ ಮಾತ್ರ ರಸ ಬಾಳೆ ಬೆಳೆಯುತ್ತಿದ್ದರು. ಪ್ರಸ್ತುತ 150 ಎಕರೆಗೆ ವಿಸ್ತರಣೆಗೊಂಡಿದೆ. ನಂಜನಗೂಡು ರಸ ಬಾಳೆಗೆ ಬರುವ ಗಂಟು ರೋಗದ ಬಗ್ಗೆ ಸಂಶೋಧನೆ ನಡೆಯಬೇಕು. ಆ ನಿಟ್ಟಿನಲ್ಲಿ ರೈತರಿಗೆ ನೆರವಾಗುವ ಸದುದ್ದೇಶದಿಂದ ಮುಂದಿನ ಅಧಿವೇಶನದಲ್ಲಿ ಚರ್ಚಿಸಿ ನಂಜನಗೂಡಿನಲ್ಲಿ ಸಂಶೋಧನಾ ಕೇಂದ್ರ ತೆರೆಯಲು ಕ್ರಮವಹಿಸಲಾಗುವುದು ಎಂದರು.

ಕಳಪೆ ಕಾಮಗಾರಿ ಬಗ್ಗೆ ಆಕ್ರೋಶ: ಕೆಆರ್‌ಐಡಿಎಲ್ ಸಂಸ್ಥೆಯಿಂದ ನಿರ್ವಹಿಸಿರುವ ತೋಟಗಾರಿಕಾ ಕಚೇರಿ ಕಟ್ಟಡ ಕಳಪೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಶಾಸಕರು, ಶೌಚಾಲಯದಲ್ಲಿ ಅಳವಡಿಸಿರುವ ಪರಿಕರಗಳನ್ನು ಬದಲಾಯಿಸಿ ಗುಣಮಟ್ಟದ ಪರಿಕರಗಳನ್ನು ಅಳವಡಿಸಬೇಕು ಎಂದು ಸೂಚನೆ ನೀಡಿದರು.

ಮಾಜಿ ಶಾಸಕ ಕೇಶವಮೂರ್ತಿ ಮಾತನಾಡಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸಹಾಯಧನ ವಿತರಿಸುವುದಿಲ್ಲ. ರೈತರ ಜಮೀನಿಗಳಿಗೆ ತೆರಳಿ ಸಲಹೆ ನೀಡುತ್ತಿಲ್ಲ ಮತ್ತು ಸವಲತ್ತು ವಿತರಣೆಯಲ್ಲೂ ಸಹ ತಮಗೆ ಬೇಕಾದವರಿಗೆ ವಿತರಿಸುತ್ತಿದ್ದಾರೆ ಎಂಬ ಬಗ್ಗೆ ವ್ಯಾಪಕ ದೂರು ಕೇಳಿ ಬಂದಿದೆ. ಆದ್ದರಿಂದ ಸೂಚನಾ ಫಲಕದಲ್ಲಿ ಸವಲತ್ತುಗಳ ವಿತರಣೆ ಮತ್ತು ಫಲಾನುಭವಿಗಳ ಆಯ್ಕೆ ಪಟ್ಟಿ ಪ್ರಕಟಿಸಬೇಕು ಜೊತೆಗೆ ರೈತರಿಗೆ ಸವಲತ್ತು ವಿತರಿಸುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ರೈತರಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಈ ವೇಳೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಮಾಜಿ ಸದಸ್ಯರಾದ ಗಾಯತ್ರಿ ರವಿ, ಸೌಭಾಗ್ಯ, ಯೋಗೀಶ್, ಗೋವಿಂದರಾಜು, ಸ್ವಾಮಿ, ಶ್ರೀನಿವಾಸಮೂರ್ತಿ, ಮುಳ್ಳೂರು ಗ್ರಾಮದ ಮುಖಂಡರಾದ ಮಹೇಂದ್ರ, ಮಹದೇವಸ್ವಾಮಿ, ವೀರೇಂದ್ರ, ಅಭಿನಂದನ್ ಪಟೇಲ್, ಚಂದನ್ ಗೌಡ, ಅಶೋಕ್, ಯುವ ಕಾಂಗ್ರೆಸ್ ಅಧ್ಯಕ್ಷರಾದ ವಿಜಯಕುಮಾರ್, ಮಹೇಶ್, ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕ ಸುರೇಶ್ ಅಂಗಡಿ, ಸಹಾಯಕ ತೋಟಗಾರಿಕಾ ನಿರ್ದೇಶಕ ಚಂದ್ರು, ಕೆಆರ್‌ಐಡಿಎಲ್ ಸಂಸ್ಥೆ ಎಇಇ ಶೋಭಾ ಸೇರಿದಂತೆ ಹಲವರಿದ್ದರು.

ಮುಳ್ಳೂರು ಮುಖ್ಯರಸ್ತೆ ಕಾಮಗಾರಿಗೆ ಚಾಲನೆ

ನಂಜನಗೂಡು: ತಾಲೂಕಿನ ಮುಳ್ಳೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಕಳೆದ 20 ವರ್ಷಗಳಿಂದ ಅಭಿವೃದ್ಧಿ ಕಾಣದೆ ನೆನೆಗುದಿಗೆ ಬಿದ್ದಿತ್ತು. ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದ ಹಿನ್ನೆಲೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ 2.45 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ತಾಲೂಕಿನ ದೇವರಸನಹಳ್ಳಿ, ರಾಜೂರು, ನಲ್ಲಿತಾಳಪುರ, ನವಿಲೂರು ಮುಖ್ಯರಸ್ತೆಗಳು ಕಳೆದ 25 ವರ್ಷಗಳಿಂದ ಅಭಿವೃದ್ಧಿ ಕಂಡಿರಲಿಲ್ಲ. ನಾನು ಶಾಸಕನಾದ ನಂತರ ಜನರಿಗೆ ನೀಡಿದ್ದ ಭರವಸೆಯಂತೆ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ಅನುದಾನ ತಂದು ಕಾಮಗಾರಿಗೆ ಚಾಲನೆ ನೀಡಿದ್ದು, ಕೆಲವು ರಸ್ತೆಗಳು ಮುಕ್ತಾಯದ ಹಂತದಲ್ಲಿವೆ. ಮುಳ್ಳೂರು ಮುಖ್ಯ ರಸ್ತೆಯನ್ನು 2.45 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಶೀಘ್ರ ಕಾಮಗಾರಿ ಮುಕ್ತಾಯಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದ್ದು, ಕಳಪೆ ಕಾಮಗಾರಿ ನಡೆಸಿದಲ್ಲಿ ಗ್ರಾಮಸ್ಥರು ನನ್ನ ಗಮನಕ್ಕೆ ತರಬೇಕು ಎಂದರು.

ನಗರದ ನೀಲಕಂಠನಗರ ಹೊಸ ಬಡಾವಣೆಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ 75 ಲಕ್ಷ, ತಾಲೂಕಿನ ಹರತಲೆ ಗ್ರಾಮದಲ್ಲಿ 10 ಲಕ್ಷ ವೆಚ್ಚದಲ್ಲಿ ಕನಕ ಭವನ, ದೊಡ್ಡ ಕವಲಂದೆ ಗ್ರಾಮದಲ್ಲಿ 13 ಲಕ್ಷ ವೆಚ್ಚದಲ್ಲಿ ಬಸ್ ನಿಲ್ದಾಣ ಕಾಮಗಾರಿ, ಬದನವಾಳು ಗ್ರಾಮದಲ್ಲಿ 13 ಲಕ್ಷ ವೆಚ್ಚದಲ್ಲಿ ಬಸ್ ನಿಲ್ದಾಣ ಕಾಮಗಾರಿ ಸೇರಿದಂತೆ ಒಟ್ಟು 4.80 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಭಾರೀ ಮಳೆಗೆ ನೂರಾರು ಎಕರೆ ಬಾಳೆ ಬೆಳೆ ನಾಶ

ಎಕರೆಗೆ 30 ಸಾವಿರ ಪರಿಹಾರ ನೀಡಲು ಮನವಿ



ಮಳೆಯಿಂದಾಗಿ ಹಾನಿಗೊಳಗಾದ ಪ್ರದೇಶಕ್ಕೆ ಚಂದನ್ ಗೌಡ ಭೇಟಿ ನೀಡಿದರು.

ಸರಗೂರು, ಮೇ 17– ಶುಕ್ರವಾರ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಸರಗೂರು ಮತ್ತು ಹೆಚ್.ಡಿ.ಕೋಟೆ ತಾಲೂಕಿನ ನೂರಾರು ಎಕರೆ ಬಾಳೆ ಬೆಳೆ ನಾಶವಾಗಿದ್ದು, ಸರ್ಕಾರ ಪ್ರತಿ ಎಕರೆಗೆ 30 ಸಾವಿರ ಪರಿಹಾರ ನೀಡಬೇಕು ಎಂದು ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಒತ್ತಾಯಿಸಿದರು.

ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಮಳೆಯಿಂದಾಗಿ ಬೆಳೆ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ರೈತರಿಗೆ ಸಾಂತ್ವನ ಹೇಳಿ, ಪರಿಹಾರ ಕೊಡಿಸುವ ಭರವಸೆ ನೀಡಿದರು. ಈ ವೇಳೆ ಮಾತನಾಡಿದ ರೈತರು ಭಾರೀ ಮಳೆಯಿಂದಾಗಿ ಕಷ್ಟಪಟ್ಟು ಬೆಳೆದ ಬಾಳೆ ಬೆಳೆ ನಾಶವಾಗಿ ನಮಗೆ ದಿಕ್ಕೇ ತೋಚದಂತಾಗಿದೆ. ದಯಮಾಡಿ ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಮನವಿ ಮಾಡಿದರು.

ಬಳಿಕ ಮಾತನಾಡಿದ ಚಂದನ್‌ಗೌಡ ಅವರು, ರೈತರು ಬೆಳೆದಿದ್ದ ಬೆಳೆಗಳು ಸಂಪೂರ್ಣ ನಾಶಗೊಂಡಿವೆ. ಪರಿಸ್ಥಿತಿ ಅವಲೋಕಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ವಿವರಗಳನ್ನು ಒದಗಿಸಲಾಗಿದೆ. ನೂರಾರು ಎಕರೆಯಲ್ಲಿ ಬೆಳೆದಿದ್ದ ಬಾಳೆ ಫಸಲು ನೆಲಕ್ಕುರುಳಿರುವುದರಿಂದ ಸರ್ಕಾರ ಪ್ರತಿ ಎಕರೆಗೆ ಕನಿಷ್ಠ 30 ಸಾವಿರ ರೂ. ಪರಿಹಾರ ಘೋಷಿಸಿ ಅನ್ನದಾತರ ನೆರವಿಗೆ ಧಾವಿಸಬೇಕೆಂದು ಆಗ್ರಹಿಸಿದರು. ಫಸಲಿಗೆ ಬಂದಿದ್ದ ಬೆಳೆ ಕಳೆದುಕೊಂಡು ರೈತರು ಕಂಗಾಲಾಗಿದ್ದಾರೆ. ಇನ್ನೊಂದು ತಿಂಗಳಲ್ಲಿ ಬಾಳೆಗೊನೆ ಕಟಾವು ಮಾಡಿ ಮಾರಾಟ ಮಾಡಬೇಕಿತ್ತು. ಆದರೆ ಭಾರೀ ಮಳೆ, ಗಾಳಿಗೆ ಬಾಳೆಗೊನೆ ಸಹಿತ ಗಿಡ ಮುರಿದು ಬಿದ್ದಿವೆ. ಇದರಿಂದಾಗಿ ರೈತರು ಅಪಾರ ಪ್ರಮಾಣದ ನಷ್ಟ ಅನುಭವಿಸಿದ್ದಾರೆ ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು, ಅಗತ್ಯ ಪರಿಹಾರ ದೊರಕಿಸಿಕೊಡಬೇಕು ಎಂದರು. ಈ ವೇಳೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ರೈತರು, ಗ್ರಾಮಸ್ಥರಿದ್ದರು.

ಪದವಿ, ಸ್ನಾತಕೋತ್ತರ ಪದವಿಗೆ ಪ್ರವೇಶ ಆರಂಭ

ತಿ.ನರಸೀಪುರ, ಮೇ 17– ಪಟ್ಟಣದ ಹಳೇ ಸಂತೇಮಾಳದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಪದವಿ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಿಗೆ ಪ್ರವೇಶಾತಿ ಆರಂಭವಾಗಿದೆ.

ನ್ಯಾಕ್ ಮಾನ್ಯತೆಯ ಬಿ ಗ್ರೇಡ್, ಯುಜಿಸಿ ಮತ್ತು ಎಐಸಿಟಿಇ ನಿಂದ ಅನುಮೋದನೆ, ಆರ್‌ಯುಎಸ್‌ಎ ಸ್ಥಾಪಿತಗೊಂಡು, ಮೈಸೂರು ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿರುವ ಕಾಲೇಜಿನಲ್ಲಿ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದ್ದು, ದ್ವಿತೀಯ ಪಿಯುಸಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಆರಂಭಿಸಲಾಗಿದೆ.

'ಬಿಎ' ಕಲಾ ವಿಭಾಗದಲ್ಲಿ ಹೆಚ್‌ಇಪಿ, ಹೆಚ್‌ಇಎಸ್, ಹೆಚ್‌ಇಕೆ, ಹೆಚ್‌ಇಜಿ, ಪಿಪಿಎಸ್, ಪಿಎಲ್‌ಎಸ್, ಹೆಚ್‌ಪಿಕೆ, ಇಜಿಎಸ್ ಹಾಗೂ ಇಇಎಸ್ ಐಚ್ಛಿಕ ವಿಷಯಗಳಿವೆ. 'ಬಿಎಸ್ಸಿ' ವಿಜ್ಞಾನ ವಿಭಾಗದಲ್ಲಿ ಪಿಸಿಎಂ, ಪಿಎಂಸಿಎಸ್‌ಸಿ, 'ವಾಣಿಜ್ಯ' ವಿಭಾಗದಲ್ಲಿ ಬಿಸಿಎ ಕಂಪ್ಯೂಟರ್ ಅಪ್ಲಿಕೇಶನ್, ಬಿಬಿಎ ಮ್ಯಾನೇಜ್ಮೆಂಟ್ ಹಾಗೂ ಸ್ನಾತಕೋತ್ತರ ಪದವಿ ಎಂಕಾಂ ವಾಣಿಜ್ಯ ವಿಭಾಗಕ್ಕೆ ಆಸಕ್ತ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದು.



ತಿ.ನರಸೀಪುರ ಪಟ್ಟಣದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹೊರನೋಟ.

ಕಾಲೇಜಿನಲ್ಲಿ ನುರಿತ ಬೋಧಕರಿದ್ದು, ಇ–ಸಂಪನ್ಮೂಲ ಸಹಿತ ಸಂಪೂರ್ಣ ಗಣಕೀಕೃತ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವಿದೆ. ಸುಸಜ್ಜಿತ ಪ್ರಯೋಗಾಲಯ, ಡಿಜಿಟಲ್ ಗ್ರಂಥಾಲಯ, ಐಸಿಟಿ ತರಗತಿಗಳು, ಸ್ಮಾರ್ಟ್ ಕ್ಲಾಸ್ ರೂಂ ಸೌಲಭ್ಯ, ವೃತ್ತಿ ಮಾರ್ಗದರ್ಶನ ಉದ್ಯೋಗ ಮೇಳ, ಕ್ರೀಡಾ ಮತ್ತು ಯೋಗ ತರಬೇತಿ ಕೇಂದ್ರ, ರಾಷ್ಟ್ರೀಯ ಸೇವಾ ಯೋಜನೆ, ಭಾರತ್ ಸ್ಕೌಟ್ಸ್ & ಗೈಡ್ಸ್, ಎನ್‌ಸಿಸಿ– ನ್ಯಾಷನಲ್ ಕೆಡೆಟ್ ಕಾರ್ಪ್ಸ್, ಯೂತ್ ರೆಡ್ ಕ್ರಾಸ್ ಕ್ಯಾಂಟೀನ್ ಸೌಲಭ್ಯ, ಉತ್ತಮ ಮೂಲ ಸೌಕರ್ಯಗಳು, ವಿದ್ಯಾರ್ಥಿನಿಯರಿಗೆ ವಿಶೇಷ ಶುಲ್ಕ ವಿನಾಯಿತಿ ಮತ್ತು ಮರುಪಾವತಿ, ಮಹಿಳೆಯರ ವಿಶ್ರಾಂತಿ ಕೊಠಡಿ, ಉಚಿತ ವೈಫೈ ಸೇವೆ, ಮಹಿಳಾ ಸಬಲೀಕರಣ ಕಾರ್ಯಕ್ರಮ, ಸಾಹಸ ಚಟುವಟಿಕೆಗಳು ಹಾಗೂ ಎಲ್ಲಾ ರೀತಿಯ ಸರ್ಕಾರಿ ಮತ್ತು ಖಾಸಗಿ ವಿದ್ಯಾರ್ಥಿ ವೇತನ ಕಲ್ಪಿಸಲಾಗುವುದು.

ಹೆಚ್ಚಿನ ಮಾಹಿತಿಗೆ ದೂರವಾಣಿ ಮೊ: 08227260200, 9481815767, 9902633652, 9743584558 ಹಾಗೂ 9538237687 ಸಂಪರ್ಕಿಸುವಂತೆ ಪ್ರಾಂಶುಪಾಲ ಡಾ.ಹೆಚ್.ವಿ. ಉದಯ್ ಕುಮಾರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಹುಣಸೂರಲ್ಲಿ ಶ್ರೀರಾಮ ಮಂದಿರ ಟ್ರಸ್ಟ್ ಅಸ್ತಿತ್ವಕ್ಕೆ



ಚಿತ್ರದಲ್ಲಿ ನೂತನ ಟ್ರಸ್ಟ್ ಪದಾಧಿಕಾರಿಗಳನ್ನು ಕಾಣಬಹುದು.

ಹುಣಸೂರು, ಮೇ 17– ನಗರದ ಸ್ಟೋರ್ ಬೀದಿಯಲ್ಲಿರುವ ಶ್ರೀರಾಮ ಮಂದಿರದ ಅಭಿವೃದ್ಧಿ ಹಿನ್ನೆಲೆಯಲ್ಲಿ ನಗರದಲ್ಲಿ ಶ್ರೀರಾಮ ಮಂದಿರ ಟ್ರಸ್ಟ್ ಅನ್ನು ಅಸ್ತಿತ್ವಕ್ಕೆ ತರಲಾಗಿದೆ.

ನೂತನ ಟ್ರಸ್ಟ್ ಅಧ್ಯಕ್ಷರಾಗಿ ಹೆಚ್.ಜೆ. ಯೋಗಾನಂದ, ಧರ್ಮದರ್ಶಿಗಳಾಗಿ ಬಸವರಾಜ ನಾಯಕ, ಚಲುವರಾಜು, ಗೌರವ ಅಧ್ಯಕ್ಷರಾಗಿ ಗಣಪತಿರಾವ್, ಅಧ್ಯಕ್ಷರಾಗಿ ಹೆಚ್.ಜೆ.ಯೋಗಾನಂದ, ಉಪಾಧ್ಯಕ್ಷರಾಗಿ ಪರಮೇಶ್ವರ್, ಕಾರ್ಯದರ್ಶಿಯಾಗಿ ಚಂದ್ರು, ಸಹ ಕಾರ್ಯದರ್ಶಿಯಾಗಿ ಪ್ರಸನ್ನಕುಮಾರ್, ಖಜಾಂಚಿಯಾಗಿ ಪಿ.ಆರ್.ರಾಚಪ್ಪ, ಸಹ ಖಜಾಂಚಿಯಾಗಿ ಹೇಮಂತ್ ಕುಮಾರ್, ಸದಸ್ಯರಾಗಿ ಹೇಮಂತ, ಮುನಿರಾಜು, ವಿಶುಕುಮಾರ್, ದಾಸೇಗೌಡ, ಎನ್.ರವಿ, ರಾಘವೇಂದ್ರ, ಚಿದಾನಂದ, ರವಿಪ್ರಕಾಶ್ ಪಿಳ್ಳೆ ಹಾಗೂ ಚಂದ್ರಶೇಖರ್ ಅವರುಗಳನ್ನು ಆಯ್ಕೆ ಮಾಡಲಾಯಿತು.

ಮಕ್ಕಳು ಪ್ರತಿಭೆ ಪ್ರದರ್ಶಿಸಲು ಬೇಸಿಗೆ ಶಿಬಿರ ಸಹಕಾರಿ



ಕೆ.ಆರ್.ನಗರದಲ್ಲಿ ಬೇಸಿಗೆ ಶಿಬಿರ ನಡೆಯಿತು.

ಕೆ.ಆರ್.ನಗರ, ಮೇ 17– ಬೇಸಿಗೆ ಶಿಬಿರ ಮಕ್ಕಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ತಮ್ಮ ಪ್ರತಿಭೆ ಪ್ರದರ್ಶಿಸಲು ಒಂದು ಉತ್ತಮ ವೇದಿಕೆಯಾಗಿದೆ ಎಂದು ಲಯನ್ಸ್ ವಿದ್ಯಾ ಸಂಸ್ಥೆ ಅಧ್ಯಕ್ಷ ಕೀರ್ತಿ ಕುಮಾರ್ ತಿಳಿಸಿದರು.

ಪಟ್ಟಣದ ಲಯನ್ಸ್ ವಿದ್ಯಾ ಸಂಸ್ಥೆಯಲ್ಲಿ ಬೇಸಿಗೆ ಶಿಬಿರದ ಅಂತಿಮ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಡಿಮೆ ಅವಧಿಯಲ್ಲಿ ಚಿಕ್ಕವರಿಂದ ಹಿಡಿದು ದೊಡ್ಡ ಮಕ್ಕಳ ಪಾಲನೆ ಮತ್ತು ಪೋಷಣೆ ಮಾಡುವುದರ ಜೊತೆಗೆ ಅವರ ಪ್ರತಿಭೆ, ಸಾಮರ್ಥ್ಯ ಗುರುತಿಸಿ ಅದನ್ನು ಹೊರ ತರಲು ಹಾಗೂ ನಮ್ಮ ಶಾಲೆಯಲ್ಲಿ ಬೇಸಿಗೆ ಶಿಬಿರ ನಡೆಸಲು ನಮ್ಮ ಸಂಸ್ಥೆ ಶಿಕ್ಷಕರ ಪಾತ್ರ ಪ್ರಮುಖವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕರಾಟೆ ತರಬೇತಿ ಶಿಕ್ಷಕ ಶ್ರೇಯಸ್ ಮಾತನಾಡಿ, ಕರಾಟೆ ತರಬೇತಿ ಪಡೆಯುವುದರಿಂದ ಸ್ವಯಂ ರಕ್ಷಣೆ ಮಾಡಿಕೊಳ್ಳಲು ಹಾಗೂ ದೇಹವನ್ನು ಸದೃಢಗೊಳಿಸಬಹುದು. ಹೆಣ್ಣು ಮಕ್ಕಳು ಕರಾಟೆ ತರಬೇತಿ ಪಡೆಯುವುದರಿಂದ ಅವರ ಮೇಲೆ ನಡೆಯುವ ದೌರ್ಜನ್ಯ, ಶೋಷಣೆ ಇನ್ನಿತರ ಅಹಿತಕರ ಘಟನೆಗಳಿಂದ ತಪ್ಪಿಸಿಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ಶಾಲೆ ಮುಖ್ಯ ಶಿಕ್ಷಕಿ ಅರ್ಪಿತ ಕೀರ್ತಿ ಕುಮಾರ್, ಶಿಕ್ಷಕರಾದ ಯೋಗಾನಂದ ಎಸ್, ಜ್ಯೋತಿ, ಸತ್ಯವತಿ, ಮಾಣಿಕ್ಯ, ರಮ್ಯಾ, ಫರೀನ್ ತಾಜ್, ಜಾನು, ಅಕ್ಷತ, ಅಕುಲ್, ಅರುಣ್ ಕುಮಾರ್, ಜಯಶಂಕರ್, ಉದಯ್ ಹಾಗೂ ಪೋಷಕರಾದ ಸವಿತ, ವಿನೋದ, ರಾಜೇಶ್ವರಿ, ಶೃತಿ, ರಾಣಿ ಇನ್ನಿತರರಿದ್ದರು.

ಹೆಚ್‌ಪಿವಿ ಲಸಿಕಾ ಅಭಿಯಾನ



ಹೆಚ್.ಡಿ.ಕೋಟೆ ತಾಲೂಕಿನ ಡಿ.ಬಿ.ಕುಪ್ಪೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 14 ವರ್ಷದ ಹೆಣ್ಣು ಮಕ್ಕಳಿಗೆ ಗರ್ಭಕಂಠ ಕ್ಯಾನ್ಸರ್ ನಿರೋಧಕ ಹೆಚ್‌ಪಿವಿ ಲಸಿಕಾ ಅಭಿಯಾನ ನಡೆಯಿತು. ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ವರ್ಷ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶರಣಪ್ಪ ಲಮಾಣಿ, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ಅಶೀಮ ಸುಲ್ತಾನ್, ನಾಗಮ್ಮ, ಸಮುದಾಯದ ಆರೋಗ್ಯಾಧಿಕಾರಿ ಸುಷ್ಮಾ, ನಾಗಮ್ಮ ಹಾಜರಿದ್ದರು.

ಕಾಣೆಯಾದವರ ಪತ್ತೆಗೆ ಮನವಿ

ಮೈಸೂರು: ಲತಾ ಎಂಬ 52 ವರ್ಷ ಮಹಿಳೆ ಕಾಣೆಯಾಗಿರುವುದಾಗಿ ಅವರ ಪಿರ್ಯಾದಿ ಶ್ರೀಮತಿ ಸುಕುಮಾರಿ ಬಾಲರಾಜ್, ವಿ.ವಿ ಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ಪ್ರಕರಣ ತನಿಖೆಯಲ್ಲಿದೆ. ಸುಮಾರು 52 ವರ್ಷ, 4 ಅಡಿ ಎತ್ತರ, ಸಾಧಾರಣ ಮೈ ಕಟ್ಟು, ಕನ್ನಡ ಭಾಷೆ ಮಾತನಾಡುತ್ತಾರೆ. ಮಹಿಳೆಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ದೂ.ಸಂ: 0821–2418314, 9480802238ನ್ನು ಸಂಪರ್ಕಿಸಿ

ಯುವಕರಲ್ಲಿ ಶಿಸ್ತು, ಆತ್ಮವಿಶ್ವಾಸ ಬೆಳವಣಿಗೆಗೆ ಕ್ರೀಡೆ ಸಹಕಾರಿ : ಶಾಸಕ ದರ್ಶನ್

ನಂಜನಗೂಡು, ಮೇ 17– ಕ್ರೀಡೆಗಳು ಯುವಕರಲ್ಲಿ ಶಿಸ್ತು, ಆತ್ಮವಿಶ್ವಾಸ ಮತ್ತು ಕ್ರೀಡಾ ಸ್ಫೂರ್ತಿ ಬೆಳೆಸಲು ಸಹಕಾರಿಯಾಗಿವೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ನಂಜನಗೂಡು ಲಯನ್ಸ್ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಕ್ರಿಕೆಟ್ ಪಂದ್ಯಾವಳಿ ಕಾರ್ಯಕ್ರಮದಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ನಂಜನಗೂಡು ಕ್ರೀಡೆಗೆ ಹೆಸರುವಾಸಿಯಾಗಿದ್ದು, ನಂಜನಗೂಡಿನ ಕ್ರೀಡಾ ಇತಿಹಾಸವನ್ನು ಮರು ಸ್ಥಾಪಿಸುವ ಸಲುವಾಗಿ ಧ್ರುವನಾರಾಯಣ್ ಅವರ ಹೆಸರಿನಲ್ಲಿ ಪ್ರತಿ ವರ್ಷ ರಾಜ್ಯಮಟ್ಟದ ಫುಟ್ಬಾಲ್ ಪಂದ್ಯಾವಳಿ ಆಯೋಜಿಸುತ್ತಾ ಬಂದಿದ್ದೇವೆ. ಜೊತೆಗೆ ಯುವಕರನ್ನು ಪ್ರೋತ್ಸಾಹಿಸುವ ಸಲುವಾಗಿ ತಾಲೂಕಿನಾದ್ಯಂತ ಕ್ರಿಕೆಟ್, ವಾಲಿಬಾಲ್, ಹಲವಾರು ಕ್ರೀಡೆಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಲಯನ್ಸ್ ಸಂಸ್ಥೆ ಸೇವಾ ಚಟುವಟಿಕೆಗಳ ಜೊತೆಗೆ ಕ್ರೀಡೆಗಳಿಗೂ ಹೆಚ್ಚಿನ ಪ್ರೋತ್ಸಾಹ ನೀಡಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿರುವುದು ಶ್ಲಾಘನೀಯ ಎಂದರು.


ಪಂದ್ಯಾವಳಿಯಲ್ಲಿ ವಿಜೇತರಾದ ನಂಜನಗೂಡು ಕ್ರಿಕೆಟರ್ಸ್ ತಂಡಕ್ಕೆ ಪ್ರಥಮ 55,555 ರೂ., ಹೆಚ್.ಡಿ.ಕೋಟೆಯ ಕಬಿನಿ ಸ್ಟ್ರೈಕರ್ಸ್ ತಂಡ 33,333ರೂ., ನಂಜನಗೂಡು ತಾಲೂಕಿನ ಒಳಗೆರೆ ಗ್ರಾಮದ ಇಲೆವೆನ್ ಫೈಟರ್ಸ್ ತಂಡ 11,111 ನಗದು ಮತ್ತು ಟ್ರೋಫಿ ವಿತರಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಲಯನ್ಸ್ ಸಂಸ್ಥೆಯ ಅಧ್ಯಕ್ಷ ಕೆ.ಮಹೇಶ್, ಲಯನ್ಸ್ ಸಂಸ್ಥೆಯ ಪದಾಧಿಕಾರಿಗಳಾದ ಎನ್‌ಎಂ.ಮಂಜುನಾಥ್, ಎನ್.ಆರ್.ಕೃಷ್ಣಪ್ಪಗೌಡ, ನಾಗರಾಜು, ಉಮೇಶ್, ನಂಜುಂಡಸ್ವಾಮಿ, ಮಹದೇವು, ಎಸ್. ಬಸವರಾಜು, ಜಯರಾಮ್, ತಮ್ಮಣ್ಣೆಗೌಡ, ಶ್ರೀನಿವಾಸ್, ಮಧುಸೂದನ್, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.



ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಸ್ವಚ್ಛ ನಂಜನಗೂಡು ಪುರಸ್ಕಾರಕ್ಕೆ ಎಲ್ಲರೂ ಸಹಕರಿಸಿ



ಮ್ಯಾರಥಾನ್‌ಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಿದರು.

ನಂಜನಗೂಡು, ಮೇ 17– ಸ್ವಚ್ಛ ಪರಿಸರ ನಿರ್ಮಾಣದಲ್ಲಿ ಸಾರ್ವಜನಿಕರ ಜವಾಬ್ದಾರಿ ಹೆಚ್ಚಾಗಿದ್ದು, ಎಲ್ಲರೂ ನಮ್ಮ ಕಸ ನಮ್ಮ ಜವಾಬ್ದಾರಿ ಎಂಬುದನ್ನು ಅರಿತು ಸ್ವಚ್ಛತೆ ಕಾಪಾಡುವ ಮೂಲಕ ಸ್ವಚ್ಛ ನಂಜನಗೂಡು ಪುರಸ್ಕಾರಕ್ಕೆ ಸಹಕಾರ ನೀಡಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಮನವಿ ಮಾಡಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ 'ಓಡೋಣ ನಂಜನಗೂಡಿಗಾಗಿ ಒಂದಾಗೋಣ ಸ್ವಚ್ಛತೆಗಾಗಿ' ಎಂಬ ಘೋಷವಾಕ್ಯ ಅಡಿ ನಂಜನಗೂಡು ನಗರಸಭೆ ವತಿಯಿಂದ ಏರ್ಪಡಿಸಿದ್ದ ಮ್ಯಾರಥಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಂಜನಗೂಡು ನಾಗರಿಕರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಈ ಮ್ಯಾರಥಾನ್ ಓಟ ಹಮ್ಮಿಕೊಳ್ಳಲಾಗಿದ್ದು, ಸ್ವಚ್ಛ ಮತ್ತು ಆರೋಗ್ಯಕರ ಸಮಾಜ ನಿರ್ಮಾಣ ನಮ್ಮೆಲ್ಲರ ಹೊಣೆಯಾಗಿದೆ. ಆದ್ದರಿಂದ ನಮ್ಮ ಕಸ ನಮ್ಮೆಲ್ಲರ ಜವಾಬ್ದಾರಿ ಎಂಬುದನ್ನು ಅರಿತು ಸ್ವಚ್ಛ ಹಾಗೂ ಆರೋಗ್ಯಕರ ಪರಿಸರ ನಿರ್ಮಾಣಕ್ಕೆ ಎಲ್ಲರೂ ಸಹಕಾರ ನೀಡಬೇಕು. ನಿಮ್ಮ ಸುತ್ತಮುತ್ತಲ ಪರಿಸರದಲ್ಲಿ ಕಸವನ್ನು ಬಿಸಾಡದೆ, ಸ್ವಚ್ಛವಾಗಿಟ್ಟುಕೊಂಡು ನಂಜನಗೂಡು ನಗರಸಭೆಗೆ ಸ್ವಚ್ಛ ನಗರಿ ಎಂಬ ಪುರಸ್ಕಾರ ದೊರಕಲು ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ನಗರಸಭಾ ಆಯುಕ್ತ ಎಂ.ಬಸವರಾಜು ಮಾತನಾಡಿ, ನಂಜನಗೂಡಿನ ಸಾರ್ವಜನಿಕರು ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಿ ನಗರಸಭೆಯ ಕಸ ವಿಲೇವಾರಿ ವಾಹನಗಳಿಗೆ ನೀಡಬೇಕು. ಸ್ವಚ್ಛತೆಯ ಹಿತದೃಷ್ಟಿಯಿಂದ ನಗರದ ವಿವಿಧ ಬಡಾವಣೆಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಕಸ ನೀಡದೆ ಬಯಲಲ್ಲಿ ಕಸ ಎಸೆದಲ್ಲಿ ಪ್ರಕರಣ ದಾಖಲಿಸುವ ಜೊತೆಗೆ ಕಸ ನೀಡದ ಮನೆಗಳಿಗೆ ಮುಂದಿನ ದಿನಗಳಲ್ಲಿ ನೀರಿನ ಸಂಪರ್ಕ ಕಡಿತಗೊಳಿಸಲಾಗುವುದು. ಆದ್ದರಿಂದ ನಾಗರಿಕರು ಜವಾಬ್ದಾರಿ ಅರಿತು ಸ್ವಚ್ಛತೆ ಕಾಪಾಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ನಡೆದ ಮ್ಯಾರಥಾನ್ ಓಟದಲ್ಲಿ ಮೈಸೂರಿನ ಮಣಿಕಂಠ ಪ್ರಥಮ ಸ್ಥಾನ, ಸುಮಂತ್ ದ್ವಿತೀಯ ಸ್ಥಾನ, ಮಿಥುನ್ ತೃತೀಯ ಸ್ಥಾನವನ್ನು ಪಡೆದರು. ಮ್ಯಾರಥನ್‌ನಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 5 ಸಾವಿರ, ದ್ವಿತೀಯ ಬಹುಮಾನ 3 ಸಾವಿರ, ತೃತೀಯ ಬಹುಮಾನ 2 ಸಾವಿರ ನಗದು ಬಹುಮಾನ ವಿತರಿಸಿ ಗೌರವಿಸಲಾಯಿತು. ಈ ಸಂದರ್ಭ ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಸದಸ್ಯರಾದ ಗಾಯಿತ್ರಿ, ರವಿ, ಮುಖಂಡರಾದ ಎನ್.ಎಂ.ಮಂಜುನಾಥ್, ಕಮಲೇಶ್, ಸತೀಶ್ ಗೌಡ, ಡಿವೈಎಸ್ಪಿ ಧರ್ಮೇಂದ್ರ, ಪಟ್ಟಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವೀಂದ್ರ, ನಗರಸಭೆ ಪರಿಸರ ವಿಭಾಗದ ಕಾರ್ಯ ಪಾಲಕ ಇಂಜಿನಿಯರ್ ಮೈತ್ರಾವತಿ, ಆರೋಗ್ಯ ನಿರೀಕ್ಷಕರಾದ ಆದರ್ಶ, ವಸಂತ್, ಎಇ ಸುಮಂತ್ ಸೇರಿದಂತೆ ನಗರಸಭೆ ಸಿಬ್ಬಂದಿ ಮತ್ತು ಕ್ರೀಡಾಪಟುಗಳು ಉಪಸ್ಥಿತರಿದ್ದರು.

ಹುಲ್ಲಹಳ್ಳಿಯಲ್ಲಿ ಬಸವ ಜಯಂತಿ ಆಚರಣೆ



ಹುಲ್ಲಹಳ್ಳಿಯಲ್ಲಿ ಬಸವ ಜಯಂತಿ ನಡೆಯಿತು.

ನಂಜನಗೂಡು, ಮೇ 17– ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಹುಲ್ಲಹಳ್ಳಿಯ ವಿರಕ್ತ ಮಠದ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿ ಅವರು ಬಸವಣ್ಣನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಈ ವೇಳೆ ಬಸವಣ್ಣನವರ ಪ್ರತಿಮೆಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಕಂಸಾಳೆ, ಡೊಳ್ಳು ಕುಣಿತ, ಡೋಲು ಕುಣಿತ, ನಂದಿ ಕಂಬ ಸೇರಿದಂತೆ ಇನ್ನಿತರ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಸಾಥ್ ನೀಡಿದವು. ಇದೇ ವೇಳೆ ಗ್ರಾಮದ ಮಸೀದಿ ಎದುರು ಮುಸ್ಲಿಂ ಬಾಂಧವರು ಬಸವಣ್ಣನವರ ಪ್ರತಿಮೆಗೆ ಹಾರ ಹಾಕುವ ಮೂಲಕ ಭಾವೈಕ್ಯತೆ ಮೆರೆದರು.

ಈ ವೇಳೆ ಮುಖಂಡರಾದ ಎಸ್. ಮಹದೇವಯ್ಯ, ಮಾದಪ್ಪ, ಮಂಜುನಾಥ್, ಮಹೇಶ್, ಡೈರಿ ಕುಮಾರ್, ನಾಗೇಶ್, ಸಾಗರ್ ಸೇರಿದಂತೆ ಗ್ರಾಮಸ್ಥರಿದ್ದರು.

ಮೈಸೂರಿನ ಮತ್ತೊಂದು ಪಾರಂಪರಿಕ ಕಟ್ಟಡ ಶಿಥಿಲಾವಸ್ಥೆಗೆ

ಮಾಜಿ ರಾಷ್ಟ್ರಪತಿ ಡಾ.ರಾಧಾಕೃಷ್ಣನ್ ನೆಲೆಸಿದ್ದ ಬಂಗಲೆ ಭಾಗ ಕುಸಿತ

ಮೈಸೂರು ವಿಶ್ವವಿದ್ಯಾನಿಲಯದ ಕಳಪೆ ನಿರ್ವಹಣೆ, ನಿರ್ಲಕ್ಷ್ಯತೆಗೆ ಸ್ಪಷ್ಟ ನಿದರ್ಶನ

- ಈಗಾಗಲೇ ಪಾರಂಪರಿಕ ಕಟ್ಟಡದ ಎಡ ಭಾಗಕ್ಕೆ ಭಾರೀ ಹಾನಿ
- ಪ್ರೊ.ದೊರೆಸ್ವಾಮಿ 72 ಲಕ್ಷ ವೆಚ್ಚದಲ್ಲಿ ನವೀಕರಿಸಿದ್ದರು
- ಮೈಸೂರು ವಿವಿಯ 22 ಪಾರಂಪರಿಕ ಕಟ್ಟಡಗಳೂ ದುಸ್ಥಿತಿ





ಮೈಸೂರಿನ ಸರಸ್ವತಿಪುರಂನಲ್ಲಿರುವ ಪಾರಂಪರಿಕ ಶೈಲಿಯ ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ ಕಟ್ಟಡದ ಎಡ ಭಾಗ ಕುಸಿದು ಬಿದ್ದಿರುವುದು. ಕಟ್ಟಡ ಕುಸಿಯುವ ಆತಂಕದಿಂದ ಗೇಟ್‌ಗೆ ಬೀಗ ಹಾಕಿರುವುದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ 17(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ 'ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ'ವಿರುವ ಶತಮಾನದಷ್ಟು ಹಳೆಯದಾದ ಪಾರಂಪರಿಕ ಕಟ್ಟಡ ಶಿಥಿಲಾವಸ್ಥೆ ತಲುಪಿದೆ.

ದಿವಂಗತ ಮಾಜಿ ರಾಷ್ಟ್ರಪತಿಗಳೂ ಆದ ಖ್ಯಾತ ತತ್ವಜ್ಞಾನಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ವಾಸವಿದ್ದ ಈ ಕಟ್ಟಡಕ್ಕೆ ದಶಕದ ಹಿಂದೆ 'ಡಾ.ಸರ್ವಪಲ್ಲಿ ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ'ವೆಂದು ನಾಮಕರಣ ಮಾಡಲಾಗಿದೆ. ಆದರೆ ಈಗ ಕಳಪೆ ನಿರ್ವಹಣೆ ಹಾಗೂ ಇಚ್ಛಾಶಕ್ತಿ ಕೊರತೆಯಿಂದಾಗಿ ಈ ಕಟ್ಟಡ ಶಿಥಿಲಾವಸ್ಥೆ ತಲುಪಿದೆ. ಯಾವಾಗ ಕುಸಿದು ಬೀಳುವುದೋ ಎಂಬ ಆತಂಕದಿಂದ ಕೇಂದ್ರಕ್ಕೇ ಬೀಗ ಹಾಕಿ, ಮೈಸೂರು ವಿವಿ ಕೈತೊಳೆದುಕೊಂಡಿದೆ.

ಡಾ.ರಾಧಾಕೃಷ್ಣನ್ ಅವರು 1918 ರಿಂದ 1921 ರವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ವೇಳೆ ಈ ಕಟ್ಟಡದಲ್ಲಿ ವಾಸ ಮಾಡುತ್ತಿದ್ದರು. ಹಾಗಾಗಿ ಪಾರಂಪರಿಕ ಶೈಲಿಯ ಈ ಕಟ್ಟಡವನ್ನು ಡಾ. ರಾಧಾಕೃಷ್ಣನ್ ಬಂಗಲೆ ಎಂಬ ಹೆಸರಿನಿಂದಲೇ ಗುರುತಿಸಲಾಗುತ್ತದೆ.

ಸರಸ್ವತಿಪುರಂನ ಸರ್ಕಾರಿ ಮುದ್ರಣಾಲಯದ ಎದುರಿಗಿರುವ ಈ ಕಟ್ಟಡ ಕುಸಿದು ಬೀಳುವ ಹಂತದಲ್ಲಿತ್ತು. ಆ ವೇಳೆ ಡಾ.ರಾಧಾಕೃಷ್ಣನ್ ಅವರ ಅನುಯಾಯಿಗಳು, ವಿಧಾನ ಪರಿಷತ್ ಸದಸ್ಯರು, ಬೆಂಗಳೂರಿನ ಪಿಇಎಸ್ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರೂ ಆದ ಪ್ರೊ.ಎಂ.ಆರ್.ದೊರೆಸ್ವಾಮಿ ಅವರು 10 ವರ್ಷದ ಹಿಂದೆ ಈ ಕಟ್ಟಡದ ಸಂರಕ್ಷಣೆಗೆ ಮುಂದಾಗಿದ್ದರು. ಕಟ್ಟಡವನ್ನು ನವೀಕರಿಸಿ, ಸಂರಕ್ಷಣೆ ಮಾಡಲು ಅಗತ್ಯ ಹಣಕಾಸು ನೆರವು ನೀಡುವುದಾಗಿ ಭರವಸೆ ನೀಡಿದ್ದರು. ತರುವಾಯ ಹಣವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡದೆ ತಾವೇ ನವೀಕರಿಸುವುದಾಗಿ ತಿಳಿಸಿದರು.

ಶತಮಾನ ಪೂರೈಸಿರುವ ಈ ಕಟ್ಟಡದ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆಯಾಗದಂತೆ ನವೀಕರಿಸಲು ಮೈಸೂರಿನ ಪಾರಂಪರಿಕ ತಜ್ಞ ಪ್ರೊ.ಎನ್.ರಂಗರಾಜು ಅವರಿಗೆ ಮೇಲ್ವಿಚಾರಣೆಗೆ ವಹಿಸಿದರು. ತರುವಾಯ ಬೆಂಗಳೂರಿನಿಂದ ಬಂದ ಇಂಜಿನಿಯರ್‌ಗಳ ತಂಡ ಸುಮಾರು ಒಂದು ವರ್ಷದ ಅವಧಿಯಲ್ಲಿ ಈ ಕಟ್ಟಡವನ್ನು ಅದ್ಭುತವಾಗಿ ನವೀಕರಿಸಿತು.

ಪ್ರೊ.ದೊರೆಸ್ವಾಮಿ ಅವರ ಉದಾರತೆಯಿಂದ ಶಿಥಿಲಾವಸ್ಥೆಯಲ್ಲಿದ್ದ ಈ ಕಟ್ಟವವನ್ನು ನವೀಕರಿಸಲಾಯಿತು. ಈ ನವೀಕರಣಕ್ಕಾಗಿ ಪ್ರೊ.ದೊರೆಸ್ವಾಮಿ ಅವರು 78 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿದರು. ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆಯಾಗದಂತೆ ಹೊಸ ಮೆರಗು ನೀಡಲಾಯಿತು. ಈ ನವೀಕೃತ ಕಟ್ಟಡಕ್ಕೆ ಮೈಸೂರು ವಿವಿ 2016ರಲ್ಲಿ 'ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ' ಎಂದು ನಾಮಕರಣ ಮಾಡಿತು.

ಈ ಕೇಂದ್ರದಲ್ಲಿ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿ, ಅದರಲ್ಲಿ ಡಾ.ರಾಧಾಕೃಷ್ಣನ್ ಅವರಿಗೆ ಸಂಬಂಧಿಸಿದ ಪುಸ್ತಕಗಳು, ಕಲಾಕೃತಿಗಳು, ಅವರು ಬಳಸುತ್ತಿದ್ದ ವಸ್ತುಗಳು, ಬರಹಗಳನ್ನು ಪ್ರದರ್ಶಿಸಲಾಯಿತು. ಕರ್ನಾಟಕ ಮಾತ್ರವಲ್ಲದೆ ದೇಶದ ವಿವಿಧ ರಾಜ್ಯಗಳ ಬಹಳಷ್ಟು ಮಂದಿ ಈ ಕೇಂದ್ರಕ್ಕೆ ಭೇಟಿ ನೀಡಿ ಡಾ.ರಾಧಾಕೃಷ್ಣನ್ ನಿವಾಸವನ್ನು ವೀಕ್ಷಿಸುತ್ತಿದ್ದರು.

ಇಲ್ಲಿ ಸುಮಾರು 2 ಸಾವಿರ ಪುಸ್ತಕಗಳು, ನಿಯತಕಾಲಿಕೆಗಳನ್ನು ಪ್ರದರ್ಶನದಲ್ಲಿಡಲಾಗಿದ್ದು, ತತ್ವಜ್ಞಾನಿ ಸ್ಟೇಟ್ಸ್‌ಮನ್ ಅವರ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ತತ್ವಶಾಸ್ತ್ರದ ವಿದ್ಯಾರ್ಥಿಗಳು, ಸಂಶೋಧನಾ ವಿದ್ವಾಂಸರು, ಸಂದರ್ಶಕರು ಇಲ್ಲಿ ಅಧ್ಯಯನ ಮಾಡುತ್ತಿದ್ದರು.

ನಿರ್ವಹಣೆ ನಿರ್ಲಕ್ಷ್ಯ: ನವೀಕರಣಗೊಂಡ ನಂತರವೂ ಈ ಕಟ್ಟಡವನ್ನು ಮೈಸೂರು ವಿಶ್ವವಿದ್ಯಾನಿಲಯವು ಸೂಕ್ತ ನಿರ್ವಹಣೆ ಮಾಡಲಿಲ್ಲ. ಕಟ್ಟಡದ ತಾರಸಿಯಲ್ಲಿ ಗಿಡಗಂಟೆಗಳು ಬೆಳೆದು ಮಳೆ ನೀರು ನಿಲ್ಲಲು ಪ್ರಾರಂಭವಾಗಿ ವಸ್ತಿ ಹಿಡಿದಿರುವ ಪರಿಣಾಮ ಪಾರಂಪರಿಕ ಕಟ್ಟಡದ ಎಡ ಭಾಗ ಕುಸಿದು ಬಿದ್ದಿದೆ. ಇನ್ನು ಇಡೀ ಕಟ್ಟಡ ಯಾವಾಗ ಧರಾಶಾಯಿ ಯಾಗುವುದೋ ಎಂಬ ಆತಂಕದಿಂದ ಮೈಸೂರು ವಿಶ್ವವಿದ್ಯಾನಿಲಯ ಕಟ್ಟಡ ಖಾಲಿ ಮಾಡಿ, ದ್ವಾರಗಳಿಗೆ ಬೀಗ ಜಡಿದಿದೆ. ಅಲ್ಲದೆ ಗೇಟ್‌ಗೆ ಕೂಡ ಬೀಗ ಹಾಕಿ ನಿದ್ರೆಗೆ ಜಾರಿದೆ.

ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಒಟ್ಟು 24 ಪಾರಂಪರಿಕ ಕಟ್ಟಡಗಳಿದ್ದು, ಇದರಲ್ಲಿ ಮಹಾರಾಜ ಕಾಲೇಜು ಆವರಣದಲ್ಲಿರುವ ಕುಲಪತಿಗಳ ನಿವಾಸ ಹಾಗೂ ಎನ್‌ಸಿಸಿ ಕಚೇರಿಯ ಕಟ್ಟಡ ಮಾತ್ರ ಸುಸ್ಥಿತಿಯಲ್ಲಿದೆ. ಉಳಿದ 22 ಕಟ್ಟಡ ಸ್ಥಿತಿ ಭಿನ್ನವಾಗಿದೆ.

ಈ ಸಂಬಂಧ ಪ್ರತಿಕ್ರಿಯೆಗಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲೋಕನಾಥ್ ಹಾಗೂ ಕುಲಸಚಿವೆ ಎಂ.ಕೆ.ಸವಿತಾ ಅವರನ್ನು ಹಲವು ಬಾರಿ ದೂರವಾಣಿ ಕರೆ ಮಾಡಿದರೂ ಸಂಪರ್ಕ ಸಾಧ್ಯವಾಗಲಿಲ್ಲ. ಮಳೆ–ಗಾಳಿಯಿಂದ ಶತಮಾನದಷ್ಟು ಹಳೆಯದಾದ, ಅಷ್ಟೇ ಅಲ್ಲದೆ ಡಾ.ರಾಧಾ ಕೃಷ್ಣನ್ ಅವರ ನೆನಪಿಗಾಗಿ ಇರುವ ಈ ಕಟ್ಟಡವನ್ನು ಸಂರಕ್ಷಣೆ ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯ ಶೀಘ್ರ ಪ್ರಾರಂಭಿಸಬೇಕಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಗವತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕೆಡಿ (ಕ)	4 ಪ್ರದರ್ಶನಗಳು
ಲಿಡೋ	
ಶಿಖಂಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಶೇರ್ (ಕ)	4 ಪ್ರದರ್ಶನಗಳು

ಎಐ ಟೆಕ್ನಾಲಜಿ ಭಾರತದ ಯುವಶಕ್ತಿ ಹಿಡಿತದಲ್ಲಿದೆ

ಮುಂದಿನ ದಿನಗಳಲ್ಲಿ ಭಾರತ ಮಾರ್ಗದರ್ಶಕ ಸ್ಥಾನದಲ್ಲಿರುತ್ತದೆ



ವರ್ಲ್ಡ್ ಟೆಲಿಕಮ್ಯೂನಿಕೇಷನ್ ಅಂಡ್ ಇನ್‌ಫರ್ಮೇಷನ್ ಸೊಸೈಟಿ ದಿನಾಚರಣೆ ಅಂಗವಾಗಿ 'ದಿ ರೂಲ್ ಆಫ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್' ವಿಷಯ ಕುರಿತು ಇಂಜಿನಿಯರ್ ಗ್ಲೋಬಲ್ ಲಾಬ್ ಸಲ್ಯೂಷನ್ಸ್(ಎಪಿಎಸಿ) ನಿರ್ದೇಶಕ ಡಾ.ರಾಮಚಂದ್ರ ಗಂಭೀರ್ ಮಾತನಾಡಿದರು.

ಮೈಸೂರು, ಮೇ 17(ಎಸ್‌ಪಿಎನ್)– 'ಎಐ' ಟೆಕ್ನಾಲಜಿ ಭಾರತದ ಯುವಶಕ್ತಿ ಹಿಡಿತದಲ್ಲಿದೆ. ಹಾಗಾಗಿ ಎಐ ಟೆಕ್ನಾಲಜಿಯಲ್ಲಿ ಭಾರತ ಮುಂದಿನ ದಿನಗಳಲ್ಲಿ ಜಗತ್ತಿನಲ್ಲೇ ಮಾರ್ಗದರ್ಶಕ ಸ್ಥಾನದಲ್ಲಿರುತ್ತದೆ ಎಂದು ಇಂಜಿನಿಯರ್ ಗ್ಲೋಬಲ್ ಲಾಬ್ ಸಲ್ಯೂಷನ್ಸ್(ಎಪಿಎಸಿ) ನಿರ್ದೇಶಕ ಡಾ.ರಾಮಚಂದ್ರ ಗಂಭೀರ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎಸ್.ಪಿ.ಭಟ್ ಹಾಲ್) ಸಭಾಂಗಣದಲ್ಲಿ ದಿ ಇನ್ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್(ಇಂಡಿಯಾ) ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ವರ್ಲ್ಡ್ ಟೆಲಿಕಮ್ಯೂನಿಕೇಷನ್ ಅಂಡ್ ಇನ್‌ಫರ್ಮೇಷನ್ ಸೊಸೈಟಿ ದಿನಾಚರಣೆ ಅಂಗವಾಗಿ 'ದಿ ರೂಲ್ ಆಫ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್' ವಿಷಯ ಕುರಿತು ಮಾತನಾಡಿದರು.

ಜಗತ್ತಿನ ಟೆಲಿಕಮ್ಯೂನಿಕೇಷನ್‌ನಲ್ಲಿ ಸಾಕಷ್ಟು ಸುಧಾರಣೆಯಾಗಿದೆ. 1ಜಿ, 2ಜಿ, 3ಜಿ, 4ಜಿ ಹಾಗೂ 5ಜಿ ನೆಟ್ ವರ್ಕಿಂಗ್ ಸಂಶೋಧನೆಯಾಗಿದೆ. ಇದೀಗ 5ಜಿ ಜೊತೆಗೆ ಎಐ ಟೆಕ್ನಾಲಜಿ ಸೇರಿಕೊಂಡಿದೆ. ಇದರಿಂದ ಡಿಜಿಟಲ್ ವ್ಯವಹಾರಕ್ಕೆ ಎಐ ತಂತ್ರಜ್ಞಾನ ಸಾಕಷ್ಟು ಭದ್ರತೆಯನ್ನು ಒದಗಿಸುತ್ತದೆ. ಉದಾಹರಣೆಗೆ ಬ್ಯಾಂಕಿಗ್ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಪ್ರತಿದಿನ ಕೋಟಿಗಟ್ಟಲೇ ವ್ಯವಹಾರ ಯುಪಿಐ ಸಾಫ್ಟ್‌ವೇರ್ ಮೂಲಕ ನಡೆಯುತ್ತಿದೆ. ಇದಕ್ಕೆ ನಿಮ್ಮ ಖಾತೆಯ ಈ ವ್ಯವಹಾರಕ್ಕೆ ಎಐ ಭದ್ರತೆ ನೀಡುತ್ತಿರುವುದು ವಿಶೇಷ ಎಂದರು.

ನಿಮ್ಮ ಮೊಬೈಲ್‌ಗೆ ಬೇರೆ ಬೇರೆ ಕಂಪನಿಯ ಪ್ರತಿನಿಧಿಗಳು ಕರೆ ಮಾಡುತ್ತಾರೆ. ಇದು ಗ್ರಾಹಕರಿಗೆ ಅವಶ್ಯವಿರುವುದಿಲ್ಲ ಎಂಬುದನ್ನು ಅರಿಯುವ ಎಐ ಟೆಕ್ನಾಲಜಿ ಗ್ರಾಹಕರನ್ನು ಈ ಕರೆಯನ್ನು ಸ್ವೀಕರಿಸದಂತೆ ಎಚ್ಚರಿಸುತ್ತಿದೆ. ಅಂತೆಯೇ ಎಐ ಟೆಕ್ನಾಲಜಿಯಲ್ಲಿ ಭಾರತ ಯುವಶಕ್ತಿ ಅದ್ಭುತ ಸಾಧನೆ ಮಾಡಿದ್ದು, ಇಡೀ ಜಗತ್ತಿಗೆ ಎಐ ಟೆಕ್ನಾಲಜಿ ವಿಷಯದಲ್ಲಿ ಪರಿಣಿತಿ ಪಡೆದವರಲ್ಲಿ ಭಾರತೀಯ ಯುವಕರೇ ಹೆಚ್ಚು. ಮುಂದಿನ ದಿನಗಳಲ್ಲಿ ಎಐ ಟೆಕ್ನಾಲಜಿ ಬಳಸಿ, ಭಾರತ ವಿಶ್ವಗುರು ಸ್ಥಾನದಲ್ಲಿ ನಿಲ್ಲಬಹುದಾಗಿದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಐಇಐ ಮೈಸೂರು ಘಟಕದ ಛೇರ್ಮನ್ ಎಚ್.ಎನ್. ಸುರೇಶ್‌ಬಾಬು, ಕಾರ್ಯದರ್ಶಿ ಎಂ.ಕೆ. ನಂಜಯ್ಯ, ಸಮಿತಿ ಸದಸ್ಯ ಡಾ.ಬಿಂದು ಎ ಥಾಮಸ್ ಸೇರಿದಂತೆ ಇತರರಿದ್ದರು.

ಸಾಧಕರಿಗೆ ಶ್ರೀ ಬಸವ ಭೂಷಣ ಪ್ರಶಸ್ತಿ ಪ್ರಧಾನ



ಬಸವ ಜಯಂತಿ ಹಾಗೂ ಗುರು ವಂದನಾ ಕಾರ್ಯಕ್ರಮದಲ್ಲಿ ಕುದೇರು ಮಠದ ಕಿರಿಯ ಶ್ರೀ ಗುರುಲಿಂಗಸ್ವಾಮೀಜಿ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಮೇ 17(ಬಿಎಲ್‌ಯು)– ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ಇಂದು ಶ್ರೀ ಬಸವ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಗರದ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ನಡೆದ ಬಸವ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಕಲಾ ಕ್ಷೇತ್ರದಿಂದ ಎಲ್.ಶಿವಲಿಂಗಪ್ಪ, ಸಾಹಿತ್ಯ ಕ್ಷೇತ್ರದಿಂದ ಮಲ್ಲರಾಜೇ ಅರಸ್, ವೈದ್ಯಕೀಯ ಕ್ಷೇತ್ರದಿಂದ ಡಾ.ಎಸ್.ಪಿ. ಯೋಗಣ್ಣ, ಶಿಕ್ಷಣ ಕ್ಷೇತ್ರದಿಂದ ಹೆಚ್.ವಿ. ಮುರುಳೀಧರ, ಸಮಾಜ ಸೇವಾ ಕ್ಷೇತ್ರದಿಂದ ಡಾ.ಆರ್.ಶ್ರೀಷಾ ಭಟ್, ಮಾಧ್ಯಮ ಕ್ಷೇತ್ರದಿಂದ ರಾಜು ಕಾರ್ಯ, ಉದ್ಯಮ ಕ್ಷೇತ್ರದಿಂದ ಕೆ.ಬಿ.ಶಂಕರೇಗೌಡ ಹಾಗೂ ಬಿ.ಓಂಕಾರ್ ಪ್ರಸಾದ್ ಅವರಿಗೆ ಶ್ರೀ ಬಸವ ಭೂಷಣ ಪ್ರಶಸ್ತಿ ನೀಡಲಾಯಿತು.

ಸಂಧ್ಯಾ ಸುರಕ್ಷ ಟ್ರಸ್ಟ್ ಅಧ್ಯಕ್ಷ ಡಾ.ಬಿ.ಆರ್.ನಟರಾಜ್ ಜೋಯ್ಸ್ ಕಾರ್ಯಕ್ರಮ ಉದ್ಘಾಟಿಸಿದರು.

ಕುದೇರು ಮಠದ ಕಿರಿಯ ಶ್ರೀ ಇಮ್ಮಡಿ ಗುರುಲಿಂಗಸ್ವಾಮೀಜಿ ಸಾನಿಧ್ಯ ವಹಿಸಿದ್ದ ಕಾರ್ಯಕ್ರಮದ ವೇದಿಕೆಯಲ್ಲಿ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಕರ್ನಾಟಕ ರಾಜ್ಯ ಶಿವಾಚಾರ್ಯ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಅರಸು ಜಾಗೃತಿ ಅಕಾಡೆಮಿ ಟ್ರಸ್ಟ್ ಗೌರವ ಕಾರ್ಯದರ್ಶಿ ಡಾ.ಎಂ.ಜಿ.ಆರ್ ಅರಸ್, ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಟಗರು ಮರಿ ನೀಡಿ ಹೆಚ್‌ಡಿಕೆಗೆ ವಿಶೇಷ ಗೌರವ



ಮೈಸೂರಿನಲ್ಲಿ ನಡೆದ ಚಾಮುಂಡೇಶ್ವರಿ ಕ್ಷೇತ್ರದ 'ಜನರೊಂದಿಗೆ ಜನತಾದಳ' ಸಮಾವೇಶದ ವೇದಿಕೆಯಲ್ಲಿ ಕ್ಷೇತ್ರದ ಕುರುಬ ಸಮಾಜದ ಮುಖಂಡರು ಕೋಟೆಹುಂಡಿ ಮಹದೇವು ನೇತೃತ್ವದಲ್ಲಿ ಕೇಂದ್ರ ಸಚಿವ ಕುಮಾರ ಸ್ವಾಮಿ ಅವರಿಗೆ ಹಾಲುಮತ ಸಂಸ್ಕೃತಿಯ ಪ್ರತೀಕವಾದ ಕರಿ ಕಂಬಳಿ ಹೊದಿಸಿ, ಟಗರು ಮರಿಯನ್ನು ನೀಡಿ, ವಿಶೇಷವಾಗಿ ಗೌರವಿಸಿದರು.

ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 17 – ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ಪೂರ್ವ (5ನೇ ತರಗತಿಯಿಂದ 10ನೇ ತರಗತಿಯವರೆಗೆ) ಮತ್ತು ಮೆಟ್ರಿಕ್ ನಂತರದ (10ನೇ ತರಗತಿ ನಂತರ) ವಿದ್ಯಾರ್ಥಿನಿಲಯಗಳ 2026–27ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಆರಂಭವಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಜೂನ್ 30 ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಜುಲೈ 31ರೊಳಗೆ wdhmis.karnataka.gov.in ವೆಬ್‌ಸೈಟ್‌ನ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ ಸಂ: 0821–2520910 ನ್ನು ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಸ್ತಚಾಲಿತ ಅಪಘಾತ ಪ್ರಕರಣಗಳ ವರದಿ ತಯಾರಿಕೆಗೆ ತಿಲಾಂಜಲಿ

ಅಪಘಾತ ಪ್ರಕರಣಗಳ ವರದಿ ಸಂಪೂರ್ಣ ಡಿಜಿಟಲೀಕರಣ

ಮೈಸೂರಿನ ಸಂಚಾರಿ ಪೊಲೀಸ್ ಠಾಣೆಯ ಸಿಬ್ಬಂದಿಗೆ ಅರ್ಥಪೂರ್ಣ ತರಬೇತಿ



ಮೈಸೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಶನಿವಾರ ಅಪಘಾತ ಪ್ರಕರಣಗಳ ವರದಿಯನ್ನು ಡಿಜಿಟಲೀಕರಣಗೊಳಿಸುವ ಸಂಬಂಧ ಸಂಚಾರ ಠಾಣೆಯ ಸಿಬ್ಬಂದಿಗಳಿಗೆ ತರಬೇತಿ ನೀಡಲಾಯಿತು.

ಮೈಸೂರು, ಮೇ17(ಬಿಎಲ್‌ಯು, ಬಿಸಿಟಿ)– ಅಪಘಾತ ಪ್ರಕರಣಗಳ ದಾಖಲಾತಿಗಳನ್ನು ಸುವ್ಯವಸ್ಥಿತಗೊಳಿಸುವ ನಿಟ್ಟಿನಲ್ಲಿ ಹಸ್ತಚಾಲಿತ ದಾಖಲೆಯನ್ನು ಹಂತ ಹಂತವಾಗಿ ಮುಕ್ತಗೊಳಿಸಿ ಸಂಪೂರ್ಣ ಡಿಜಿಟಲೀಕರಣಗೊಳಿಸಲು ಮೈಸೂರು ನಗರ ಸಂಚಾರ ಪೊಲೀಸರು ದಿಟ್ಟ ನಿರ್ಧಾರ ಕೈಗೊಂಡಿದ್ದಾರೆ. ಈ ಸಂಬಂಧ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಶನಿವಾರ ಅಪಘಾತ ಪ್ರಕರಣಗಳ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಸಂಚಾರ ಠಾಣೆಯ ಸಿಬ್ಬಂದಿಗಳಿಗೆ ಅರ್ಥಪೂರ್ಣ ತರಬೇತಿ ನೀಡಲಾಯಿತು.

ಪ್ರಸ್ತುತ ಸಂಚಾರಿ ಪೊಲೀಸರು ಅಪಘಾತ ಪ್ರಕರಣಗಳ ಬಗ್ಗೆ ಕೈಬರಹದಲ್ಲಿ ವರದಿ ತಯಾರಿಸುತ್ತಿದ್ದರು. ಆಧುನಿಕತೆಯಲ್ಲಿ ಡಿಜಿಟಲ್ ಕ್ರಾಂತಿ ಆಗುತ್ತಿರುವ ಈ ಸಂದರ್ಭದಲ್ಲಿ ಇನ್ನು ಕೈಬರಹದಲ್ಲಿ ವರದಿ ತಯಾರಿಸುತ್ತಿರುವುದು ಎಷ್ಟು ಸರಿ ಎಂಬ ಪ್ರಶ್ನೆ ಹಿರಿಯ ಅಧಿಕಾರಿಗಳಿಗೆ ಎದುರಾಗಿದೆ.

ಈ ಹಿನ್ನೆಲೆಯಲ್ಲಿ ಅಪಘಾತ ಪ್ರಕರಣಗಳ ವರದಿಯನ್ನು ಡಿಜಿಟಲೀಕರಣಗೊಳಿಸಲು ನಿರ್ಧರಿಸಿದ್ದಾರೆ. ಸಾರ್ವಜನಿಕ ಸೇವಾ ದಕ್ಷತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಇಂಟಿಗ್ರೇಟೆಡ್ ಡಿಜಿಟಲ್ ಆಕ್ಸಿಡೆಂಟ್ ರಿಪೋರ್ಟ್ (ಐಡಿಎಆರ್) ಮತ್ತು ಎಲೆಕ್ಟ್ರಾನಿಕ್ ಡಿಟೈಲ್ಡ್ ಆಕ್ಸಿಡೆಂಟ್ ರಿಪೋರ್ಟ್ (ಇಡಿಎಆರ್) ವ್ಯವಸ್ಥೆ ಬಗ್ಗೆ ತರಬೇತಿ ನೀಡಲಾಯಿತು.

ಮೈಸೂರು ನಗರದ ವಿವಿಧ ಸಂಚಾರ ಠಾಣೆಗಳ 30 ಕ್ಕೂ ಹೆಚ್ಚು ಸಂಚಾರಿ ಪೊಲೀಸರು ತರಬೇತಿಯಲ್ಲಿ ಪಾಲ್ಗೊಂಡಿದ್ದರು. ಈ ಮೂಲಕ ಏಕರೂಪ ಅಪಘಾತ ಪ್ರಕರಣಗಳ ವರದಿ ಹಾಗೂ ದತ್ತಾಂಶ ಸಂಗ್ರಹದ ವಿಧಾನಗಳ ಬಗ್ಗೆ ಸಿಬ್ಬಂದಿಗಳಿಗೆ ಮಾಹಿತಿ ನೀಡಲಾಯಿತು.

ಈ ಕುರಿತು "ಮೈಸೂರು ಮಿತ್ರ" ಗೆ ಮಾಹಿತಿ ನೀಡಿದ ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್, ಐಡಿಎಆರ್ ಹಾಗೂ ಇಡಿಎಆರ್ ವ್ಯವಸ್ಥೆಯನ್ನು 2022 ರಲ್ಲಿ ಪರಿಚಯಿಸಲಾಯಿತು. ಆದರೂ ಸಾಂಪ್ರದಾಯಿಕ ದಂಡ ಪಾವತಿ ಆಧಾರಿತ ಕಾರ್ಯ ವಿಧಾನದ ಮೇಲೆ ಅವಲಂಬಿತವಾಗಿದ್ದೇವು. ಆದರೆ ಈಗ ಸಾಂಪ್ರದಾಯಿಕ ವಿಧಾನಕ್ಕೆ ತಿಲಾಂಜಲಿ ಇಟ್ಟು ಸಂಪೂರ್ಣ ಡಿಜಿಟಲೀಕರಣಗೊಳಿಸುತ್ತಿದ್ದೇವೆ ಎಂದು ತಿಳಿಸಿದರು.

ನೂತನ ಡಿಜಿಟಲೀಕರಣ ವ್ಯವಸ್ಥೆಯಲ್ಲಿ ಅಪಘಾತ ಪ್ರಕರಣಗಳ ವರದಿ ಸಂಪೂರ್ಣ ಪ್ರಕ್ರಿಯೆ ಕ್ರಮೇಣ ಆನ್‌ಲೈನ್‌ಗೆ ಬದಲಾಗುತ್ತದೆ. ಈ ಮೂಲಕ ಹಸ್ತಚಾಲಿತ ಕಾಗದ ಪತ್ರಗಳಿಗೆ ಬದಲಾಗಿ ಸ್ವಯಂ ಚಾಲಿತ ಕಾರ್ಯಚರಣೆಗಳನ್ನು ಅಪ್‌ಡೇಟ್ ಮಾಡಲಾಗುವುದು ಎಂದರು.

ಐಡಿಎಆರ್ ಹಾಗೂ ಇಡಿಎಆರ್ ಪ್ಲಾಟ್ ಫಾರ್ಮ್ ಗಳು ಪೊಲೀಸ್, ಆರೋಗ್ಯ, ಸಾರಿಗೆ, ವಿಮೆ ಮತ್ತು ರಸ್ತೆ ಸಂಚಾರದ ವಿವಿಧ ಇಲಾಖೆಗಳನ್ನು ಸಂಯೋಜಿಸುತ್ತದೆ. ಇದರಿಂದ ವಿವರವಾದ ದಾಖಲೆ ನಿರ್ವಹಣೆಯನ್ನು ಸುಗಮಗೊಳಿಸಬಹುದು ಎಂದು ಶಿವಶಂಕರ್ ಅಭಿಪ್ರಾಯಪಟ್ಟರು.

ಅಪಘಾತ ಪ್ರಕರಣ ವರದಿ ವ್ಯವಸ್ಥೆಯನ್ನು ಸುಗಮಗೊಳಿಸಲಾಗುವುದು. ಇದರಿಂದ ತನಿಖಾಧಿಕಾರಿಗಳಿಗೆ ತನಿಖಾ ಪ್ರಕಿಯೆ ಮೇಲೆ ಹೆಚ್ಚು ಗಮನ ಹರಿಸಲು ಸಹಕಾರವಾಗುತ್ತದೆ ಎಂದು ಹೇಳಿದರು.

ಡಿಜಿಟಲ್ ಡೇಟಾ ಕೇಂದ್ರದಲ್ಲಿ ಅಪಘಾತ ನಿರ್ವಹಣೆ, ರಸ್ತೆ ಸುರಕ್ಷತೆ ಬಗ್ಗೆ ವಿವಿಧ ಏಜೆನ್ಸಿಗಳ ನಡುವೆ ತಡೆರಹಿತ ಮಾಹಿತಿ ಹಂಚಿಕೆ ಸುಗಮಗೊಳ್ಳುತ್ತದೆ. ಐಡಿಎಆರ್‌ನಲ್ಲಿ ಅಪಘಾತ ಸ್ಥಳಕ್ಕೆ ಭೇಟಿ ನೀಡುವ ಸಿಬ್ಬಂದಿಗಳು ಎಫ್‌ಐಆರ್ ಅಂತಿಮಗೊಳಿಸಿದ ನಂತರ ಪ್ರಾಥಮಿಕ ವಿವರವನ್ನು ತಕ್ಷಣವೇ ಅಪ್ ಲೋಡ್ ಮಾಡುತ್ತಾರೆ ಎಂದು ಹೇಳಿದರು.

ಇಡಿಎಆರ್‌ನಲ್ಲಿ ಪ್ರಕರಣದ ಪ್ರೊಫೈಲ್ ಇರುವ ಡಿಜಿಟಲ್ ವರದಿಯನ್ನು ಅಪ್ ಲೋಡ್ ಮಾಡಲಾಗುತ್ತದೆ. ಅಪಘಾತ ಸ್ಥಳಗಳ ಛಾಯಾಚಿತ್ರ, ವಿಡಿಯೋ ಪುರಾವೆ, ಜಿಪಿಎಸ್ ಸ್ಥಳದ ವಿವರ, ವಾಹನದ ಮಾಹಿತಿಯನ್ನು ಸೆರೆ ಹಿಡಿದು ಪ್ರಕರಣ ನಡೆದ ದಿನದಂದೆ ಕೇಂದ್ರಿಕೃತ ಡಿಜಿಟಲ್ ಕೇಂದ್ರಕ್ಕೆ ಅಪ್ ಲೋಡ್ ಮಾಡಲಾಗುತ್ತದೆ ಎಂದು ಶಿವಶಂಕರ್ ಮಾಹಿತಿ ನೀಡಿದರು.

ಡಿಜಿಟಲ್ ದಾಖಲೆಗಳಿಗೆ ಪರಿವರ್ತನೆಗೊಳ್ಳುವುದರಿಂದ ಪಾರದರ್ಶಕತೆ ಇರುತ್ತದೆ. ಕಾನೂನು ಅನುಸರಣೆ ಗಮನಾರ್ಹವಾಗಿ ಸುಧಾರಿಸುತ್ತದೆ, ಸುಧಾರಿತ ಕ್ರಮದಿಂದ ದಾಖಲಾತಿಗಳನ್ನು ಕುಶಲತೆಯಿಂದ ನಿರ್ವಹಿಸಬಹುದು. ಇದರಿಂದ ವಾಹನ ನೋಂದಣಿ ವಿವರ ಬದಲಾವಣೆ, ಚಾಲಕರ ಹೆಸರು ತಪ್ಪಾಗಿ ಬದಲಾಯಿಸುವುದೆಲ್ಲಾ ಕಷ್ಟಕರವಾಗುತ್ತದೆ.

ವಿಮಾ ಹಕ್ಕು ಪ್ರಕಿಯೆಗಳನ್ನು ಸುಗಮಗೊಳಿಸುವ ಮೂಲಕ ಬಾಕಿ ಇರುವ ನ್ಯಾಯಾಲಯದ ವಿಧಿವಿಧಾನಗಳಿಗೆ ವೇಗ ದೊರೆಯುತ್ತದೆ. ಇದರಿಂದ ನಾಗರಿಕರಿಗೆ ಬಹುಪಯೋಗಿಯಾಗುತ್ತದೆ.

ಆನ್‌ಲೈನ್ ಔಷಧ ಮಾರಾಟ ನಿಷೇಧಕ್ಕೆ ಆಗ್ರಹ

ಮೇ20ರಂದು ರಾಷ್ಟ್ರವ್ಯಾಪಿ ಔಷಧ ಬಂದ್‌ಗೆ ಮೈಸೂರು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘ ಬೆಂಬಲ

ಕಪ್ಪುಪಟ್ಟಿ ಧರಿಸಿ ಔಷಧ ಮಾರಾಟ ಮಾಡಲು ನಿರ್ಧಾರ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಎಂ.ರಾಜು ಮಾತನಾಡಿದರು.

ಮೈಸೂರು,ಮೇ.17(ಎಂಟಿವೈ)– ಆನ್‌ಲೈನ್‌ನಲ್ಲಿ ಔಷಧ ಮಾರಾಟ ನಿಷೇಧಿಸಿ ಅಸಹಜ ರಿಯಾಯಿತಿಗಳಿಗೆ ಕಡಿವಾಣ ಹಾಕುವಂತೆ ಒತ್ತಾಯಿಸಿ, ಮೇ.20ರಂದು ಔಷಧಿ ವ್ಯಾಪಾರಿಗಳು ರಾಷ್ಟ್ರವ್ಯಾಪಿ ಕರೆ ನೀಡಿರುವ ಬಂದ್‌ಗೆ ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘ ಬೆಂಬಲಿ ಸೂಚಿಸಿದ್ದು, ಕಪ್ಪು ಪಟ್ಟಿ ಧರಿಸಿ ಗ್ರಾಹಕರಿಗೆ ಔಷಧಿ ವಿತರಿಸುವ ಕಾರ್ಯದಲ್ಲಿ ತೊಡಗಲು ನಿರ್ಧರಿಸಿದೆ.

ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿ ಸಂಘ ಅಧ್ಯಕ್ಷ ಎಂ. ರಾಜು, ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಕಳೆದ ಕೆಲವು ವರ್ಷಗಳಿಂದ ಆನ್‌ಲೈನ್ ಮೂಲಕ ಔಷಧಿ ಸರಬರಾಜು ಮಾಡುವುದು ಹೆಚ್ಚಾಗಿದೆ. ಅಲ್ಲದೆ, ಜೀವ ರಕ್ಷಕ ಔಷಧಿಗಳನ್ನು ಮಿತಿ ಮೀರಿದ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ವಿವಿಧ ಆ್ಯಪ್‌ಗಳು ಅಸಹಜ ರೀತಿಯಲ್ಲಿ ರಿಯಾಯಿತಿ ನೀಡುವ ಮೂಲಕ ಔಷಧ ವ್ಯಾಪಾರಿಗಳನ್ನು ಸಂಕಷ್ಟಕ್ಕೆ ಸಿಲುಕಿಸುವಂತೆ ಮಾಡಿದೆ. ಆನ್‌ಲೈನ್‌ಗಳ ಮೂಲಕ ಸರಬರಾಜಾಗುತ್ತಿರುವ ಔಷಧಿಯಿಂದ ಸಾರ್ವಜನಿಕರು ಹಾಗೂ ರೋಗಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅನಧಿಕೃತ ಆನ್‌ಲೈನ್ ಔಷಧ ಮಾರಾಟ ಹಾಗೂ ಆ್ಯಪ್‌ಗಳು ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಕಾಯ್ದೆಯನ್ನು ಉಲ್ಲಂಘಿಸುತ್ತಿರುವ ಕುರಿತು ಕೆಪಿಆರ್‌ಡಿಎ ಸಂಸ್ಥೆ ಹಾಗೂ ನಮ್ಮ ಸಂಘವು ಆಹಾರ ಸುರಕ್ಷ ಔಷಧ ಆಡಳಿತ (ಎಫ್‌ಡಿಎ) ಆಯುಕ್ತರಿಗೆ ಅನೇಕ ಬಾರಿ ವಿವರವಾದ ಮನವಿಗಳನ್ನು ಸಲ್ಲಿಸಿದ್ದೇವೆ ಎಂದರು.

ಈ ನಿಟ್ಟಿನಲ್ಲಿ ನಮ್ಮ ಮನವಿಗಳಿಗೆ ಸ್ಪಂದಿಸಿದ ಎಫ್‌ಡಿಎ ಆಯುಕ್ತರು, 2026 ಮಾರ್ಚ್ 3ರಂದು ಐತಿಹಾಸಿಕ ಸುತ್ತೋಲೆಯನ್ನು ಹೊರಡಿಸಿ, ಕರ್ನಾಟಕದ ಎಲ್ಲಾ ಅಮಲು ಜಾರಿ ಅಧಿಕಾರಿಗಳಿಗೆ ಅನಧಿಕೃತ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ, ನಿರ್ದೇಶನ ನೀಡಿದ್ದಾರೆ. ಈ ಸಂಬಂಧ ಅಮಲು ಜಾರಿ ಅಧಿಕಾರಿಗಳು ಹಂತ ಹಂತವಾಗಿ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಇನ್ನು ನಮ್ಮ ಸಂಘವು ಅನಧಿಕೃತ ಆನ್‌ಲೈನ್ ಫಾರ್ಮಸಿಗಳು, ಕಾನೂನು ಬಾಹಿರ ಔಷಧ ಡೆಲಿವರಿ ವ್ಯವಸ್ಥೆಗಳು ಹಾಗೂ ಅಸಹಜ ರಿಯಾಯಿತಿಗಳ ವಿರುದ್ಧ ತನ್ನ ಹೋರಾಟವನ್ನು ಮುಂದುವರಿಸುವುದರ ಜೊತೆಗೆ, ಸಾರ್ವಜನಿಕರಿಗೆ ನಿರಂತರ ಸೇವೆ ನೀಡಲು ಬದ್ಧವಾಗಿದೆ. ಆನ್‌ಲೈನ್ ಮೂಲಕ ಔಷಧಿ ವ್ಯಾಪಾರ ನಿಷೇಧಿಸುವಂತೆ ಆಗ್ರಹಿಸಿ ಮೇ 20ರಂದು ಔಷಧಿ ವ್ಯಾಪಾರಿಗಳು ರಾಷ್ಟ್ರವ್ಯಾಪಿ ಬಂದ್ ನಡೆಸಲು ಕರೆ ನೀಡಿದ್ದಾರೆ ಎಂದು ಅವರು ತಿಳಿಸಿದರು,

ಗ್ರಾಹಕರಿಗೆ, ರೋಗಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಾರದೆಂಬ ದೃಷ್ಟಿಯಿಂದ ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘ ವಹಿವಾಟು ಬಂದ್ ಮಾಡದೆ, ಕಪ್ಪುಪಟ್ಟಿ ಧರಿಸಿ ಔಷಧಿ ವಿತರಣೆಯಲ್ಲಿ ಕಾರ್ಯನಿರ್ವಹಿಸುವುದಾಗಿ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ಕಾರ್ಯಾಧ್ಯಕ್ಷ ಎಸ್.ದೇವರಾಜ್, ಕಾರ್ಯದರ್ಶಿ ಸಿ.ಕೆ.ಅರುಣ್, ಖಜಾಂಚಿ ಮನ್ಸೂರ್ ಅಹಮದ್‌ಖಾನ್, ಉಪಾಧ್ಯಕ್ಷ ಎಸ್.ಉಮೇಶ್, ಜಂಟಿ ಕಾರ್ಯದರ್ಶಿ ಹೆಚ್.ವಿ.ಚಂದ್ರಶೇಖರ್ ಇದ್ದರು.

‘ಸಾರ್ಥಕ ಬದುಕು’ ಆತ್ಮಕಥನ ಬಿಡುಗಡೆ

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಮಾನಸಿಕ ಖಿನ್ನತೆಯಿಂದ ಬಳಲುವವರ ಗುರುತಿಸುವ ತರಬೇತಿ: ಸುತ್ತೂರು ಶ್ರೀಗಳು



ಮೈಸೂರಿನ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಸಭಾಂಗಣದಲ್ಲಿ ಮಾನಸಿಕ ಆರೋಗ್ಯ ಕಡಬಮ್ ಎಂ.ರಮೇಶ್ ಅವರ ‘ಸಾರ್ಥಕ ಬದುಕು’ ಆತ್ಮಕಥನವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಬಿಡುಗಡೆಗೊಳಿಸಿದರು.

ಮೈಸೂರು, ಮೇ 17(ಜಿಎ)– ಕಡಬಮ್ಸ್ ಸಮೂಹ ಸಂಸ್ಥೆ ವತಿಯಿಂದ ಮೈಸೂರಿನ ವಿಜಯನಗರದಲ್ಲಿರುವ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಸಭಾಂಗಣದಲ್ಲಿ ಮಾನಸಿಕ ಆರೋಗ್ಯ ಕಡಬಮ್ ಎಂ.ರಮೇಶ್ ಅವರ ‘ಸಾರ್ಥಕ ಬದುಕು’ ಆತ್ಮಕಥನವನ್ನು ಸುತ್ತೂರು ವೀರಸಿಂಹಾಸನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಇತ್ತೀಚೆಗೆ ಮಾನಸಿಕ ಖಿನ್ನತೆ ಹೆಚ್ಚಾಗುತ್ತಿದ್ದು, ಜನರು ಇದನ್ನು ಗಮನಿಸಿ ಚಿಕಿತ್ಸೆ ಕೊಡಿಸದೇ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಹೀಗಾಗಿ ಮಾನಸಿಕ ಖಿನ್ನತೆಗೆ ಒಳಗಾದವರು ಚಿಕಿತ್ಸೆ ದೊರೆಯದೇ ಆತ್ಮಹತ್ಯೆ ಮಾಡಿಕೊಳ್ಳುವ ಘಟನೆ ನಡೆಯುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಯುವಕನಿಗೆ ದೊಡ್ಡ ಪ್ರಮಾಣದಲ್ಲಿ ತಲೆ ನೋವು ಇತ್ತು ನಿತ್ಯ ತಾಯಿಗೆ ಅದನ್ನು ಹೇಳಿಕೊಳ್ಳುತ್ತಿದ್ದ. ಒಮ್ಮೆ ಇದ್ದಕ್ಕಿದ್ದಂತೆ ಎರಡನೇ ಮಹಡಿಯಿಂದ ಜಿಗಿದು ಮೃತಪಟ್ಟಿದ್ದಾನೆ. ಅದೇ ರೀತಿ ಮತ್ತೊಂದು ಘಟನೆಯಲ್ಲಿ ಮಹಿಳಾ ಕಾಲೇಜಿನಲ್ಲಿ ವಿದ್ಯಾರ್ಥಿನಿ ಹಾಸ್ಟೆಲ್‌ನಲ್ಲಿ ಇರಲು ಇಷ್ಟವಿಲ್ಲದೇ ಮಾನಸಿಕ ಖಿನ್ನತೆಯಿಂದ ಆತ್ಮಹತ್ಯೆಗೆ ಒಳಗಾದರು. ಹೀಗೆ ಇತ್ತೀಚೆಗೆ ಮಾನಸಿಕ ಖಿನ್ನತೆ ಹೆಚ್ಚಾಗುತ್ತಿದ್ದು, ಆತ್ಮಹತ್ಯೆ ಮಾಡಿಕೊಳ್ಳುವ ಘಟನೆ ನಡೆಯುತ್ತಿವೆ ಎಂದು ತಿಳಿಸಿದರು.

ಜೆಎಸ್‌ಎಸ್‌ನ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಕೆಲ ಶಿಕ್ಷಕರಿಗೆ ಮಾನಸಿಕ ಖಿನ್ನತೆಯಿಂದ ಬಳಲುವವರನ್ನು ಗುರುತಿಸುವ ತರಬೇತಿ ಕೊಡಿಸಲಾಗುತ್ತಿದೆ. ಅಲ್ಲದೇ ಅಂತವರಿಗೆ ಸಮಾಧಾನ, ಸಮಾಲೋಚನೆ, ಮಾನಸಿಕ ಧೈರ್ಯ ತುಂಬಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗ್ರಾಮಾಂತರ ಮಟ್ಟದ ಶಿಕ್ಷಣ ಸಂಸ್ಥೆಗಳಿಗೂ ಇದನ್ನು ವಿಸ್ತರಿಸಲಾಗುವುದು ಎಂದರು.

ಕಡಬಮ್ಸ್ ಸಂಸ್ಥೆಯಿಂದ ತಮ್ಮ ಆಸ್ಪತ್ರೆಗಳಲ್ಲಿ ಮನೋರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಿ ಪುನರ್ವಸತಿ ಕಲ್ಪಿಸಿ ಮತ್ತೆ ಅವರನ್ನು ಸಮಾಜಕ್ಕೆ ಮರಳಿಸುತ್ತಿದ್ದಾರೆ. ಸಾಕಿದ ತಂದೆ ತಾಯಿಗಳನ್ನೇ ದೂರವಿಡುವ ಇಂದಿನ ಸಮಾಜದಲ್ಲಿ ತಮಗೆ ಆಸರೆಯಾದ ವ್ಯಕ್ತಿಯನ್ನು ನೆನಪಿಸಿಕೊಳ್ಳುವುದು ಭಾರತೀಯ ಸಂಸ್ಕೃತಿಯ ದೊಡ್ಡ ಹೆಗ್ಗುರುತು ಎಂದರು.

ಮಾಜಿ ಶಾಸಕ ಎಸ್.ಎ. ರಾಮದಾಸ್ ಅವರು ಮಾತನಾಡಿ, ಮನೋರೋಗಕ್ಕೆ ಚಿಕಿತ್ಸೆ ನೀಡುವುದಕ್ಕಿಂತ ಅದರ ವಿರುದ್ಧ ಜಾಗೃತಿ ಮೂಡಿಸಿ ಮನೋರೋಗಗಳು ಬಾರದಂತೆ ಜಾಗೃತಿ ವಹಿಸುವುದು ಮುಖ್ಯವಾಗಿದೆ. ಅಲ್ಲದೇ ರೋಗಿಗಳು ಹೆಚ್ಚಾಗಲು ಕಾರಣವೇನು ಎಂಬುದರ ಕುರಿತು ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಮುಂದಿನ ಆರು ತಿಂಗಳಲ್ಲಿ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಿದೆ. ಕಡಬಮ್ಸ್ ಸಂಸ್ಥೆ ಈ ಔಟ್‌ರೀಚ್ ಕಾರ್ಯಕ್ರಮವನ್ನು ಮೈಸೂರಿನಿಂದಲೇ ಆರಂಭಿಸಬೇಕೆಂದು ಮನವಿ ಮಾಡಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಾತನಾಡಿ, ಮಾನಸಿಕ ಆರೋಗ್ಯ ದೇಶದಲ್ಲಿಯೇ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾದ ಕ್ಷೇತ್ರವಾಗಿದೆ. ಪ್ರಾಚೀನ ಭಾರತದ ಸಂಸ್ಕೃತಿಯಲ್ಲಿ ಇದಕ್ಕೆ ಪರಿಹಾರವಿತ್ತು. ಆದರೆ ಕ್ರಮೇಣ ಅದರ ಬಳಕೆ ಕಡಿಮೆಯಾಗಿದೆ. ಇಂತಹ ಆರೋಗ್ಯ ಜ್ಞಾನವನ್ನು ಇಂದಿಗೂ ಬಳಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಎಚ್.ಎನ್. ಶ್ರೀಕಂಠಯ್ಯ, ಕರೂರ್ ವೈಶ್ಯ ಬ್ಯಾಂಕ್ ಲಿಮಿಟೆಡ್‌ನ ನಿರ್ದೇಶಕ ಎಂ.ವಿ. ಶ್ರೀನಿವಾಸಮೂರ್ತಿ, ಬೆಳಗಾವಿಯ ರಿಟಾ, ಕೃತಿಯ ಕರ್ತೃ, ಕಡಬಮ್ಸ್ ಗ್ರೂಪ್ ಅಧ್ಯಕ್ಷ ಕಡಬಮ್ ಎಂ.ರಮೇಶ್, ಪುತ್ರರಾದ ಕಡಬಮ್ ಸಂದೇಶ್, ಶ್ರೇಯಸ್ ಕಡಬಮ್ಸ್, ಪುತ್ರಿಯರಾದ ನೇಹಾ, ದಿವ್ಯಾ ಕಡಬಮ್ಸ್ ಮತ್ತಿತರರು ಉಪಸ್ಥಿತರಿದ್ದರು.

ಸಂಚಾರ ನಿಯಮ ಬಗ್ಗೆ ಅರಿವು ಮೂಡಿಸಿದ ಹೆರಿಟೇಜ್ ರ್‍ಯಾಲಿ

50ಕ್ಕೂ ಹೆಚ್ಚು ಕಾರುಗಳು ರ್‍ಯಾಲಿಯಲ್ಲಿ ಭಾಗಿ



ಮೈಸೂರು ಹೆರಿಟೇಜ್ ರ್‍ಯಾಲಿಗೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿದರು.

ಮೈಸೂರು, ಮೇ 17(ಜಿಎ)–ಮೈಸೂರು ಹೆರಿಟೇಜ್ ರ್‍ಯಾಲಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಮೈಸೂರಿನ ಒಡೆಯರ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಆವರಣದಲ್ಲಿ ಎಆರ್‌ಡಿ ಸಂಸ್ಥೆಯಿಂದ ಸಂಚಾರ ನಿಯಮಪಾಲನೆ ಕುರಿತು ಅರಿವು ಮೂಡಿಸಲು ಆಯೋಜಿಸಿದ್ದ ಮೈಸೂರು ಹೆರಿಟೇಜ್ ರ್‍ಯಾಲಿಗೆ ಯದುವೀರ್ ಹಸಿರು ನಿಶಾನೆ ತೋರಿದರು.

ನಂತರ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ 50ಕ್ಕೂ ಹೆಚ್ಚು ಕಾರುಗಳು ಒಡೆಯರ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಆವರಣದಿಂದ ಹೊರಟು ಕಡಕೊಳದವರೆಗೆ ತೆರಳಿ ಮರಳಿ ಸ್ವಸ್ಥಾನ ತಲುಪಿದವು. ಅದರೊಟ್ಟಿಗೆ ಇಲ್ಲಿಯೇ 1945 ವಿಟೇಂಜ್ ಕಾರು ಮತ್ತು ಇತ್ತೀಚಿನ ಸೇರಿದಂತೆ 23 ಕಾರುಗಳು ಪ್ರದರ್ಶನ ಇರಿಸಲಾಗಿತ್ತು ಅವುಗಳು ಎಲ್ಲರ ಗಮನ ಸೆಳೆಯಿತು.

ಈ ವೇಳೆ ಆಯೋಜಕ ಎಆರ್‌ಡಿ ಸಂಸ್ಥೆಯ ಸಂಸ್ಥಾಪಕರಾದ ನಮ್ರತ್ ಮತ್ತು ಅರುಣ್ ಮಾತನಾಡಿ, ವಾಹನ ಸವಾರರು ಇತ್ತೀಚೆಗೆ ಸಂಚಾರ ನಿಯಮ ಪಾಲಿಸದೇ ಅಪಘಾತಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಅವರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ರ್‍ಯಾಲಿ ಆಯೋಜಿಸಿದ್ದೇವೆ. ಅದರಲ್ಲಿ ಮೋಟರ್ ಸ್ಪೋರ್ಟ್ಸ್ ಕಾರು ಗಳ ಬಗ್ಗೆ ಜನರಿಗೆ ಅರಿವು ಕಡಿಮೆ ಇರುವುದರಿಂದ ಅವುಗಳ ಬಗ್ಗೆಯೂ ಅರಿವು ಮೂಡಿಸಲಾಗುತ್ತಿದೆ ಎಂದರು.

ನಾಳೆ ಸಹಕಾರಿಗಳಿಗೆ ವಿಷಯಾಧಾರಿತ ತರಬೇತಿ

ಮೈಸೂರು: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮ ವತಿಯಿಂದ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಮೇ 19 ರಂದು ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ಅಧ್ಯಕ್ಷ ಹೆಚ್.ವಿ.ರಾಜೀವ್ ಉದ್ಘಾಟಿಸಲಿದ್ದಾರೆ. ನಿಗಮದ ವೃತ್ತಿಪರ ನಿರ್ದೇಶಕ ಬಿ.ಮಹದೇವಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.